ಹಿತ್ತಲಗಿಡ

ಚಾತುರ್ಮಾಸಿಕ

Vol. 3 No.1, January - March, 1998 (New)
(ಸೈರು ೪, ಕೊಯಿಲು ೧, ೧೯೯೮)

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆಗಳು, ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ ವಿವಿಧತೆ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಬಿಡಿ ಪತ್ರಿಕೆ : ರೂ. 20/-



ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ

ಹಿತ್ತಲಗಿಡ

Vol. 3, No.1, January - March, 1998 (New)

(ಪೈರು ೪, ಕೊಯಿಲು ೧, ೧೯೯೮)

'ಹಿತ್ತಲಗಿಡ' ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆಗಳು, ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ ವಿವಿಧತೆ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಈ ಸಂಚಿಕೆಯಲ್ಲಿ

ಸಂಪಾದಕ ಮಂಡಳಿ

ಗೌರವ ಸಂಪಾದಕ :

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಸಹಾಯಕ ಪ್ರಾಧ್ಯಾಪಕ, ಕೃಷಿ ಅರ್ಥಶಾಸ್ತ್ರ ವಿಭಾಗ, ಕೃಷಿ ವಿ.ವಿ.ನಿಲಯ, ಜಿ.ಕ.ವಿ.ಕೆ., ಬೆಂಗಳೂರು - 560 065

ಉಪ ಸಂಪಾದಕರು :

ತೇಜಸ್ವಿನಿ ಶರ್ಮ ಮತ್ತು ಬಿ.ಎ. ಅನಿಲ್ ಕೌಶಿಕ್

ಪ್ರಕಟಣಾ ಸಹಾಯಕರು :

ಕೆ.ಕೆ. ಆನಂದ್ ಮತ್ತು ನಾಗರತ್ನ ಬಿ.ಕೆ.

ಲೇಖಕರ ಬಳಗ :

ಎ.ಪಿ. ಚಂದ್ರಶೇಖರ್, ಎ.ಎನ್. ಚನ್ನಪ್ಪ ಗೌಡರ್, ಬಿ. ಬಸವರಾಜ್, ಚನ್ನಬಸವ ರೆಡ್ಡಿ ಹೆಂಬರಾಳ, ಬನು ದೇಶಪಾಂಡೆ, ಮೊ.ರಾ. ಕೃಪಾಶಂಕರ್

ಹಿತ್ತಲ ಗಿಡದ ಪೋಷಕರು :

ಪ್ರೊ. ಅನಿಲ್ ಕೆ. ಗುಪ್ತ, ಮತ್ತು ಸೃಷ್ಠಿ (SRISTI - Society for Research and Initiatives for Sustainable Technologies and Institutions)

ಐ.ಐ.ಎಂ. ಅಹಮದಾಬಾದ್

ಸಂಪಾದಕೀಯ

ಕರ್ನಾಟಕದಲ್ಲಿ ರೈತರು ತಮ್ಮ ಸಂಕಷ್ಟಗಳಿಗೆ ಪರಿಹಾರ ಕಾಣದೇ ಆತ್ಮಹತ್ಯೆಗೆ ಮೊರೆ ಹೊಕ್ಕಿರುವಂತಾಗಿರುವುದು ನಮ್ಮ ಕೃಷಿ ತಂತ್ರಜ್ಞಾನ ವ್ಯವಸ್ಥೆ, ಆ ಬಗೆಗಿನ ನೀತಿ ನಿಲುವುಗಳು, ಒಟ್ಟಾರೆ ಕೃಷಿ ಅಭಿವೃದ್ಧಿಗೆ ನಾವು ಆರಿಸಿಕೊಂಡಿರುವ ಅಭಿವೃದ್ಧಿ ಕಲ್ಪನೆ ಮತ್ತು ಮಾದರಿಗಳನ್ನೇ ತೀವ್ರವಾಗಿ ಪುನರ್ ಪರಿಶೀಲಿಸುವಂತೆ ಮಾಡಬೇಕಾಗಿದೆ. ಕಳೆದ ವರ್ಷ ಕೋಲಾರದ ಟೊಮ್ಯಾಟೋ ಬೆಳೆಗಾರರು ಪಟ್ಟ ಬವಣೆಯಿರಬಹುದು, ಆಂಧ್ರದ ಹತ್ತಿ ಬೆಳೆಗಾರರ ಅವಸ್ಥೆಯಿರ ಬಹುದು ಅಥವಾ ಉತ್ತರ ಕರ್ನಾಟಕದ ತೊಗರಿ ಬೆಳೆಗಾರರ ಸಂಕಷ್ಟವಿರಬಹುದು ಇವೆಲ್ಲದರ ಹಿಂದಿನ ಸಾಮಾನ್ಯ ಅಂಶಗಳು ನಮಗೆ ಈಗ ಸ್ಪಷ್ಟವಾಗಬೇಕಾಗಿದೆ. ಏಕ ಬೆಳೆ ಪದ್ಧತಿ, ಹೊರಗಿನ ಮಾರುಕಟ್ಟೆ, ಮೇಲೆ (ಕ್ರಿಮಿಕೀಟ ನಾಶಕಗಳಿಗಿರಬಹುದು ಬೆಳೆದ ಉತ್ಪನ್ನಗಳಿಗಿರಬಹುದು) ತೀವ್ರ ಅವಲಂಬನೆ, ಪರಿಸರ ಸಮತೋಲನ ಕಾಪಾಡುವ ಬಗ್ಗೆ ಅಷ್ಟೇ ತೀವ್ರ ನಿರ್ಲಕ್ಷ, ಮಿಗಿಲಾಗಿ, ತೃಪ್ತಿ, ಆಹಾರಭದ್ರತೆಗಳಿಗಿಂತ ಆರ್ಥಿಕ, ಲಾಭದಾಯಕತೆಯ ಮೇಲಿನ ವ್ಯಾಮೋಹ, ಇವೆಲ್ಲಾ ಈ ದುಃಖಾಂತ್ಯದ ಸಾಮಾನ್ಯ ಅಂಶಗಳು. ಇದಕ್ಕೆ ಕಳಪೆ ಕೀಟನಾಶಕ ವರ್ತಕರನ್ನು ಸರ್ಕಾರ ತರಾಟೆಗೆ ತೆಗೆದುಕೊಂಡರೆ, ನಮ್ಮ ಕರ್ನಾಟಕ ರಾಜ್ಯ ರೈತ ಸಂಘ ನಮ್ಮ ಕೃಷಿ ನೀತಿಯನ್ನು ಹಾಗೆ ನವ ಜಾಗತೀಕರಣ ಶಕ್ತಿಗಳನ್ನೇ ದೂಷಿಸುತ್ತಿರುವರು. ಆದರೆ ಇಂದು ನಮಗೆ ಅತ್ಯಗತ್ಯವಾಗಿರುವ ಪರ್ಯಾಯದತ್ತ ಯಾರೂ ಚಿಂತನೆ ನಡೆಸುತ್ತಿರುವುದು ಕಂಡುಬರುತ್ತಿಲ್ಲ. ಈ ನಿಟ್ಟಿನಲ್ಲಿ ಹಿತ್ತಲಗಿಡದಂತಹ ಪುಟ್ಟ ಪ್ರಯತ್ನ ಏನಾದರೂ ದಾರಿ ತೋರಿಸುವ ಸಾಧ್ಯತೆ ಇದೆಯೇ?

ಸಂಪಾದಕೀಯ

ದೇಶೀಯ ಜ್ಞಾನ, ಸಂಸ್ಥೆಗಳು ರೈತರ ಶೋಧನೆ, ಜೀವ ವಿವಿಧತೆಗಳ ದಾಖಲಾತಿ ಮತ್ತು ವಿನಿಮಯದಂತಹ ಸೀಮಿತ ಆದರೆ ಅಷ್ಟೇ ಸ್ಪಷ್ಟ ಉದ್ದೇಶದಿಂದ ಹುಟ್ಟಿಕೊಂಡ ಈ ಪತ್ರಿಕೆ, ಈ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿಯ ಬಗ್ಗೆ ಚರ್ಚೆಗೂ ಕೈ ಹಾಕಿತು. ಇದು ಸಾಲದೆಂಬಂತೆ, ಇಂದಿನ ತಂತ್ರಜ್ಞಾನ, ರೀತಿ, ರಿವಾಜು, ನೀತಿ ನಿಯಮ ಕಾಯಿದೆಗಳು ಒಟ್ಟಾರೆ ನಮ್ಮ ಮೌಲ್ಯ ವ್ಯವಸ್ಥೆಯೇ ಜನಪರವಾಗುವುದರ ಬದಲು ವಿಮುಖವಾಗುತ್ತಿರುವಂತೆ ಕಂಡ ನಾವು "ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟುಹಾಕುವಂತಹ" ಅಗಾಧ ಗುರಿಗೆ ಪ್ರಯತ್ನಿಸುವ ವೇದಿಕೆಯಾಗಿ 'ಹಿತ್ತಲಗಿಡ' ವನ್ನು ನೋಡುವಂತಾಯ್ತು. ಈ ನಿಟ್ಟಿನಲ್ಲಿ ನಮ್ಮ ಸಾಧನೆ, ಇತಿಮಿತಿಗಳನ್ನು ಪರಿಶೀಲಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಪತ್ರಿಕೆ ತನ್ನ ಇತಿಮಿತಿಗಳಿಂದ ಮೇಲೆ ಬರುವ ಮೊದಲ ಅವಕಾಶ ದೊರೆತಿದ್ದು ಕಳೆದ ವರ್ಷದ ಅಹಮದಾಬಾದಿನಲ್ಲಿ ಜರುಗಿದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ. ಕರ್ನಾಟಕದಿಂದ ಹತ್ತು ಜನ ಸಾಮಾನ್ಯ ರೈತರನ್ನು ಕರೆದೊಯ್ದು ಅವರ ಅಸಾಮಾನ್ಯ ಶೋಧನೆಗಳನ್ನು ಮಂಡಿಸುವ ಮೂಲಕ ಎನ್ನಬಹುದು. ಇದರಿಂದ ಆ ರೈತರಲ್ಲಿ ಭರವಸೆ ಮೂಡಿ, ಪರ್‍ಯಾಯ ಅಭಿವೃದ್ಧಿ ಮಾದರಿಗೆ ಇಂದು ಅವರಿಂದ ಕಾಣಿಕೆಬರುವಂತಾಗಿರುವುದಕ್ಕೆ ಸರುವಿನ ಶ್ರೀ ದಿನೇಶ್‌ರೇ ಸಾಕ್ಷಿ. ಅಂದು ಅಹಮದಾಬಾದಿನಲ್ಲಿ ಮುಕ್ಕಡಕ ದ್ರಾವಣವನ್ನು ಭತ್ತದ ಬೆಳೆ ಸಂರಕ್ಷಣೆಗೆ ಬಳಸಿದ ಪ್ರಯೋಗಶೀಲ ತರುಣ ರೈತ ವಿವರಿಸಿದ್ದರೆ, ಇಂದು ಸಾವಯವ ಜೋಳಗ ಭತ್ತದ ಕೃಷಿ ಎಷ್ಟು ಲಾಭದಾಯಕವೆಂದು ಸಾಧಿಸಿ ತೋರಿಸಿರುವರು. ಈ ಹಿನ್ನೆಲೆಯಲ್ಲೇ ಮುಕ್ಕಡಕ ದ್ರಾವಣವನ್ನು ಮತ್ತಷ್ಟು ವ್ಯವಸ್ಥಿತಗೊಳಿಸಿ, ಅದಕ್ಕೆ ಮೌಲ್ಯ ಒದಗಿಸುವ ಉದ್ದೇಶದಿಂದ, ಅನಿಲ್ ಗುಪ್ತಾರ ನೆರವಿನಿಂದ ನಮ್ಮ ಕೃಷಿ ವಿಜ್ಞಾನಿಗಳ ನೇತೃತ್ವದಲ್ಲಿ 'ಹಿತ್ತಲಗಿಡ' ಒಂದು ಯೋಜನೆ ಹಾಕಿಕೊಂಡಿದ್ದು, ಇದಕ್ಕೆ ಪೂರ್ವಭಾವಿಯಾಗಿ ದಿನೇಶ್‌ರ ಊರಿನಲ್ಲೇ ಹಿತ್ತಲಗಿಡ ಬಳಗದ ಕಾರ್ಯಾಗಾರ ಒಂದನ್ನು ಮೇ 9 ರಂದು ಏರ್ಪಡಿಸಲಾಗಿದೆ. ಇದು 'ಹಿತ್ತಲಗಿಡ' ದಂತಹ ಪತ್ರಿಕೆ ಪರ್ಯಾಯ ಅಭಿವೃದ್ಧಿ ಮಾದರಿಯನ್ನು ರೂಪಿಸುವತ್ತ ನೀಡಬಹುದಾಗಿರುವ ಪುಟ್ಟ ಕಾಣಿಕೆಯಾಗಿರುತ್ತದೆ. ಈ ಸಂಚಿಕೆಯಲ್ಲಿ ನಾಟಿ ಪಶುವೈದ್ಯ ಪಾಲಯ್ಯನವರ ಬಗ್ಗೆ ಹಾಗೇ ಮೈಲನ ಹಳ್ಳಿಯ ವೀರಮ್ಮ ದಾಸವಾಳ ಹೂವಿನಿಂದ ನೀಡುವ ಹಲವು ಔಷಧಿಗಳ ಬಗ್ಗೆ ಲೇಖನಗಳಿವೆ. ಇಂತಹ ಸಾಮಾನ್ಯರ ಅಸಾಮಾನ್ಯ ಸಾಮರ್ಥ್ಯ, ಸೇವಾ ಮನೋಭಾವನೆಯ ಬಗ್ಗೆ ಈ ಹಿಂದೆ ಕೂಡ ಹಿತ್ತಲಗಿಡದಲ್ಲಿ ಪ್ರಕಟಿಸಲಾಗಿತ್ತು. ಅದರಲ್ಲಿ ಬೀದರ್ ಜಿಲ್ಲೆಯ ನಾಟಿ ಪಶು ಚಿಕಿತ್ಸಕ ತೇಲಗ ಅಂಬಾಜಿ ಕೂಡ ಒಬ್ಬ. ಈತನನ್ನು ಅಹಮದಾಬಾದಿನ ಸಮ್ಮೇಳನಕ್ಕೆ ಕೂಡ ಕರೆದುಕೊಂಡು ಹೋಗಿ ಈತನ ನಾಟಿ ಔಷಧಿ ಕ್ರಮಗಳನ್ನು ಪ್ರದರ್ಶಿಸಿ ಅದು ದೇಶ ವಿದೇಶಿಗರ ಪಂಡಿತರ ಪ್ರಶಂಸೆಗೂ ಪಾತ್ರವಾಗಿತ್ತು. ಇದರಿಂದ ನಮ್ಮ ಉದ್ದೇಶವೇನೋ ಈಡೇರಿತ್ತು. ಹಾಗೇ ಅಂಬಾಜಿಯಲ್ಲಿ ತನ್ನ ಬಗ್ಗೆ ಸ್ವಲ್ಪ ಆಸೆ ಕೂಡ ಬೆಳೆಯುವಂತೆ ಮಾಡಿತು. ತಾನು ನೀಡುತ್ತಿದ್ದ ಔಷಧಿಯಿಂದ ಪಕ್ಕದ ಹತ್ತಾರು ಗ್ರಾಮಸ್ಥರು ಉಪಯೋಗ ಪಡೆಯುತ್ತಿದ್ದರೂ, ಅವರಿಂದ ಬಿಡಿ ಕಾಸು ಕೂಡ ಪಡೆಯದೆ, ತಾನು ಮಾತ್ರ ದಿನಗೂಲಿ ಮಾಡಿ ಬದುಕುತ್ತಿದ್ದ ಅಂಬಾಜಿ. ಆದರೆ ಹಿತ್ತಲಗಿಡದ ಮೂಲಕ ಪ್ರಚಾರ, ಅಹಮದಾಬಾದಿನ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದು, ಇವೆಲ್ಲಾ ನೋಡಿ ಇದರಿಂದ ತನಗೆ ಸಹಕಾರವಾಗಬಹುದೆಂದು, ತನ್ನ ಊರಿನಲ್ಲೇ ಪಾಳು ಬಿದ್ದ ಒಂದೆರೆಡು ಎಕರೆ, ಸರ್ಕಾರಿ ಭೂಮಿಗೆ ಅರ್ಜಿ ಹಾಕಿ, ಅದರಲ್ಲಿ ತಾನೇ ಸ್ವತಃ ಪಶು ಚಿಕಿತ್ಸೆಗೆ ಅಗತ್ಯವಾದ ಗಿಡ ಮೂಲಿಕೆಗಳನ್ನು ಬೆಳೆಯಬಹುದೆಂಬ ಕನಸು ಕಂಡ. ಹಾಗೇ ಪತ್ರಿಕೆಗೆ ಸಹಾಯ ಕೋರಿ ಪತ್ರ ಹಾಕಿದ, ಅಂಗಲಾಚಿದ. ಈ ಬಗ್ಗೆ ನನ್ನ ಕೈಲಾದ ಸಹಾಯ, ಸಲಹೆ ನೀಡಿದೆ. ಫಲಕಾರಿಯಾದಂತೆ ಕಾಣಲಿಲ್ಲ. ಪ್ರೊಫೆಸರ್ ಗುಪ್ತಾರನ್ನು ಕೇಳಿದಾಗ ಆತನ ಔಷಧಿಗಳನ್ನು ವ್ಯವಸ್ಥಿತಗೊಳಿಸುವ, ಆ ಬಗ್ಗೆ ಆತನ ಹೆಸರಿನಲ್ಲೇ ಪೇಟೆಂಟ್ ಮಾಡಿಸುವ ಮತ್ತು ಆ ಮೂಲಕ ಆತನ ಔಷಧಿಕ್ರಮಗಳನ್ನು ವಾಣಿಜ್ಯಗೊಳಿಸಿ. ಆತನಿಗೆ ಪ್ರತಿಫಲ ನೀಡುವಂತೆ ಮಾಡೋಣ ಎಂಬ ಸಲಹೆ ಬಂತು. ಪ್ರೊಫೆಸರ್ ಗುಪ್ತಾರವರು ಮತ್ತೊರ್ವ ಕನಸುಗಾರರು. ಅಂಬಾಜಿಯ ಔಷಧಿಕ್ರಮಗಳ ವೈಜ್ಞಾನಿಕ ವಿಶ್ಲೇಷಣೆಗೆ ಸ್ವಲ್ಪ ಪ್ರಯತ್ನವನ್ನೇನೋ ಮಾಡಲಾಯಿತು. ಆದರೆ ಅದನ್ನು ವಾಣಿಜ್ಯಗೊಳಿಸಲು, ಅದರಿಂದ ಪ್ರತಿಫಲ ಪಡೆಯಲು ಅಂಬಾಜಿ ಒಪ್ಪುವುದು ಮಾತ್ರ ಕಷ್ಟಸಾಧ್ಯವಾಗಿತ್ತು. ಒಟ್ಟಾರೆ, ನಿರಾಸೆಯಿಂದ ಅಂಬಾಜಿ ತನ್ನ ಪ್ರಯತ್ನವನ್ನು ಈಗ ಕೈಬಿಟ್ಟಂತೆ ಕಾಣುತ್ತದೆ. ಹಾಗೆ ನಮ್ಮೊಡನೆ ಸಂಪರ್ಕವನ್ನೂ ಕೂಡ. ಇವೆಲ್ಲಾ ಯಾಕೆ ಹೇಳಲಾಗುತ್ತಿದೆ ಎಂದರೆ, ಹಿತ್ತಲಗಿಡ ತನ್ನೆಲ್ಲಾ ಪ್ರಯತ್ನದ ನಡುವೆಯೂ ಬರಿದೇ ಸಾಂಕೇತಿಕವಾಗಿದೆಯೇ ಹೊರತು ಸಮಗ್ರ ಪರ್ಯಾಯವಾಗಲು ಇದಕ್ಕೆ ಬಹಳಷ್ಟು ಶಕ್ತಿ ಅಗತ್ಯವಾಗಿದೆ•ಎಂಬ ವಿಚಾರವನ್ನು ನಿಮ್ಮ ಮುಂದಿಡುವ ಸಲುವಾಗಿ. ಆದರೆ ಕೇರಳದ ಸಂಸ್ಥೆಯ ವಿಜ್ಞಾನಿ ಡಾ. ಪುಷ್ಪಾಂಗದನ್ ಮತ್ತು ಆವರ ಸಹ ಉದ್ಯೋಗಿಗಳು ಅಲ್ಲಿನ 'ಕಾಣಿ' ಬುಡಕಟ್ಟು ಜನಾಂಗದ ನಾಟಿ ಔಷಧಿ ಜ್ಞಾನ ಸಂಪತ್ತನ್ನು ವ್ಯವಸ್ಥಿತಗೊಳಿಸಿ, ವಾಣಿಜ್ಯಗೊಳಿಸಿ ಆ ಮೂಲಕ ಬಂದ ಆದಾಯದಲ್ಲಿ ಅರ್ಧಾಂಶದಷ್ಟನ್ನು ಆ ಬುಡಕಟ್ಟು ಜನಾಂಗಕ್ಕೆ ಹಿಂತಿರುಗಿಸುವಂತಾಗಿದ್ದು ನಮಗೆ ಈ ನಿಟ್ಟಿನಲ್ಲಿ ಅಪಾರ ಭರವಸೆ ನೀಡಬೇಕಾಗಿದೆ. ಅದೂ ಪೇಟೆಂಟ್ ವ್ಯವಸ್ಥೆ ನಮಗೆ ಉಪಕಾರ ನೀಡುವ ಬದಲು ವಿವಾದಗಳಿಗೇ ಎಡೆಗೊಡುತ್ತಿರುವ ಈ ದಿನಗಳಲ್ಲಿ.

ಇನ್ನು ಹುಣಸೆ ಮತ್ತು ತುಳಸಿಗಳನ್ನು ಆಹಾರವಾಗಿ ಉಪಯೋಗಿಸುವ ಬಗ್ಗೆ ಎರಡು ಲೇಖನಗಳಿವೆ. ಅದೂ ಇಬ್ಬರು ಮಹಿಳೆಯರು ಬರೆದಿರುವಂತಹದ್ದು. ಮನುಷ್ಯ ಉಣ್ಣಲು ಬದುಕುವುದಿಲ್ಲ, ಅಥವಾ ಬದುಕಲು ಮಾತ್ರ ಉಣ್ಣುವುದಿಲ್ಲ. ನಮ್ಮ ಆಹಾರದಲ್ಲಿ ರುಚಿ, ಪೌಷ್ಟಿಕತೆ, ಆರೋಗ್ಯ ವಿಚಾರಗಳ ಜೊತೆಗೇ ನಾಟೀತನ, ಸಾಂಸ್ಕೃತಿಕ ಆಯಾಮಗಳೂ ಸೇರಿಕೊಂಡಿವೆ ಎನ್ನುವುದಕ್ಕೆ ಈ ಎರಡು ಲೇಖನಗಳೇ ಸಾಕ್ಷಿಯಾಗಿವೆ. ಈ ನಿಟ್ಟಿನಲ್ಲೇ ನಾಟೀತಳಿಗಳಾದ ದೊಡ್ಡ ಭೈರನೆಲ್ಲು, ಕೆಯಮೆ ಭತ್ತ, ಸಾವಯವ ಬಾಳೆ ನಮ್ಮ 'ಹಿತ್ತಲಗಿಡ ಜಾಲ'ದ ಮೂಲಕ ಬೆಳಕಿಗೆ ಬರುವಂತಾಗಿದ್ದು ಸ್ವಾಗತಾರ್ಹ.

ಹಿತ್ತಲಗಿಡದ ಪ್ರಯತ್ನದಲ್ಲಿ ಅನಿಲ್ ಕೌಶಿಕ್, ನಾಗರತ್ನರಂತಹ ಕೃಷಿ ವಿದ್ಯಾರ್ಥಿಗಳು ಭಾಗಿಯಾಗುತ್ತಿರುವುದು, ಹಾಗೇ ಪರ್ಯಾಯ ಕೃಷಿ ಬಗ್ಗೆ ಆಸಕ್ತಿ ಹೊಂದಿರುವ "ಚಿಂತನಾ ಬಳಗ" ಜಿ.ಕೆ.ವಿ.ಕೆ. ಕ್ಯಾಂಪಸ್‌ನಲ್ಲಿ ಮತ್ತೆ ಚಿಗುರುವಂತಾಗಿದ್ದು, ಮಿಗಿಲಾಗಿ ಪರಿಸರ, ಅರಣ್ಯ, ಬಂಜರು ಭೂಮಿ ಅಭಿವೃದ್ಧಿಯ ಬಗ್ಗೆ ಆಸಕ್ತಿಯಿರುವ ಖ್ಯಾತ ಕೃಷಿ ಅರ್ಥಶಾಸ್ತ್ರಜ್ಞರಾದ ಡಾ. ಎಸ್. ಬಿಸಲಯ್ಯನವರು ಉಪಕುಲಪತಿಗಳಾಗಿ ಆಯ್ಕೆಯಾಗಿರುವುದು ಬೆಂಗಳೂರು ಕೃಷಿ ವಿ.ವಿ. ನಿಲಯದಲ್ಲಿ ಹಿತ್ತಲಗಿಡದ ಬೇರು ಗಟ್ಟಿಯಾಗುವ ಸಾಧ್ಯತೆ ತೋರಿಸುತ್ತದೆ.

ಅಂತಿಮವಾಗಿ ಕೃಷಿಯ ಬಗೆಗಿನ ಒಟ್ಟಾರೆ ನಿರ್ಲಕ್ಷದಿಂದ ನೊಂದ ವೃದ್ಧ ರೈತರೋರ್ವರು, ಪತ್ರಿಕೆಯನ್ನು ಪ್ರಶಂಸಿಸುತ್ತಾ "ಇನ್ನು ಮುಂದೆ ನಿಮ್ಮ ಪತ್ರಿಕೆಯನ್ನು ಕಳಿಸಬೇಡಿ" ಎಂದು ವಿಷಾದದಿಂದ ತಿಳಿಸಿರುವುದು ನಮ್ಮ ರೈತರು ಆತ್ಮಹತ್ಯೆಗಿಳಿದಿರುವ ವಿಚಾರದಷ್ಟೇ ವ್ಯಥೆ ತಂದಿದೆ ಎಂದು ತಿಳಿಸಲು ನೋವಾಗುತ್ತದೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಬೆಂಗಳೂರು ಕೃಷಿ ವಿ.ವಿ.
ಉಪಕುಲಪತಿಗಳಾಗಿ

ಡಾ. ಸಿದ್ಧನಾಯಿಕ ಬಿಸಲಯ್ಯ

ಖ್ಯಾತ ಕೃಷಿ ಅರ್ಥ ಶಾಸ್ತ್ರಜ್ಞರು, ಅತ್ಯುತ್ತಮ ಪ್ರಾಧ್ಯಾಪಕರು, ಅರಣ್ಯ ನಿರ್ವಹಣೆ ವಿಚಾರದಲ್ಲಿ ವಿಶ್ವ ಬ್ಯಾಂಕ್‌ನ ಸಲಹೆಗಾರರು, ದಕ್ಷಿಣ ಭಾರತದಲ್ಲಿ ಸಾಮಾಜಿಕ ಅರಣ್ಯ ಮತ್ತು ಬಂಜರು ಭೂಮಿ ಅಭಿವೃದ್ಧಿ ಯೋಜನೆಗಳ ಮೌಲ್ಯ ಮಾಪಕರು ಆಗಿ ಡಾ. ಬಿಸಲಯ್ಯನವರು ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿರುವರು. ಇವರ ನೇತೃತ್ವದಲ್ಲಿ ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯು ನಮ್ಮ ರೈತರ ಸಮಸ್ಯೆಗಳಿಗೆ, ಪರಿಸರ ಸಂರಕ್ಷಣೆಗೆ ಒಟ್ಟಾರೆ ರಾಜ್ಯದ ಕೃಷಿ ಅಭಿವೃದ್ಧಿ ವಿಚಾರಗಳಿಗೆ ಹೆಚ್ಚು ಹೆಚ್ಚು ಸ್ಪಂದಿಸುವಂತಾಗಲೆಂದು "ಹಿತ್ತಲಗಿಡ" ಹಾರೈಸುತ್ತದೆ.

ಸಂ.

ದೇಶೀಯ ಜ್ಞಾನ ಸಂರಕ್ಷಕರೊಂದಿಗೆ ಪ್ರತಿಫಲ ಹಂಚಿಕೆ ಕಾಣಿ ಜನಾಂಗಕ್ಕೆ ಒಂದಿಷ್ಟು ಭರವಸೆ

ಕೇರಳದ ತಿರುವನಂತಪುರದಲ್ಲಿರುವ "ಉಷ್ಣವಲಯ ಸಸ್ಯ ತೋಟ ಮತ್ತು ಸಂಶೋಧನಾ ಸಂಸ್ಥೆ" (Tropical Botanical Garden and Research Institute) ಯಲ್ಲಿನ ವಿಜ್ಞಾನಿಗಳು "ಕಾಣಿ" ಬುಡಕಟ್ಟು ಜನಾಂಗದ ದೇಶೀಯ ಜ್ಞಾನವನ್ನು ವೈಜ್ಞಾನೀಕರಿಸಿ ಉದ್ಯಮದ ಮಟ್ಟಕ್ಕೆ ತಂದದ್ದು, ಔದ್ಯಮೀಕರಣದಿಂದ ದೊರಕುವ ಪ್ರತಿಫಲದಲ್ಲಿ ಸಮಪಾಲು ಆ ಬುಡಕಟ್ಟು ಜನಾಂಗಕ್ಕೆ ದೊರಕುವಂತೆ ಮಾಡಿದ್ದು ವಿಜ್ಞಾನ ಹಾಗೂ ದೇಶೀಯ ಜ್ಞಾನ ಕೈಜೋಡಿಸುವುದರಿಂದ ಆಗುವ ಲಾಭದ ಮಹತ್ತರ ಉದಾಹರಣೆಯೇ ಸರಿ.

1987ರಲ್ಲಿ ಈ ಟಿ.ಬಿ.ಜಿ.ಆರ್.ಐ. ಸಂಸ್ಥೆಯ ವಿಜ್ಞಾನಿಗಳು ಡಾ. ಪುಷ್ಪಾಂಗದನ್ ನೇತೃತ್ವದಲ್ಲಿ ಕೇರಳದ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸಸ್ಯ ಸಂಪನ್ಮೂಲಗಳ, ಅದರ ಕುರಿತಾದ ದೇಶೀಯ ಜ್ಞಾನದ ಕುರಿತು ಸಂಶೋಧನೆ ನಡೆಸುತ್ತಿದ್ದರು, ಈ ರೀತಿಯ ಅಧ್ಯಯನಕ್ಕಾಗಿ ಅವರು ಕಾಲ್ನಡಿಗೆ ಮಾಡುತ್ತಿದ್ದಾಗ "ಕಾಣಿ" ಬುಡಕಟ್ಟು ಜನಾಂಗದ ಜನರು ಅವರ ಜೊತೆಗೆ ಸಹಾಯಕರಾಗಿ ಹೋಗುತ್ತಿದ್ದರಂತೆ. ವಿಜ್ಞಾನಿಗಳು ಸೋತು ಸುಸ್ತಾದರೂ ಆ ಬುಡಕಟ್ಟು ಜನಾಂಗದ ಜನರು ಆಯಾಸವೇ ಇಲ್ಲದಂತಿದ್ದರಂತೆ. ಇದರ ರಹಸ್ಯ ಏನೆಂದು ವಿಜ್ಞಾನಿಗಳು ಕೇಳಿದಾಗ ತಾವು ತಿನ್ನುತ್ತಿದ್ದ "ಆರೋಗ್ಯಪಾಚ" ಎಂಬ ಹಣ್ಣನ್ನು ತೋರಿಸಿ, ಅದರ ಸೇವನೆ ತಮಗೆ ಬಲ ನೀಡುತ್ತಿರುವುದಾಗಿ ತಿಳಿಸಿದರು. ವಿಜ್ಞಾನಿಗಳೂ ಅದನ್ನು ಸೇವಿಸಿದಾಗ ಅವರಿಗೂ ಅದರ ಅನುಭವವಾಯಿತಂತೆ.

ಅನಂತರದ್ದು ವೈಜ್ಞಾನಿಕ ಅನ್ವೇಷಣೆ. *Trichopus zeylanicus* ಎಂಬ ವೈಜ್ಞಾನಿಕ ಹೆಸರಿನ ಈ "ಆರೋಗ್ಯ ಪಾಚ" ಗಿಡದ ರಾಸಾಯನಿಕ, ಔಷಧೀಯ ಗುಣಗಳನ್ನೆಲ್ಲಾ ಅಧ್ಯಯನ ಮಾಡಿ, ಅದರಲ್ಲಿನ ಔಷಧೀಯ ರಾಸಾಯನಿಕ ವಸ್ತುವನ್ನು ಹೊರತೆಗೆಯುವ ವಿಧಾನವನ್ನು ಸಂಶೋಧಿಸಿದರು. ಜೊತೆಗೆ ಈ ರಾಸಾಯನಿಕ ವಸ್ತುವನ್ನು ಮೂಲಭೂತವಾಗಿ ಹೊಂದಿದ "ಜೀವಾನಿ" ಎಂಬ ಹೆಸರಿನ ಔಷಧಿಯನ್ನು ತಯಾರಿಸುವ ವಿಧಾನವನ್ನು ಸಿದ್ಧಗೊಳಿಸಿದರು. ಈ ಔಷಧಿಯ ತಯಾರಿಕೆಗೆ ಕೊಯಮತ್ತೂರಿನ ಆರ್ಯವೈದ್ಯ ಎಂಬ ಕಂಪೆನಿ, ರೂ. ಹತ್ತು ಲಕ್ಷ ಲೈಸೆನ್ಸ್ ಹಣ ಕಟ್ಟಿ ಏಳು ವರ್ಷಗಳಿಗೆ 'ಜೀವಾನಿ' ಔಷಧಿ ತಯಾರಿಸುವ ಹಕ್ಕು ಪಡೆಯಿತು.

ಇದಿಷ್ಟು ಬಹುಶಃ ಎಲ್ಲಾದರೂ ನಡೆಯುತ್ತಿರುವ, ನಡೆಯಬಹುದಾದ ಕತೆ. ಆದರೆ, ಇಲ್ಲಿನ ಕತೆ ಮುಗಿಯಲಿಲ್ಲ ಬೆಳೆಯಿತು, ಮೂಲತಃ ಜ್ಞಾನ ನೀಡಿದವರಿಗೂ ಪ್ರತಿಫಲ ನೀಡುವ ಯೋಜನೆ ಹಾಕಿತು ಸಂಶೋಧನಾ ಸಂಸ್ಥೆ. ಅದರಂತೆ ಲೈಸೆನ್ಸ್ ಹಣದಲ್ಲಿ ಅರ್ಧಭಾಗ ಮೂಲಸಂಶೋಧಕರಾದ "ಕಾಣಿ" ಬುಡಕಟ್ಟು ಜನಾಂಗಕ್ಕೆ ನೀಡುವ ವ್ಯವಸ್ಥೆ ಮಾಡಿತು. ಆ ಜನಾಂಗ ವಾಸಿಸುವ ಪ್ರದೇಶಕ್ಕೆ ಅಗತ್ಯವಾದ ಮೂಲಭೂತ ಸೇವಾ ಸೌಲಭ್ಯಗಳನ್ನು ಒದಗಿಸುವುದಕ್ಕೆ ಈ ಹಣ ಉಪಯೋಗಿಸಲು ನೆರವಾಗುವಂತೆ, ಕಾಣಿಜನಾಂಗದವರ ಟ್ರಸ್ಟ್ ಸ್ಥಾಪಿಸಿ, ಹಣವನ್ನು ಅದಕ್ಕೊಪ್ಪಿಸಿತು. ಈ ಕೆಲಸ ಎಲ್ಲೆಡೆಯೂ ಅಗತ್ಯವಾಗಿ ನಡೆಯಬೇಕಾದ್ದು. ಬಹುರಾಷ್ಟ್ರೀಯ ಔಷಧಿ ಕಂಪೆನಿಗಳು ಮೂಲಸಂಶೋಧಕರಿಗೆ, ದೇಶೀಯ ಜ್ಞಾನ ಸಂರಕ್ಷಕರಿಗೆ ಪಾಲು ನೀಡುವ ಇಂತಹ ವ್ಯವಸ್ಥೆ ಅತ್ಯಗತ್ಯವಾಗಿ ಜಾರಿಗೆ ಬರಬೇಕು. ಈ ಪ್ರತಿಫಲ ನಿಜವಾಗಲೂ ಆ ಜನರ ಹಕ್ಕು. ಈ ಹಕ್ಕು ಪ್ರತಿಪಾದಿಸುವ ವ್ಯವಸ್ಥೆ ಇಷ್ಟು ವರ್ಷಗಳಲ್ಲಿ ಮೂಡಿಬರದಿದ್ದುದೇ ಆಶ್ಚರ್ಯ ಹಾಗೂ ದುರಾದೃಷ್ಟಕರ.

ಲೈಸೆನ್ಸ್ ಹಣದಲ್ಲಿನ ಪಾಲಿನಿಂದಾಗಿ ಕಾಣಿ ಜನಾಂಗಕ್ಕೆ ಲಾಭವಾಗಿದ್ದಷ್ಟೇ ಅಲ್ಲ. ಅನಂತರ ಈ ಆರೋಗ್ಯಪಾಚ ಸಸ್ಯ ಬೆಳೆದು ಮಾರಾಟಮಾಡುವ ವ್ಯವಸ್ಥೆಯಿಂದಾಗಿಯೂ ಅವರಿಗೆ ಲಾಭವಾಗಿದೆ. ಈ ಗಿಡ ಕಾಡಿನಲ್ಲಿ ಅದರ ಮೂಲ ವಾತಾವರಣದಲ್ಲಿ ಅರ್ಥಾತ್ ಕೇರಳದ ಪಶ್ಚಿಮ ಘಟ್ಟದಲ್ಲಿ ಮಾತ್ರ ಬೆಳೆಯಲು ಸಾಧ್ಯ. ಹಾಗಾಗಿ ಕಾಣಿ ಜನಾಂಗದವರೇ ಅದನ್ನು ಬೆಳೆಸುವುದರಲ್ಲಿ ಮೇಲುಗೈ. ಇದರಿಂದ ಉದ್ಯೋಗ ಅವಕಾಶ ದೊರೆತು, ವೈಯಕ್ತಿಕ ಸಂಪಾದನೆಗೂ ಮಾರ್ಗ ಮೂಡಿ ಬಂದಿದೆ.

[ಡಾ. ಪುಷ್ಪಾಂಗದನ್ "ಮಾನವನ ಉಳಿವಿಕೆಗಾಗಿ ಔಷಧಿ ಸಸ್ಯಗಳು" ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧದ ಸಾರಾಂಶ]

ದೇಶೀಯ ಹತೋಟಿ ಕ್ರಮಗಳು

ನಾರಾಯಣ ರೆಡ್ಡಿಯವರ ಕೀಟ ಹತೋಟಿ ಕ್ರಮಗಳು

ಅ) ಗ್ಲಾಡಿಯೋಲಸ್ ಹೂ ತಿನ್ನುವ ಹುಳು ಹತೋಟಿಗೆ :-

ಮೂರು ಕೆ.ಜಿ. ವಿಷಮಧಾರಿ *(Clerodendron inermis)* ಗಿಡದ ಎಲೆಯನ್ನು ಸಂಗ್ರಹಿಸಿಟ್ಟುಕೊಳ್ಳಿ. ಚೆನ್ನಾಗಿ ಅರೆಯಿರಿ. ಇದನ್ನು ಹತ್ತು ಲೀಟರ್ ಗಂಜಲದಲ್ಲಿ ಒಂದು ರಾತ್ರಿ ನೆನೆಯಿಡಿ. ಮರುದಿನ ಬೆಳಿಗ್ಗೆ ಚೆನ್ನಾಗಿ ಸೋಸಿರಿ. ತಿಳಿ ದ್ರಾವಣಕ್ಕೆ 200 ಲೀ. ನೀರು ಬೆರೆಸಿ ದುರ್ಬಲ ದ್ರಾವಣ ತಯಾರಿಸಿ, ಸಂಜೆಯ ವೇಳೆ ಗ್ಲಾಡಿಯೋಲಸ್ ಹೂ ಬೆಳೆಗೆ ಸಿಂಪಡಿಸಿ. ರಾತ್ರಿಯೊಳಗೆ ಹೂ ತಿನ್ನುವ ಹುಳು ದಿಕ್ಕಾಪಾಲು. ಮೇಲೆ ತಯಾರಿಸಲು ತಿಳಿಸಿದ ದ್ರಾವಣ ಒಂದೆಕ್ರೆಗೆ ಸಾಕು.

ಆ) ಕಂಬಳಿಹುಳು ಹಾಗೂ ಹಿಲಿಯೋಥಿಸ್‌ಗೆ ಕಡಿವಾಣ !

ಕಂಬಳಿ ಹುಳುವಿನ ಕಾಟ ಒಂದೆರಡು ಬೆಳೆಗಲ್ಲ. ಹಾಗೆಯೇ ಹಿಲಿಯೋಥಿಸ್ ರುಚಿ ನೋಡದ ಬೆಳೆಗಳು ಕೆಲವೇ! ಇವುಗಳನ್ನು ನಿಯಂತ್ರಿಸಲು ಈ ತಂತ್ರ ಬಳಸಬಹುದು.
ಒಂದು ಕೆ.ಜಿ ಬೆಳ್ಳುಳ್ಳಿಗೆ ಇನ್ನೂರು ಮಿ.ಲೀ. ಸೀಮೆಎಣ್ಣೆ ಸೇರಿಸಿ ಚೆನ್ನಾಗಿ ಜಜ್ಜಿ ಒಂದು ರಾತ್ರಿ ಹಾಗೇ ಬಿಡಿ. ಮಾರನೇ ದಿನ ಬೆಳಿಗ್ಗೆ ಎರಡು ಕೆ.ಜಿ. ಹಸಿಮೆಣಸನ್ನು ಚೆನ್ನಾಗಿ ಅರೆದು ಬೆಳ್ಳುಳ್ಳಿ ರಸದೊಂದಿಗೆ ಸೇರಿಸಿ. ಇನ್ನೂರು ಲೀ. ನೀರು ಬೆರೆಸಿ ಒಂದೆಕ್ರೆಗೆ ಸಿಂಪಡಿಸಿ. ಈ 'ರುಚಿಕರ' ರಸ ನಿಮ್ಮ ಬೆಳೆಯ ಮೇಲೆ ಬಿದ್ದರೆ ನಿಜಕ್ಕೂ ಹುಳುಗಳು ನಿಮ್ಮ ಬೆಳೆಯ ರುಚಿ ನೋಡದು!

ಇ) ಕೀಟ ಹತೋಟಿಗೆ ನೀಲಗಿರಿ ಎಲೆ ಹೊಗೆ ?

ಸಂಜೆಯ ವೇಳೆ ಗಾಳಿ ಬೀಸುವ ದಿಕ್ಕಿನಲ್ಲಿ (ಹೊಗೆ ಬೆಳೆಯ ಮೇಲೆ ಹಾಯುವಂತೆ) ಒಣಗಿದ ನೀಲಗಿರಿ ಎಲೆಗಳನ್ನು ಒಟ್ಟು ಸೇರಿಸಿ ಬೆಂಕಿ ಹಾಕಿದರೆ, ಸುಗಂಧಿತ ಹೊಗೆ ಬೆಳೆಯ ಮೇಲೆ ಕೂತಿರುವ ಹುಳಗಳಿಗೆ ಶಾಕ್ ನೀಡುತ್ತದೆ.

ಈ) ಕ್ಯಾರೆಟ್ ಈರುಳ್ಳಿ ಸಂಬಂಧಿಗಳೇ ?

ಈ ಪ್ರಶ್ನೆಗೆ ನಾರಾಯಣರೆಡ್ಡಿಯವರ ಉತ್ತರ ಹೌದೆಂಬ ಅನುಭವದ ಮಾತು. ಕ್ಯಾರೆಟ್ ಬೆಳೆಯ ಮಧ್ಯೆ ಒಂದೊಂದು ಸಾಲು ಈರುಳ್ಳಿ ಬಿತ್ತನೆ ಮಾಡಿದರೆ ಎರಡೂ ಬೆಳೆಗೆ ಹುಳ ಬರುವುದಿಲ್ಲವಂತೆ. ನೀವು ಕ್ಯಾರೆಟ್ ಒಂದೇ ಬೆಳೆಯುತ್ತಿದ್ದರೆ ಅದರ ಸಂಬಂಧಿಯನ್ನೂ ಬಿತ್ತನೆ ಮಾಡಿ ಫಲಿತಾಂಶ ನಮಗೆ ತಿಳಿಸಿ.

ಉ) ಬೀನ್ಸ್ ಬೆಳೆಯ ಮಧ್ಯೆ ಒಂದೊಂದು ಸಾಲು ಮುಸುಕಿನ ಜೋಳ ಬಿತ್ತಿರಿ. ಬೀನ್ಸ್ ಕಾಯಿ ಕೊರೆಯುವ ಹುಳ ಹತೋಟಿಯಾಗುವುದು.

ಹೆಚ್ಚಿನ ವಿವರಗಳಿಗೆ ನಾರಾಯಣರೆಡ್ಡಿ, ಪೌಲ್ಟ್ರಿ ಫಾರಂ, ಮರಳೇನ ಹಳ್ಳಿ, ಹಣಬೆ ಪೋಸ್ಟ್, ತಿಪ್ಪೂರು ರಸ್ತೆ, ದೊಡ್ಡಬಳ್ಳಾಪುರ ತಾಲ್ಲೂಕು. ಇವರನ್ನು ಸಂಪರ್ಕಿಸಬಹುದು.

ಸಂಗ್ರಹ : ಬಿ.ಎ. ಅನಿಲ್ ಕೌಶಿಕ್

ಜೀರಿಗೆಯಿಂದ ದೂರ್ವೆಯನ್ನು ದೂರ ಓಡಿಸಬಹುದೇ ?

ದೂರ್ವೆ ಅಥವಾ ಗರಿಕೆ *(Cynodon dactylon)* ಒಂದು ಬಹುವಾರ್ಷಿಕ ಕಳೆ. ಇದು ಜಮೀನಿಗೆ ಬಂತೆಂದರೆ ಸಂಪೂರ್ಣ ನಿವಾರಣೆ ಕಷ್ಟ. ಬೇರು ಆಳಕ್ಕಿಳಿಯುವುದರಿಂದ ಕೈಯಿಂದ ಕೀಳುವುದೂ ಪರಿಣಾಮಕಾರಿಯಲ್ಲ. ಗುಜರಾತಿನ ಮೆಹಸನಾ ಜಿಲ್ಲೆಯ ದೇವಶ್‌ಜಿ ತಾಕೂರ್ ಇದರ ನಿಯಂತ್ರಣಕ್ಕೆ ದೇಶೀ ತಂತ್ರ ರೂಪಿಸಿದ್ದಾರೆ. ಕೊಯ್ಲಾದ ನಂತರ ಉಳಿಯುವ ಜೀರಿಗೆ ಗಿಡದ ಕಾಂಡ-ಕಡ್ಡಿಗಳನ್ನು ಗರಿಕೆ ಬೆಳೆದಿರುವ ಜಾಗದಲ್ಲಿ ಭೂಮಿಯ ಮೇಲೆ ಹರಡುತ್ತಾರೆ. ಮಳೆಗಾಲದಲ್ಲಿ ನೀರು, ಹರಡಿರುವ ಜೀರಿಗೆಯ ಒಣಗಿದ ಕಡ್ಡಿಗಳಿಂದ ನುಸುಳಿ ಭೂಮಿಯೊಳಕ್ಕೆ ಸೇರುತ್ತದೆ. ರೈತರ ಪ್ರಕಾರ ಈ ರೀತಿ ಮಾಡುವುದರಿಂದ ಗರಿಕೆಯ ಬೆಳವಣಿಗೆ ಕುಂಠಿತಗೊಳ್ಳುತ್ತವೆ. ಹರಡಿರುವ ಜೀರಿಗೆ ಗಿಡಗಳು ಕೊಳೆತ ಮೇಲೆ ಮಣ್ಣಿಗೆ ಸೇರಿಸುತ್ತಾರೆ. ಆಗ ಗರಿಕೆ ನಾಶವಾಗುತ್ತದೆ. ಆದರೆ, ಹರಡಿರುವ ಜೀರಿಗೆ ಗಿಡಗಳು ಪೂರ್ತಿ ಕೊಳೆಯುವವರೆಗೂ ಯಾವ ಬೆಳೆಯನ್ನೂ ಬೆಳೆಯಬಾರದು ಎಂಬ ಅಭಿಪ್ರಾಯ ಇಲ್ಲಿಯ ರೈತರದ್ದು.

ಕಡಲೆಯಲ್ಲಿ ಮರಿಹುಳುವಿನ ಹತೋಟಿಗೆ

ಗುಜರಾತಿನ ಸಬರ್‌ಕಾಂತ ಜಿಲ್ಲೆಯ ಶ್ರೀ ಅಲಿಬೆನ್ ಮಂಕರ್‌ರವರು ಆಡುಸೋಗೆ *(Adhatoda vasica)* ಮತ್ತು ಹೊಂಗೆ *(Pongammia pinnata)* ಯನ್ನು 'ಕಡಲೆ' ಬೆಳೆಯಲ್ಲಿ ಮರಿಹುಳುವಿನ ಹತೋಟಿಗೆ ಬಳಸುತ್ತಾರೆ. ಸುಮಾರು ಐದು ಕೆ.ಜಿ.ಯಷ್ಟು ಆಡುಸೋಗೆ ಮತ್ತು ಹೊಂಗೆಯ ಸಣ್ಣ ಟೊಂಗೆ ಮತ್ತು ಎಲೆಗಳನ್ನು ಜಜ್ಜಿ ರಸ ತೆಗೆಯಬೇಕು. ಈ ರಸವನ್ನು ಮತ್ತೆ ಒಂದರ ಪ್ರಮಾಣಕ್ಕೆ ಐದು ಲೀಟರ್ ನೀರು ಬೆರೆಸಿ ಬೆಳೆಗೆ ಸಿಂಪಡಿಸಬೇಕು, ಒಂದೆಕ್ರೆಗೆ ಎಂಟರಿಂದ ಹತ್ತು ಲೀಟರ್ ದ್ರಾವಣ ಬೇಕು. ವಾರದಲ್ಲಿ ಮೂರುದಿನ ಬೆಳಿಗ್ಗೆ ಈ ದ್ರಾವಣದ ಸಿಂಪರಣೆಯಿಂದ ಸಮಾಧಾನಕರ ಫಲಿತಾಂಶ ಕಾಣಬಹುದು.

ಮೂಲ : ಹನಿಬೀ, ಸಂ.8 (4) 1997
ಅನುವಾದ : ಬಿ.ಎ. ಅನಿಲ್‌ಕೌಶಿಕ್

ಪಾಂಡಿಚೇರಿಯಲ್ಲಿ ಭತ್ತದ ಬೆಳೆಗೆ ಸಾವಯುವ ರಕ್ಷಣೆ

ಪಾಂಡಿಚೇರಿಯ ಅರವಿಂದಾಶ್ರಮಕ್ಕೆ ಸಂಬಂಧಪಟ್ಟ ಗ್ಲೋರಿಯಾ ಫಾರ್ಮ್ ಪಿಳ್ಳೆಯಾರ್ ಕುಪ್ಪಮ್ ಎಂಬಲ್ಲಿದೆ. ಇಲ್ಲಿ ಸುಮಾರು ನೂರೆಕ್ರೆ ಜಮೀನಿನಲ್ಲಿ ಇಪ್ಪತ್ತೈದು ವರ್ಷಗಳಿಂದಲೂ ಸಾವಯುವ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಅಲ್ಲಿ ತಯಾರಿಸುವ ಸಸ್ಯಜನ್ಯ ಕೀಟನಾಶಕದ ವಿವರ ಹೀಗಿದೆ.
ಐದು ಲೀಟರ್ ಗಂಜಲ, ಒಂದು ಲೀಟರ್ ಲಕ್ಕಿಗಿಡ *(Vitex negundo)* ದ ಎಲೆಯ ದ್ರಾವಣ, ಒಂದು ಲೀಟರ್ ಆಡುಸೋಗೆ *(Adhatoda vasica)* ಗಿಡದ ಎಲೆಯ ದ್ರಾವಣ, ಒಂದು ಲೀಟರ್ ಇಂಗಿನ ದ್ರಾವಣ (ನೂರು ಗ್ರಾಂ. ಇಂಗನ್ನು ಹತ್ತು ಲೀಟರ್ ನೀರಿನಲ್ಲಿ ಬೆರೆಸಿ). ಈ ಮೇಲೆ ತಿಳಿಸಿದ ನಾಲ್ಕು ದ್ರಾವಣಗಳನ್ನು ಏಳು ಲೀಟರ್ ನೀರಿನಲ್ಲಿ ಚೆನ್ನಾಗಿ ಬೆರೆಸಿರಿ. ಈ ರೀತಿ ತಯಾರಿಸಿದ ಹದಿನೈದು ಲೀಟರ್ ಸಾವಯುವ ಕೀಟನಾಶಕವನ್ನು ಮೂರು ಬಾರಿ ಸಿಂಪಡಿಸಬೇಕು. ಇದು ಒಂದೆಕ್ರೆಗೆ ಸಾಕು. ಇದನ್ನು ಸಿಂಪಡಿಸುವುದರಿಂದ ಭತ್ತದಲ್ಲಿನ ಎಲ್ಲಾ ರೀತಿಯ ಕೀಟ ಮತ್ತು ರೋಗಗಳನ್ನು ಹತೋಟಿಯಲ್ಲಿಡಬಹುದು.

ಮೂಲ : ಹನಿಬೀ ಸಂ.8 (4) 1997

ಭತ್ತದ ಬೆಳೆಯ ಕೀಟಗಳಿಗೆ ನಾಟಿ ಹತೋಟಿ ಕ್ರಮಗಳು

ಅ) ತೆನೆತಿಗಣೆ ನಿಯಂತ್ರಣಕ್ಕೆ

ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯಲ್ಲಿ ರೈತರು ಮುಂಡಿಗೆ ಚೆಟ್ಟನ್ನು ಕೋಲಿಗೆ ಕಟ್ಟುತ್ತಾರೆ. ನಂತರ ಕೋಲನ್ನು ಭತ್ತದ ಗದ್ದೆಯಲ್ಲಿ ಹುಗಿಯುತ್ತಾರೆ. ಇದರಿಂದ ತೆನೆತಿಗಣೆಗಳು ದೂರ ಹೋಗುವುದಂತೆ.

ಮೂಲ : ಹನಿಬೀ ಸಂ.7 (4)1996

ಆ) ಕಂಬಳಿಹುಳು ಹತೋಟಿಗೆ

ಬೂದಿಯನ್ನು ಭತ್ತದ ಗಿಡಗಳ ಮೇಲೆ ಎರಚುವುದರಿಂದ ಹತೋಟಿ ಸಾಧ್ಯ. ಜೊತೆಗೆ ಬೇವಿನ ಎಲೆ, ಸಣ್ಣಸಣ್ಣ ಟೊಂಗೆಗಳನ್ನು ಗದ್ದೆಯಲ್ಲಿ ಅಲ್ಲಲ್ಲಿ ಹರಡುವುದರಿಂದಲೂ ಕಂಬಳಿಹುಳು ನಿಯಂತ್ರಣ ಸಾಧ್ಯವೆಂಬುದು ತಮಿಳು ನಾಡಿನ ಕನ್ಯಾಕುಮಾರಿ ಜಿಲ್ಲೆಯ ಸಂತಾಪುರಂನ ತವಸಿನಾಥನ್‌ರ ಅನುಭವ.

ಮೂಲ : ಹನಿಬೀ ಸಂ.6 (3)1995

ಇ) ಗಿಡ ಹೇನು ಹತೋಟಿಗೆ :-

ಗಿಡಹೇನು (aphids) ಹತೋಟಿಗೆ ಇಂಗನ್ನು ಗಂಜಲದಲ್ಲಿ ಬೆರೆಸಿ ಸಿಂಪಡಿಸಬೇಕು. ಬೇರೊಂದು ಮಾರ್ಗೋಪಾಯವೆಂದರೆ ಬೆಳ್ಳುಳ್ಳಿ, ಹಸಿ ಮೆಣಸಿನಕಾಯಿ ಮತ್ತು ಇಂಗನ್ನು ನೀರಿನಲ್ಲಿ ಬೆರೆಸಿ ಭತ್ತದ ಗಿಡಗಳ ಮೇಲೆ ಸಿಂಪಡಿಸಿದರೆ ಹೇನನ್ನು ದೂರವಿಡಬಹುದು.

ಮೂಲ : ಹನಿಬೀ ಸಂ.8(1)1997
ಅನುವಾದ ಬಿ.ಎ. ಅನಿಲ್ ಕೌಶಿಕ್

ಈ) ಕಂದುಜಿಗಿ ಹುಳು, ತೆನೆತಿಗಣೆ ನಿಯಂತ್ರಣಕ್ಕೆ

ಮುಕ್ಕಡಕ (*Lasiosiphon eriocephalus*) ಎಲೆಯ ದ್ರಾವಣ ಸಿಂಪಡಿಸಿದರೆ ನಿಯಂತ್ರಣ ಸಾಧ್ಯ.

ಹತ್ತು ಲೀಟರ್ ನೀರಿಗೆ ಒಂದು ಕೆ.ಜಿ. ಮುಕ್ಕಡಕ ಸೊಪ್ಪನ್ನು ಹಾಕಿ ಒಲೆಯ ಮೇಲಿಟ್ಟು ಕುದಿಸಿದ ನಂತರ ಒಂದು ಲೀಟರ್ ಶುಭ್ರವಾದ ದ್ರಾವಣವನ್ನು ಹತ್ತು ಲೀಟರ್ ನೀರಿನಲ್ಲಿ (1:10 ಅನುಪಾತದಲ್ಲಿ) ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಮುಕ್ಕಡಕ ದ್ರಾವಣವನ್ನು ಭತ್ತದ ಗದ್ದೆಗೆ ಒಟ್ಟು ಎರಡು ಬಾರಿ - ಒಮ್ಮೆ ಅಗೇಡಿಯಲ್ಲಿ ಹಾಗೂ ಮತ್ತೊಮ್ಮೆ ನಾಟಿಯಾದ ಮೇಲೆ ಸಿಂಪಡಿಸಿದರೆ ಕಂದುಜಿಗಿ, ತೆನೆತಿಗಣೆಗಳನ್ನು ನಿಯಂತ್ರಿಸಬಹುದು.

ಬಿ.ಎಸ್. ದಿನೇಶ್, ಬಾವಿಕೈಸರು
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಉ) ಭತ್ತದಲ್ಲಿ ಕಂದು ಜಿಗಿ ಹುಳಗಳನ್ನು ನಿಯಂತ್ರಿಸಲು

ಬಸವರಾಜು ಸಂತೇಶಿವರದ ಕ್ರಮಗಳು

ಕಳೆದ ವರ್ಷ ಹಿಂಗಾರಿ ಭತ್ತದ ಬೆಳೆ "ಕಂದು ಜಿಗಿ ಹುಳು"ಗಳ ಹಾವಳಿಯಿಂದ ನಾಶವಾಗಿದ್ದು ಎಲ್ಲರಿಗೂ ತಿಳಿದ ವಿಷಯ. ರೈತರ ಕೂಗು ಪರಿಹಾರ ಕೇಳುವ ಮಟ್ಟ ತಲುಪಿತು. ಈ ಹುಳುಗಳು ಭತ್ತದ ಕಾಂಡವನ್ನು ರಂಧ್ರ ಮಾಡಿ ರಸಹೀರುತ್ತವೆ. ಆದಕಾರಣ ಭತ್ತದ ತೆನೆ ಹೊರ ಬಂದರೂ ಕಾಳುಕಟ್ಟುವುದಿಲ್ಲ. ಈ ಹುಳುಗಳನ್ನು ಸುಲಭ ರೀತಿ ಸಂಪೂರ್ಣ ಹತೋಟಿ ಮಾಡಬಹುದು.

ಒಂದನೇ ಕ್ರಮ : ಕಡಿಮೆ ಪ್ರದೇಶದಲ್ಲಿ ಬೆಳೆ ಬೆಳೆದ ರೈತರು ರಾತ್ರಿ ವೇಳೆ ಎರಡು ಬ್ಯಾಟರಿಗಳನ್ನು V ಆಕಾರಕ್ಕೆ ಹಿಡಿದು ಗದ್ದೆ ಮಧ್ಯ ಭಾಗದಲ್ಲಿ ಬೆಳಕು ಚೆಲ್ಲುತ್ತಾ ನಡೆದರೆ "ಕಂದು ಜಿಗಿಹುಳು"ಮುಂದೆ ಜಿಗಿದು ಹೋಗಲು ಪ್ರಾರಂಭಿಸುತ್ತವೆ. ಇದೇ ರೀತಿ ಕೊನೆಯವರೆಗೆ ಬೆಳಕು ಚೆಲ್ಲುತ್ತಾ ಹೋದಂತೆ ಗದ್ದೆ ಬಿಟ್ಟು ಹೊರ ಹೋಗುತ್ತವೆ. ಮತ್ತೆ ಹಿಂದಿರುಗಿ ಬರುವುದಿಲ್ಲ. ಈ ರೀತಿ ಎರಡು ದಿನ ಮಾಡಿದರೆ ಇವುಗಳ ಹತೋಟಿ ಸಾಧ್ಯ.

ಎರಡನೇ ಕ್ರಮ: ಮೇಲಿನ ಕ್ರಮ ಕೈಗೊಳ್ಳಲಾರದವರು ಹಗಲಿನಲ್ಲಿ 6-8 ಮಾರು ಉದ್ದದ ಜವಣಿಗೆ (ದೋಟಿ) ಯನ್ನು ಮಧ್ಯ ಭಾಗಕ್ಕೆ ಹಿಡಿದು ಗದ್ದೆ ಮಧ್ಯ ಭಾಗದಲ್ಲಿ ನಡೆದರೆ ಜವಣಿಗೆಯ ಎರಡು ಪಾರ್ಶ್ವಗಳೂ ಭತ್ತದ ಗದ್ದೆ ಕೊನೆ ಭಾಗದವರೆಗೂ ಇರಬೇಕು. ಜವಣಿಗೆ ಭತ್ತದ ಬೆಳೆ ಮೇಲೆ ತಾಗುವಂತೆ ಹಿಡಿದು ನಡೆದರೆ ಕಂದು ಹುಳುಗಳು ಮುಂದೆ ಮುಂದೆ ಜಿಗಿದು ಹೋಗಲು ಪ್ರಾರಂಭಿಸುತ್ತವೆ. ಕಂದು ಜಿಗಿಹುಳಗಳನ್ನು ಕೊನೆ ಭಾಗಕ್ಕೆ ಬೆದರಿಸಿಕೊಂಡು ಸಂಗ್ರಹಿಸಿ, ಗದ್ದೆ ಹೊರಭಾಗದಲ್ಲಿ ಬೆಂಕಿ ಹಾಕಿ ಒಮ್ಮೆಲೇ ಓಡಿಸಿದರೆ, ಬೆಂಕಿಗೆ ಬಿದ್ದು ಸಾಯುತ್ತವೆ. ಈ ರೀತಿ ನಾಶ ಪಡಿಸುವುದರಿಂದ ಔಷಧಿ ಸಿಂಪಡಣೆ ಅವಶ್ಯಕತೆ ಇರುವುದಿಲ್ಲ. ಆಹಾರಕ್ಕೆ ವಿಷ ಸೇರದಂತೆ, ಪರಿಸರವನ್ನು ಕಾಪಾಡಬಹುದು.

ಮೂರನೇ ಕ್ರಮ : ಗದ್ದೆ ಬಯಲುಗಳಲ್ಲಿ ಮೇಲೆ ತಿಳಿಸಿರುವ ಎರಡನೇ ಕ್ರಮದ ಪ್ರಕಾರ ಜವಣಿಗೆ (ದೋಟಿ) ಸಹಾಯದಿಂದ ಗದ್ದೆ ಬೆಳೆಯಮೇಲೆ ತಾಗುವಂತೆ ಹಿಡಿದು ಹುಳುಗಳನ್ನು ಓಡಿಸಿ. ನಂತರ ಗದ್ದೆ ಹೊರ ಭಾಗದಲ್ಲಿ ಸುತ್ತಲೂ ಒಂದು ಮೀಟರ್ ಔಷಧಿ ಸಿಂಪಡಿಸಿ. ಜಿಗಿ ಹುಳು ಮತ್ತೆ ಹಿಂದಕ್ಕೆ ಬರುವುದಿಲ್ಲ. ಈ ಕ್ರಮದಿಂದ ಔಷದಿ ಸಿಂಪಡಣೆ ಕಡಿಮೆಯಾಗುವುದಲ್ಲದೆ ಆಹಾರಕ್ಕೆ ವಿಷ ಸೇರುವುದನ್ನು ನಿಯಂತ್ರಿಸಬಹುದು.

ಕಳೆದ ವರ್ಷ ಈ ಮೂರು ಕ್ರಮಗಳನ್ನು ಅನುಸರಿಸಿ "ಕಂದು ಜಿಗಿ ಹುಳು"ಗಳನ್ನು ಹತೋಟಿಗೊಳಿಸಿ ನನ್ನ ಸುತ್ತಲಿನ ರೈತರಿಗೆ ಅರಿವುಮೂಡಿಸಿರುವೆ. ವಿಶ್ವ ವಿದ್ಯಾನಿಲಯದ ವಿಜ್ಞಾನಿಗಳಲ್ಲಿ ಮನವಿ ಏನೆಂದರೆ ಈ ಕ್ರಮಗಳನ್ನು ತಾವೂ ಪ್ರಯೋಗಿಸಿ ರೈತರಿಗೆ ಹೆಚ್ಚಿನ ಅರಿವು ಮೂಡಿಸುತ್ತೀರೆಂದು ನಂಬಿರುವೆ.

ಬಿ. ಬಸವರಾಜು, ಸಂತೇಶಿವರ, ಹಾಸನ ಜಿಲ್ಲೆ

ಊ) ಬೆಂಕಿ ರೋಗಕ್ಕೆ

ನೂರು ಗ್ರಾಂ. ಸುವರ್ಣ ಗಡ್ಡೆಯನ್ನು ಸಣ್ಣಗೆ ತುಂಡು ಮಾಡಿ ಒಂದು ಲೀಟರ್ ಕುದಿಯುವ ನೀರಿನಲ್ಲಿ ಹಾಕಿ. ಆರರಿಂದ ಎಂಟು ಗಂಟೆಗಳವರೆಗೆ ಹಾಗೆಯೇ ಬಿಡಿ. ನಂತರ ಸೋಸಿರಿ. ತಿಳಿದ್ರಾವಣಕ್ಕೆ ಹತ್ತು ಲೀಟರ್ ನೀರು ಬೆರೆಸಿ ಗದ್ದೆಗೆ ಸಿಂಪಡಿಸಿ ಎನ್ನುತ್ತಾರೆ ಕುರುವಳ್ಳಿ ಶ್ರೀ ಪುರುಷೋತ್ತಮರಾಯರು.

ಋ) ಬೇರು ಕೊಳೆಯುವ ರೋಗಕ್ಕೆ

ಭತ್ತದ ಗದ್ದೆಗೆ ಸುಣ್ಣವನ್ನು ಹಾಕುವುದರಿಂದ ಬೇರು ಕೊಳೆ ರೋಗವನ್ನು ಹತೋಟಿಯಲ್ಲಿಡಬಹುದು.

ಸೆಲ್ವಲ್, ವೆಂಗಾಂಚಿ, ಕೊಲ್ಲಂಕೋಡು,
ಕನ್ಯಾಕುಮಾರಿ ಜಿಲ್ಲೆ, ತಮಿಳು ನಾಡು
ಮೂಲ : ಹನಿಬೀ, ಸಂ.6 (3) 1995

ಕಸದಿಂದ ರಸ

ತೆಂಗಿನ ಕಾಯರ್ ಪಿತ್ ಗೊಬ್ಬರ

ತೆಂಗಿನ ನಾರಿನ ಕಾರ್ಖಾನೆಯಿಂದ ಬಿಸಾಡಿದ ಕಾಯರ್ ಪಿತ್‌ನ್ನು ಪ್ರತಿ ದಿನ ನಾಲ್ಕು ಅಂಗುಲ ದನಗಳ ಕೊಟ್ಟಿಗೆಯಲ್ಲಿ ಹರಡಿ. ಈ ರೀತಿ ಮಾಡುವುದರಿಂದ ದನಗಳು ಸುಖವಾಗಿ ಮಲಗುತ್ತವೆ. ಅವುಗಳು ವಿಸರ್ಜಿಸಿದ ಗಂಜಲ, ಸಗಣಿ ಕಾಯರ್ ಪಿತ್‌ನೊಂದಿಗೆ ಸೇರುತ್ತದೆ. ದನಗಳ ಮೈ ಕೊಳಕಾಗದಂತೆ ಕಾಪಾಡುತ್ತದೆ. ಒಂದು ವಾರದಲ್ಲಿ ದನಗಳ ಮೈನಲ್ಲಿರುವ ಉಣ್ಣೆಗಳು ಇಲ್ಲದಂತಾಗುತ್ತವೆ. ಈ ರೀತಿ ಹರಡಿದ ಕಾಯರ್ ಪಿತ್‌ನ್ನು ಪ್ರತಿ ದಿನ ಬೆಳಿಗ್ಗೆ ಸಗಣಿ ಸಮೇತ ಕಾಂಪೋಸ್ಟ್ ಗುಂಡಿಗೆ ಹಾಕಬೇಕು. ಮನೆಯಲ್ಲಿ ಉಳಿದ ಹುಳಿ ಮೊಸರಾಗಲಿ, ಮಜ್ಜಿಗೆಯಾಗಲಿ ಸಿಂಪಡಿಸಿದರೆ ಉತ್ತಮ. ತೊಂಭತ್ತು ದಿನಗಳಲ್ಲಿ ಕಾಯರ್ ಪಿತ್ ಗೊಬ್ಬರವಾಗಿ ಪರಿವರ್ತನೆ ಹೊಂದುತ್ತದೆ. ಕಾಯರ್ ಪಿತ್ ಗುರುತು ಸಿಗದ ರೀತಿ ಕೊಳೆತ ಉತ್ತಮ ಗೊಬ್ಬರ ವಾಗಿರುವುದು ಕಂಡು ಬರುತ್ತದೆ. ಈ ರೀತಿ ತಯಾರಾದ ಗೊಬ್ಬರವನ್ನು ಎರೆಹುಳು ಚೆನ್ನಾಗಿ ತಿನ್ನುತ್ತವೆ ಹಾಗೂ ಇವುಗಳ ಸಂತತಿ ಬಹಳ ಬೇಗ ವೃದ್ಧಿಯಾಗುವುದು ಕಂಡು ಬರುತ್ತದೆ. ಈ ರೀತಿ ಗೊಬ್ಬರ ಮಾಡುವುದನ್ನು ನಮ್ಮ ರೈತರು ಸುಲಭವಾಗಿ ತಯಾರಿಸಿಕೊಳ್ಳಬಹುದೆಂದು ನನ್ನ ಅನುಭವ.

ಗೋಬರ್ ಗ್ಯಾಸ್ ಸ್ಲರಿ ಬಳಸಿ

ಜಪಾನ್ ಮಾದರಿಯ ಕಾಂಪೋಸ್ಟ್ ಗುಂಡಿಗಳಲ್ಲಿ (ಆರು ಅಡಿ ಅಗಲ, ಆರು ಅಡಿ ಉದ್ದ ಮತ್ತು ಮೂರು ಅಡಿ ಎತ್ತರ) ಅರ್ಧ ಅಡಿಯ ಕಾಯರ್ ಪಿತ್ತನ್ನು ಹರಡಿ ಇದರ ಮೇಲು ಭಾಗಕ್ಕೆ ಆರು ಬಕೆಟ್ ಗೋಬರ್ ಗ್ಯಾಸ್ ಸ್ಲರಿ ಸಿಂಪಡಣೆ ಮಾಡಿ ಮತ್ತೆ ಅರ್ಧ ಅಡಿ ಕಾಯರ್ ಪಿತ್ ಹರಡಿ ಗೋಬರ್ ಗ್ಯಾಸ್ ಸ್ಲರಿ ಸಿಂಪಡಣೆ ಮಾಡಿ. ಪ್ರತಿ ಪದರಕ್ಕೂ ಇನ್ನೂರು ಮಿಲಿ ಗ್ರಾಂ. ಹುಳಿ ಮೊಸರು ಅಥವಾ ಹುಳಿ ಮಜ್ಜಿಗೆ ಸಿಂಪಡಣೆ ಮಾಡಿ ಮೂರು ಅಡಿ ಎತ್ತರದವರೆಗೂ ಇದೇ ರೀತಿ ಪದರ ಪದರವಾಗಿ ಭರ್ತಿಮಾಡಿ ಮೇಲುಭಾಗಕ್ಕೆ ಅರ್ಧ ಅಡಿ ಕೆರೆ ಗೋಡು ಹರಡಿ. ಮೂರು ತಿಂಗಳ ನಂತರ ಉತ್ತಮ ಗೊಬ್ಬರ ಸಿದ್ಧವಾಗುತ್ತದೆ. ಈ ರೀತಿಯ ಗೊಬ್ಬರವನ್ನು ನಮ್ಮ ಭೂಮಿಗೆ ಸೇರಿಸುವುದರಿಂದ ಎರೆಹುಳು ಹೆಚ್ಚಿ ನಮ್ಮ ಭೂಮಿಯ ಫಲವತ್ತತೆ ಹೆಚ್ಚುತ್ತದೆ.

ಹಸಿರು ಎಲೆ ಸೇರಿಸಿ

ಜಪಾನ್ ಮಾದರಿಯ ಕಾಂಪೋಸ್ಟ್ ಗುಂಡಿಗಳಲ್ಲೂ ಈ ಗೊಬ್ಬರವನ್ನು ತಯಾರಿಸಬಹುದು. ಕಾಯರ್ ಪಿತ್‌ನ್ನು ಒಂದೂವರೆ ಅಡಿ ಹರಡಿದ ನಂತರ ಯಾವುದೇ ಹಸಿರು ಗಿಡಗಳ ಸೊಪ್ಪನ್ನು ಹರಡಿ. ಹಂತ ಹಂತವಾಗಿ ಕಾಯರ್ ಪಿತ್ ಹಾಗೂ ಸೊಪ್ಪನ್ನು ಹರಡುತ್ತಾ ಬರಬೇಕು. ಮಧ್ಯ ಹಂತವಾಗಿ ಹುಳಿ ಮೊಸರು ಅಥವಾ ಮಜ್ಜಿಗೆ ಸಿಂಪಡಣೆ ಮಾಡಬೇಕು. ಕೊನೆಯಲ್ಲಿ ಅರ್ಧ ಅಡಿ ಕೆರೆಗೋಡಿನಿಂದ ಮುಚ್ಚಿ ಮೂರು ತಿಂಗಳಾಗುವವರೆಗೆ ಬಿಡಬೇಕು. ನಂತರ ಗುಂಡಿಗಳಿಂದ ಹೊರ ತೆಗೆದು ರಾಶಿಮಾಡಬೇಕು. ಹದಿನೈದು ದಿನಗಳವರೆಗೆ ಈ ರಾಶಿಯನ್ನು ಹಾಗೇ ಬಿಟ್ಟು ನಂತರ ಗಿಡ ಮರಗಳಿಗೆ ಬಳಸಬಹುದು. ಇದು ಉತ್ತಮವಾದ ಗೊಬ್ಬರವಾಗಿ ರೂಪಾಂತರ ಹೊಂದಿರುತ್ತದೆ.

ಬಿ. ಬಸವರಾಜು
ಸಂತೇಶಿವರ, ಹಾಸನ ಜಿಲ್ಲೆ

ಹಸಿರು ಗೊಬ್ಬರವಾಗಿ ಕಮ್ಯುನಿಸ್ಟ್ ಕಳೆ

ಮಲೆನಾಡಿನ ಭತ್ತದ ಗದ್ದೆಗಳಿಗೆ ರೈತರು ಸಾಕಷ್ಟು ಸಾವಯವ ಗೊಬ್ಬರ ಬಳಸಲಾಗುತ್ತಿಲ್ಲ. ಮಲೆನಾಡಿನ ರಸ್ತೆ ಬದಿ, ಗೋಮಾಳ, ಬೀಳು ಭೂಮಿ ಹಾಗೂ ಬೋಳು ಅರಣ್ಯಗಳಲ್ಲಿ ಯಥೇಚ್ಛವಾಗಿ ಕಂಡು ಬರುತ್ತಿರುವ ಕಮ್ಯುನಿಸ್ಟ್ ಕಳೆ ಅಥವಾ 'ಯುಪಟೋರಿಯಂ' ಎಂದು ಪ್ರಚಲಿತವಾಗಿರುವ ಕ್ರೋಮೋಲಿಯನ್ ಒಡೊರೆಟ ಸದ್ಯಕ್ಕೆ ಸಿಗುತ್ತಿರುವ ಹಸಿರು ಗೊಬ್ಬರ ಮೂಲವಾಗಿದೆ. ಏಪ್ರಿಲ್ ಮೇ ತಿಂಗಳ ಒಂದೆರಡು ಮಳೆ ನಂತರ ಚಿಗುರಲು ತೊಡಗಿ ಜೂನ್ ಜುಲೈ ಹೊತ್ತಿಗೆ ಆಳೆತ್ತರದ ಹಸಿರು ಮೃದು ಕಾಂಡ ಮತ್ತು ಎಲೆಗಳನ್ನು ಹೊಂದಿರುವ ಕಡ್ಡಿಗಳು ಉತ್ತಮ ಹಸಿರು ಗೊಬ್ಬರವಾಗಬಲ್ಲವು. ಒಂದು ಚದರ ಮೀಟರಿಗೆ ಒಂದು ಕಿಲೋ ಪ್ರಮಾಣದ ಸೊಪ್ಪನ್ನು ಹದ ಮಾಡಿದ ಕೆಸರಿನಲ್ಲಿ ತುಳಿದು ಹಿಂದೆಯೇ ಪೈರು ನೆಟ್ಟು ಬೆಳೆಸಿದ ಇಂಟಾನ್ ಮತ್ತು ಐ.ಇ.ಟಿ. ಭತ್ತದ ತಳಿಗಳಲ್ಲಿ ಏನೂ ಹಾಕದ ಮತ್ತು ಸ್ಥಳೀಯ ಸಾವಯವ ಗೊಬ್ಬರ ಬಳಸಿದ ಬೆಳೆಗಿಂತ ಶೇಕಡ 15 ರಷ್ಟು ಹೆಚ್ಚು ಭತ್ತದ ಉತ್ಪನ್ನ ಸಾಧ್ಯವಾಯಿತು. ಇದರ ಜೊತೆಗೆ ಎಕರೆಗೆ 30 : 30 : 35 ಕಿಲೋ ಸಾ:ರಂ:ಪೊ ರಸಗೊಬ್ಬರ ಒದಗಿಸಿದ ತಾಕಿನಲ್ಲಿ ಶೇ.23-30 ರಷ್ಟು ಹೆಚ್ಚು ಇಳುವರಿ ಬಂದದ್ದಿದೆ. ಆದರೆ ಇಲ್ಲಿ ಬೆಂಕಿ ರೋಗಕ್ಕೆ ತುತ್ತಾಗಬಲ್ಲ ತಳಿಯನ್ನು ಬೆಳೆಸ ಲಾಗುವುದಿಲ್ಲ. ರೈತರು ಪಾರಂಪರಿಕವಾಗಿ ಬೆಳೆಯಲಾಗುತ್ತಿರುವ ಸ್ಥಳೀಯ ಭತ್ತದ ತಳಿಗಳಿಗೆ ರಸಗೊಬ್ಬರದ ಬದಲು ಈ ಹಸಿರು ಗೊಬ್ಬರ ಹಾಕಿ ಬೆಳೆಸಬಹುದು. ಇದರಿಂದ ಉತ್ಪನ್ನದ ಮಟ್ಟ ತಗ್ಗುವುದಿಲ್ಲ. ನಾಲ್ಕಾರು ವರ್ಷಗಳ ನಂತರ ಉತ್ಪನ್ನ ಹೆಚ್ಚಾಗುವ ಸಾಧ್ಯತೆಯಿದೆ. ಈ ಹಸಿರು ಗೊಬ್ಬರ ಹಾಕಿದ ತಾಕಿನಲ್ಲಿ ಕಳೆ ಪ್ರಮಾಣ ಕಡಿಮೆಯಾಗಿದ್ದು ಬೆಳೆ ಹೆಚ್ಚು ಕಾಲ ಹಸಿರಾಗಿ ಉಳಿಯುತ್ತದೆ.

ಈ ಸಸ್ಯವನ್ನು ನಾಶ ಮಾಡಲು ಪ್ರಪಂಚಾದ್ಯಂತ ಜೈವಿಕ, ರಾಸಾಯನಿಕ ಮತ್ತಿತರ ಕ್ರಮಗಳ ಶೋಧನೆ ನಡೆದಿದೆ. ಈ ಹಿನ್ನೆಲೆಯಲ್ಲಿ ಈ ಸಸ್ಯವನ್ನು ಹಸಿರು ಗೊಬ್ಬರವಾಗಿ ಉಪಯೋಗಿಸುವ ಮೂಲಕ ಅದರ ಮೇಲೆ ಹತೋಟಿಯನ್ನು ಸಾಧಿಸಬಹುದಾಗಿದೆ.

ಒಂದು ಚದರ ಮೀಟರಿಗೆ ಒಂದು ಕಿಲೋ ಪ್ರಮಾಣದಲ್ಲಿ ಒಂದು ಎಕರೆಗೆ ಹಾಕುವ ನಾಲ್ಕು ಟನ್ ಸೊಪ್ಪು 32.8 ಕಿಲೋ ಸಾರಜನಕ, 22.5 ಕಿಲೋ ಪೊಟಾಶ್ ಮತ್ತು ಅಲ್ಪಪ್ರಮಾಣದ ರಂಜಕ ಪೋಷಕಾಂಶಗಳನ್ನು ಒದಗಿಸುತ್ತದೆ.

ಪ್ರೊ. ಎಸ್.ಸಿ.ಚಂದ್ರಶೇಖರ್
ಸಸ್ಯ ರೋಗ ತಜ್ಞರು, ಕೃಷಿ ವಿ.ವಿ., ಬೆಂಗಳೂರು

ರಾಜಾಸ್ಥಾನದ ಭಿಲ್ಲರ ನಾಟಿ ಬೇಸಾಯ ಕ್ರಮಗಳು

ತೆಮ್ಮೃ ಹಣ್ಣು ಮಾಗಿಸುವುದು

ಕಾಡುಗಳಲ್ಲಿ ಸಿಗುವ ಬಲಿತ ತೆಮ್ಮೃ *(Diospyros melanoxylon)* ಅಥವಾ ತುಮ್ರ ಕಾಯಿಗಳನ್ನು ಮಾಗಿಸುವ ಭಿಲ್ಲರ ವಿಧಾನ ಈ ರೀತಿ ಇದೆ.

ಚಿತ್ರದಲ್ಲಿ ತೋರಿಸಿರುವಂತೆ ಒಂದು ಅಡಿ ಅಂತರದಲ್ಲಿ ಪೆಟ್ಟಿಗೆಯಾಕಾರದ ಎರಡು ಗುಂಡಿಗಳನ್ನು ತೋಡಿ, ತಳದಲ್ಲಿ ಅವೆರಡಕ್ಕೂ ಸಂಪರ್ಕ ಕಲ್ಪಿಸಲು ಒಂದು ಕಾಲುವೆಯನ್ನು ಕೊರೆಯಬೇಕು. ಒಂದು ಗುಂಡಿಯಲ್ಲಿ ಆಯ್ದು ತಂದ ಕಾಯಿಗಳನ್ನು ಹಾಕಿ, ಮಣ್ಣಿನಿಂದ ಅಥವಾ ಹೆಂಚಿನಿಂದ ಮುಚ್ಚಬೇಕು. ಕಾಯಿಗಳ ಮಧ್ಯೆ ಗಾಳಿಯಾಡುವಂತಿದ್ದು ವಿರಳವಾಗಿರುವುದು ಅವಶ್ಯಕ. ಇನ್ನೊಂದು ಗುಂಡಿಯಲ್ಲಿ ಹಸುವಿನ ಒಣಗಿದ ಸಗಣಿ - ಭೆರಣಿಯನ್ನು ತುಂಬಿ, ಅದನ್ನೂ ಹಂಚಿ ನಿಂದ ಮುಚ್ಚಬೇಕು. ಭೆರಣಿಯನ್ನು ಸುಟ್ಟಾಗ ಅದರಿಂದ ಬರುವ ದಟ್ಟವಾದ ಹೊಗೆಯು, ತಳದಲ್ಲಿರುವ ಕಾಲುವೆಯ ಮೂಲಕ ಕಾಯಿ ತುಂಬಿರುವ ಗುಂಡಿಗೆ ಹೋಗುತ್ತದೆ. ಈ ರೀತಿ ದಿನಕ್ಕೊಮ್ಮೆಯಂತೆ ನಾಲ್ಕೈದು ದಿವಸ ಮಾಡಿದರೆ ತೆಮ್ಮೃ ಕಾಯಿಗಳು ಹಣ್ಣಾಗಿ ಹಳದಿ ಬಣ್ಣಕ್ಕೆ ತಿರುಗುತ್ತದೆ.

ಮಲೆನಾಡ ಕ್ರಮ

ಇದೇ ರೀತಿಯ ಕ್ರಮವನ್ನು ನಮ್ಮ ಮಲೆನಾಡ ಪ್ರಾಂತ್ಯದ ರೈತರು ಬಾಳೇ ಹಣ್ಣನ್ನು ಮಾಗಿಸಲು ಅನುಸರಿಸುತ್ತಾರೆ. ಒಂದು ದೊಡ್ಡ ಮಣ್ಣಿನ ಬಾನಿ ಅಥವಾ ಮಡಿಕೆಯಲ್ಲಿ ಬತ್ತದ ಹುಲ್ಲಿನ ಪದರು ಹಾಸಿ, ಚಿಪ್ಪು ತೆಗೆದ ಬಾಳೇಕಾಯಿ ಹಾಕುತ್ತಾರೆ. ಈ ರೀತಿಯ ಬತ್ತ ಮತ್ತು ಬಾಳೇಕಾಯಿ ಪದರುಗಳನ್ನು ಮಡಿಕೆಯ ಬಾಯಿಯ ಒಳಗೆ ತುಂಬ ಲಾಗುತ್ತದೆ. ಮಡಿಕೆಯ ಬಾಯಿಮೇಲೆ ಅದರ ಮುಚ್ಚಳದ ಅಳತೆಗೆ ಸಮನಾದ ಅರ್ಧಾಕಾರದ ಮತ್ತೊಂದು ಚಿಕ್ಕ ಮಡಿಕೆಯನ್ನು ಇರಿಸಿ, ಅದರೊಳಗೆ ಕೆಂಡದ ಬೆಂಕಿ ಹಾಕಲಾಗುತ್ತದೆ. ಮಡಿಕೆಯ ಒಳಗಡೆ ಗಾಳಿಯ ಒತ್ತಡ ಮತ್ತು ಮೇಲಿನ ಬೆಂಕಿಯ ಶಾಖ ಇವೆರಡೂ ಸೇರಿ ಕಾಯಿ ಬೇಗ ಮಾಗಿ ಹಣ್ಣಾಗುವುದು.

ಮಾವನ್ನು ಮಾಗಿಸುವ ಕ್ರಮ

ಹಕ್ಕಿಗಳಿಂದ ಮಾವಿನ ಹಣ್ಣುಗಳಿಗೆ ಆಗಬಹುದಾದ ಹಾನಿಯನ್ನು ತಪ್ಪಿಸಲು, ಸಾಮಾನ್ಯವಾಗಿ ಬಲಿತ ಕಾಯಿಗಳನ್ನೇ ಕಿತ್ತು ಇಡುತ್ತಾರೆ.

ಕಾಯಿಗಳನ್ನು ಬುಟ್ಟಿಗೆ ತುಂಬುವ ಮೊದಲು ಬುಟ್ಟಿಯ ತಳಬಾಗದಲ್ಲಿ ಕರ್ಮಲಾ ಅಥವಾ ಕಕ್ಕೆ *(Cassia fistula)* ಮರದ ಎಲೆಗಳನ್ನು ಪದರ ಪದರವಾಗಿ ಹಾಕಿ, ಅದರ ಮೇಲೆ ಕಾಯಿಗಳನ್ನು ತುಂಬಿ ನಂತರ ಮತ್ತೆ ಅದೇ ಎಲೆಗಳಿಂದ ಮುಚ್ಚಬೇಕು. ಸಾಮಾನ್ಯವಾಗಿ 2-5 ಪದರದಷ್ಟು ಎಲೆಗಳನ್ನು ಮೇಲೆ ಮತ್ತು ಕೆಳಗೆ ಮುಚ್ಚುತ್ತಾರೆ. ಹೀಗೆ ಮಾಡಿದ ನಾಲ್ಕೈದು ದಿನಗಳಲ್ಲಿ ಮಾವು ಹಣ್ಣಾಗಿ, ಆಕರ್ಷಕ ಹಳದಿ ಬಣ್ಣಕ್ಕೆ ತಿರುಗುತ್ತದೆ. ಕಕ್ಕೆಯಲ್ಲದೆ, ಮುತ್ತುಗದ ಎಲೆ *(Butea monosperma)*, ಬೆಪ್ಪಾಲೆ ಮರ *(Wrightia tinctoria)*, ಬಿಳಿಗಣಗಲು *(W. tomentosa)*, ಕೊಡಚಗ *(Holarrhen antidysenterica)* ಇನ್ನೂ ಮುಂತಾದ ಮರಗಳ ಗಿಡ ಎಲೆಗಳನ್ನು ಬಳಸಬಹುದು.

ಅನುವಾದ : ಮೊ.ರಾ. ಕೃಪಾಶಂಕರ್

ಮೂಲ : ಹನಿ ಬೀ, ಸಂ. 7 (3), 1996


ಅಡಿಕೆ ಮರದಲ್ಲಿ ಸುಳಿ ಹೋದಲ್ಲಿ ಮರಳಿ ಪಡೆಯುವ ವಿಧಾನ

ನನ್ನ ತೋಟದಲ್ಲಿ ಇಪ್ಪತ್ತು ಅಡಿ ಎತ್ತರದ ಅಡಕೆ ಮರದ ಸುಳಿ ಅಕ್ಟೋಬರ್ ತಿಂಗಳಲ್ಲಿ ಹಳದಿ ಬಣ್ಣಕ್ಕೇ ತಿರುಗಿ, ನವೆಂಬರ್ ತಿಂಗಳಲ್ಲಿ ಕೆಳಕ್ಕೆ ಬಿತ್ತು. ಸುಳಿ ಬಿದ್ದ ದಿನವೇ ಕೆಳಭಾಗದ ಗರಿಯಿಂದ 15° ಓರೆಯಾಗಿ ಜವಣಿಗೆ (ರೋಟಿ) ಗೆ ಕುಡುಗೋಲು ಕಟ್ಟಿ ಕತ್ತರಿಸಿ, ಕತ್ತರಿಸಿದ ಭಾಗದಿಂದ ಕೊಳೆತ ನೀರು ಕೆಳಕ್ಕೆ ಹರಿದುಬಂತು. ನಂತರ ಹೊರಭಾಗದ ಪದರವನ್ನು ಕುಡುಗೋಲಿನಿಂದ ಸೀಳಿದರೆ ಉಳಿದ ಕೊಳೆ ನೀರು ಹರಿದು ಬಂತು. ಕಾಲು ಕೆ.ಜಿ. ಕಣಗಲು ಗಿಡದ ಬೇರನ್ನು ಹರಿದು, ಬಂದ ರಸವನ್ನು ಕಾಲು ಲೀಟರ್ ನೀರಿಗೆ ಮಿಶ್ರ ಮಾಡಿದೆ. ಈ ಕಾಲು ಲೀಟರ್ ಮಿಶ್ರಣವನ್ನು ಪ್ಲಾಸ್ಟಿಕ್ ಚೀಲಕ್ಕೆ ತುಂಬಿ, ಕೆಳಭಾಗದಲ್ಲಿ ಸಣ್ಣ ರಂಧ್ರ ಮಾಡಿದೆ. ಈ ಚೀಲವನ್ನು ಜವಣಿಗೆ (ರೋಟಿ) ತುದಿಗೆ ಕಟ್ಟಿ ಅಡಕೆ ಮರದ ಸುಳಿಗೆ ಬೀಳುವಂತೆ ಹೊಂದಿಸಿ ಹಿಡಿದೆ. ಚೀಲದಲ್ಲಿದ್ದ ದ್ರಾವಣ ಮೂರು ಗಂಟೆಯಲ್ಲಿ ಅಡಿಕೆ ಮರದ ಸುಳಿಗೆ ಹನಿ ಹನಿ ರೂಪದಲ್ಲಿ ಸೇರಿತು. ಮಾರನೇದಿನ ಅದರಿಂದ ಬಿಳಿ ಹುಳು ಹೊರಬಂದದ್ದು ಕಂಡು ಬಂತು. ಏಪ್ರಿಲ್ ತಿಂಗಳ ಕೊನೆ ವೇಳೆಯಲ್ಲಿ ಹೊಸ ಸುಳಿ ಹೊರ ಬಂದು ನಂತರ ಒಂದೂವರೆ ಅಡಿ ಉದ್ದದ ಮೂರು ಗರಿಗಳು ಕಂಡು ಬಂದಿದೆ. ಈ ಕ್ರಮ ಅನುಸರಿಸಿ ಹೊಸ ಸುಳಿ ಪಡೆಯಬಹುದು.

ಅಡಿಕೆ ಫಸಲು ಹೆಚ್ಚಿಸಲು

ಅಡಿಕೆ ಮರಗಳಲ್ಲಿ ಗರಿಗಳಿಗೆ ತಕ್ಕಂತೆ ಅಡಿಕೆ ಗೊನೆ ಇಳುವರಿ ಬರುತ್ತದೆ. ಹತ್ತು ಗರಿಗಳಿದ್ದರೆ ಐದು ಗೊನೆ, ಹನ್ನೆರಡು ಗರಿಗಳಿದ್ದರೆ ಆರು ಗೊನೆ ಕಂಡು ಬರುತ್ತವೆ. ಅಡಿಕೆ ಮರಗಳಿಗೆ ಏಪ್ರಿಲ್ ಮೇ, ನವೆಂಬರ್ ಡಿಸೆಂಬರ್ ತಿಂಗಳಲ್ಲಿ ಗೊಬ್ಬರ ಪೂರೈಸಿದರೆ ಒಳ್ಳೆಗೊನೆಗಳು ಬರುತ್ತವೆ. ಹತ್ತು ಕೆ.ಜಿ. ಹಸಿರೆಲೆಗಳಿಂದ ಕೂಡಿದ ಕಾಂಪೋಸ್ಟ್ ಗೊಬ್ಬರ, ಎರಡು ಕೆ.ಜಿ ಹೊಂಗೆ ಹಿಂಡಿ ಕೊಟ್ಟರೆ ಗೊನೆಗಳು ಹೆಚ್ಚಿನ ಕಾಯಿ ಹಿಡಿದು ಕಾಯಿಗಳೂ ಗಾತ್ರ ಬರುತ್ತವೆ. ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಟ್ಟರೆ ಹರಳು ಉದುರುತ್ತವೆ. ಪ್ರತಿ ದಿನಕ್ಕೆ ಐದು ಲೀಟರ್ ನೀರು ಕೊಟ್ಟರೆ ಸಾಕಾಗುತ್ತದೆ.

ಬಿ.ಬಸವರಾಜು, ಸಂತೇಶಿವರ



ಜೋಳಗ ಭತ್ತದ ಕೃಷಿಯ ಅರ್ಥಶಾಸ್ತ್ರ
- ದಿನೇಶನರ ಸಾಧನೆ

ನನ್ನದು ಐದಾರು ವರ್ಷದಿಂದ ಭತ್ತಕ್ಕೆ ರಾಸಾಯನಿಕ ರಹಿತ ಕೃಷಿ. ಹಾಗಂತ ಕೊಟ್ಟಿಗೆ ಗೊಬ್ಬರ ವಿಶೇಷವಾಗಿ ಹಾಕುತ್ತಿಲ್ಲ. ಪ್ರತಿಬಾರಿ ಭತ್ತ ಬೆಳೆಯುವ ಮುಂಚೆ ಸೆಣಬಿನ ಬೀಜ ಚೆಲ್ಲಿ ಹೂ ಆಗುವ ಮುಂಚೆ ಮಣ್ಣಿಗೆ ಸೇರಿಸುವ ಪದ್ಧತಿ ಅನುಸರಿಸುತ್ತದ್ದೇನೆ. ಕೀಟ ಬಂದರೆ ಮುಕ್ಕಡಕ ಗಿಡದ ಎಲೆಯ ದ್ರಾವಣ ಸಿಂಪರಣೆ. ಇವೆಲ್ಲದರಿಂದ ಜಮೀನಿನಲ್ಲಿ ವರ್ಷಂಪ್ರತಿ ಎರೆಹುಳು ಚಟುವಟಿಕೆ ಹೆಚ್ಚುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಮಣ್ಣು ಹೆಚ್ಚು ಹದವಾಗುತ್ತದೆ. ಕಳೆದ ಮೂರು ವರ್ಷದಿಂದ ಇಂಟಾನ್, ಮಂಡ್ಯ ವಿಜಯ ತಳಿಗಳೊಂದಿಗೆ ಹಳೆಯ ನಾಟಿ ತಳಿ ರತ್ನ ಚೂಡಿ ಬೆಳೆಯಲು ಶುರುಮಾಡಿದ್ದೇನೆ. ಕಳೆದ ಬಾರಿ ಸರಿಯಾಗಿ ಒಂದೆಕ್ರೆ ಜಾಗದಲ್ಲಿ 'ಜೋಳಗ' ತಳಿ ಬೆಳೆದಿದ್ದು ಇದು ಅಚ್ಚರಿಯ ಫಲಿತಾಂಶ ಒದಗಿಸಿದೆ.

ಜೂನ್ 27, 1997 ರಂದು ಅಗೇಡಿ (ನರ್ಸರಿ) ಗೆ 17 ಕೆ.ಜಿ.ಭತ್ತದ ಬಿತ್ತನೆ. ಜುಲೈ 24 ರಂದು ಸಸಿ ನಾಟಿ ಮಾಡಿದೆವು. ನಮ್ಮ ಕಡೆಯೆಲ್ಲ ಒಂದೆಕ್ರೆಗೆ 35 ಮೆದೆ ಸಸಿ ನಾಟಿ ಮಾಡುತ್ತಾರೆ. (1 ಮೆದೆ = 20 ಕಟ್ಟು). ಆದರೆ ನಾನು ಜೋಳಗ ಒಂದೆಕ್ರೆಗೆ 16 ಮೆದೆ ಮಾತ್ರ ನಾಟಿ ಮಾಡಿಸಿದೆ. ಒಂದು ಕುಣಿಗೆ 3-4 ಸಸಿ ಮಾತ್ರ. ಸಸಿಗಳ ನಡುವಿನ ಅಂತರ ಮಾಮೂಲಿನಂತೆ. ಜೋಳಗ ಸಿಕ್ಕಾಪಟ್ಟೆ ತೆಂಡೆಯೊಡೆದಿತ್ತು. ಸೆಪ್ಟೆಂಬರ್ ಮೊದಲ ವಾರದಲ್ಲಿ ಒಮ್ಮೆ ಕಳೆ ತೆಗೆಸಿದೆ. ಯಾವುದೇ ರೋಗ ಅಥವಾ ಕೀಟದ ಬಾಧೆ ಕಾಣಬರಲಿಲ್ಲ ಅಂತೆಯೇ ಯಾವ ಸಿಂಪರಣೆಯೂ ಇಲ್ಲ. ನವೆಂಬರ್ ಕೊನೆಗೆ ಕೊಯ್ಲಾಗಬೇಕಿತ್ತು. ಆದರೆ ಹತ್ತು ದಿನ ತಡವಾಯ್ತು. ***ಜೋಳಗದ ವಿಶೇಷವೆಂದರೆ ಕೊಯ್ಲು ತಡವಾದರೂ ಭತ್ತ ಉದುರುವುದಿಲ್ಲ.***

ಜೊಳ್ಳಿನಂಶ ಭಾರೀ ಕಮ್ಮಿಯಿತ್ತು. ನನಗೆ ಒಂದೆಕ್ರೆಗೆ 17 ಕ್ವಿಂಟಾಲ್ ಭತ್ತ ಸಿಕ್ಕಿದೆ. ಇನ್ನೊಂದು ಮುಖ್ಯವಾದ ವಿಷಯ ನನ್ನ ಗಮನಕ್ಕೆ ಬಂದುದೆಂದರೆ ಈ ಬಾರಿ ಹೂ ಆಗುವ ಸಮಯದಲ್ಲಿ ವಿಪರೀತ ಚಳಿ ಇತ್ತು. ಇದು ಕೂಡ ಇಳುವರಿ ಮೇಲೆ ಪ್ರಭಾವ ಬೀರಿರಬಹುದು. ಹಾಗೂ ನನ್ನ ಜಮೀನಿನ ಸುತ್ತಮುತ್ತ ಇರುವ ಬಿದಿರಿನ ಮಟ್ಟಿಗಳು ಹಾಗೂ ಮರಗಳ ಮೇಲೆ ಗೀಜುಗನ ಹಕ್ಕಿ ಗೂಡುಗಳು ಬಹಳಷ್ಟಿವೆ. ಅವುಗಳಿಂದಲೇ ನೈಸರ್ಗಿಕ ಕೀಟ ಹತೋಟಿಯಾಗಿರಲು ಸಾಧ್ಯವೆಂದು ನನ್ನ ಭಾವನೆ. ಸಾಮಾನ್ಯವಾಗಿ ನಮ್ಮ ಕಡೆ (ಮಲೆನಾಡಿನಲ್ಲಿ) ಸುಧಾರಿತ ತಳಿ ಬೆಳೆದು ರಸಗೊಬ್ಬರ ಬಳಸಿ, ಕಳೆನಾಶಕ, ಕೀಟನಾಶಕಗಳನ್ನು ಸಿಂಪಡಿಸಿದರೂ ಕೂಡಾ ಶೇಕಡಾ 40-50% ಜೊಳ್ಳಿನಂಶ ಬರುತ್ತದೆ. ಹಾಗೂ ಇಳುವರಿ ಎಕ್ರೆಗೆ ಹೆಚ್ಚೆಂದರೂ 14 ಕ್ವಿಂಟಾಲ್ ನನ್ನ ಒಂದೆಕ್ರೆ ಜೋಳಗ ಕೃಷಿಯ ಸಂಪೂರ್ಣ ಲೆಕ್ಕಾಚಾರ ಹೀಗಿದೆ

ಅ) 17 ಕೆ.ಜಿ ಬೀಜದ ಭತ್ತ (ಕೆ.ಜಿ.ಗೆ 6 ರೂ.ನಂತೆ)	102-00
ಆ) ಅಗೇಡಿ (1 ಗಂಟೆ ಹೂಟಿ)	150-00
ಇ) ಅಂಚುಕಡಿಯಲು	200-00
ಈ) ಹೂಟಿ	500-00
ಉ) ನಾಟಿ, ಆಳು-ಸಸಿ ಕೀಳಲು	250-00
ಆಳು ನಾಟಿಗೆ	400-00
ಊ) ಕಳೆ ತೆಗೆಯಲು ಆಳು	200-00
ಋ) ಗದ್ದೆ ಕೊಯ್ಲು	600-00
ಎ) ಒಕ್ಕಲು	350-00
ಏ) ಇತರೆ	250-00
ಒಟ್ಟು	3000-00
17 ಕ್ವಿಂಟಾಲಿಗೆ (ರೂ 460 ಪ್ರತಿ ಕ್ವಿಂಟಾಲಿಗೆ)	7820-00
30 ಮೆದೆ ಹುಲ್ಲು	1000-00
	8820-00
	(-) 3000-00
ಒಟ್ಟು ಗಳಿಕೆ	5820-00

ಬಿ.ಎಸ್. ದಿನೇಶ್, ಬಾವಿಕೈಸರು ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ - 577 422

ಜೀರಿಗೆ ಬೀಜಗಳ ಉತ್ತಮ ಮೊಳಕೆ

ಜೀರಿಗೆ ಬೀಜಗಳ ಮೊಳಕೆಯೊಡೆಯುವ ಪ್ರಮಾಣ ಹೆಚ್ಚಿಸಲು ಅಬರಾಂಭಾಯಿ ಅನುಸರಿಸುತ್ತಿರುವ ತಂತ್ರ ಹೀಗಿದೆ. ಸುಮಾರು ಇನ್ನೂರೈವತ್ತು ಗ್ರಾಂ. ಉಪ್ಪನ್ನು ಅರ್ಧಲೀಟರ್ ನೀರಿನಲ್ಲಿ ಕರಗಿಸುತ್ತಾರೆ. ಸುಮಾರು ಹತ್ತು ಕೆ.ಜಿ.ಯಷ್ಟು ಜೀರಿಗೆ ಬೀಜಗಳನ್ನು ಸ್ವಲ್ಪ ಹೊತ್ತು ಈ ಮಿಶ್ರಣದಲ್ಲಿ ಹಾಕಿ ನಂತರ ನೆರಳಿನಲ್ಲಿ ಒಣಗಿಸಿ, ಉಪ್ಪಿನ ನೀರಿನ ದ್ರಾವಣ ಜೀರಿಗೆ ಬೀಜದ ಮೇಲೆ ತೆಳು ಪದರ ನಿರ್ಮಿಸುವಂತೆ ಬಿತ್ತನೆ ಮಾಡುತ್ತಾರೆ. ಈ ರೀತಿ ಮಾಡುವುದರಿಂದ ಉತ್ತಮ ಮೊಳಕೆ ಹಾಗೂ ಹೆಚ್ಚಿಗೆ ಇಳುವರಿಯೂ ಬರುವುದಂತೆ !

ಅಬರಾಂಭಾಯಿ ತಾರಶಿಭಾಯಿ, ಸಾಂಗನಿ ಜಿಲ್ಲೆ, ಗುಜರಾತ್

ಬೀಜದ ತೆಂಗಿನಕಾಯಿಯ ಆಯ್ಕೆ ಭಾಸ್ಕರ ಸಾವೆಯವರ ಅನುಭವ

ಚೆನ್ನಾಗಿ ಬಲಿತ ತೆಂಗಿನ ಮರದಿಂದ ಆಯ್ಕೆ ಮಾಡಿದ ಕಾಯಿಗಳು ಬೀಜದ ಬಳಕೆಗೆ ಯೋಗ್ಯ. ಉತ್ತಮ, ಆರೋಗ್ಯಕರ ಮರಗಳು ಈ ಕೆಳಗಿನ ಗುಣಗಳನ್ನು ಹೊಂದಿರಬೇಕು.

- ಮರದಲ್ಲಿ 35-37 ಗರಿಗಳಿರಬೇಕು.
- ಶೇಕಡಾ 25 ರಷ್ಟು ಗರಿಗಳು ಆಕಾಶದೆಡೆ ನೇರವಾಗಿರಬೇಕು.
- ಶೇಕಡಾ 25 ರಷ್ಟು ಗರಿಗಳು ಭೂಮಿಗೆ 135° ಕೋನದಲ್ಲಿರಬೇಕು.
- ಶೇಕಡಾ 25 ರಷ್ಟು ಗರಿಗಳು ಭೂಮಿಗೆ ಸಮಾನಾಂತರವಾಗಿರಬೇಕು.
- ಉಳಿದ ಶೇಕಡಾ 25 ರಷ್ಟು ಗರಿಗಳು ಮರದ ಕಾಂಡಕ್ಕೆ ಸಮಾನಾಂತರ ವಾಗಿರಬೇಕು.
- ಮರವು ಪ್ರತಿ ವರ್ಷಕ್ಕೆ 300-350 ಕಾಯಿಗಳನ್ನು ಕೊಡುತ್ತಿರಬೇಕು.

ಮೇಲೆ ತಿಳಿಸಿದಷ್ಟು ಕಾಯಿಗಳನ್ನು ಮರವು ಹೊಂದಿದ್ದರೆ, ಕಾಯಿಗಳ ಭಾರಕ್ಕೆ ಮರದಲ್ಲಿನ ಎಲೆಗಳ ಸಂಯೋಜನೆ ತಾನೇ ತಾನಾಗಿ ಮೇಲೆ ಹೇಳಿರುವಂತೆ ಆಗುತ್ತದೆ. ಈ ರೀತಿಯ ಎಲೆಯ ಸಂಯೋಜನೆ ಹೊಂದಿದ್ದರೆ ಸೂರ್ಯನ ಕಿರಣಗಳನ್ನು ಪರಿಣಾಮಕಾರಿ ಯಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದು ನೈಸರ್ಗಿಕ ಕೃಷಿ ತಜ್ಞ ಭಾಸ್ಕರ ಸಾವೆಯವರ ಅನುಭವ.

ಶ್ರೀ ಭಾಸ್ಕರ ಸಾವೆ, ಕಲ್ಪ ವೃಕ್ಷ ಫಾರ್ಮ್, ಹಳ್ಳಿ ದೆಹ್ರಿ, ತಾ|| ಉಮರ್ ಗಾವ್, ಜಿ || ವಲ್‌ಸಾದ್

ಮೂಲ : ಹನಿಬೀ ಸಂ. 8 (4), 1997

ಅನುವಾದ : ಬಿ.ಎ. ಅನಿಲ್ ಕೌಶಿಕ್

ರಾಜಸ್ಥಾನದ ಚಿಕ್ಕ ನೆಲಬಾವಿಗಳು

ಮರುಭೂಮಿ ಪ್ರದೇಶಗಳಾದ ಚುರು, ಬಿಕನೀರ್, ಜೈಸಲಾಮೀರ ಮತ್ತು ಬಾರಮರ್ ಜಿಲ್ಲೆಗಳ ರೈತರು ಕುಡಿಯುವ ನೀರಿಗಾಗಿ ನಿರ್ಮಿಸಿಕೊಂಡಿರುವ ಈ ನೆಲಬಾವಿಗಳು ಇತರ ಬಾವಿಗಳಂತಲ್ಲ. ಇವು ಅತ್ಯಂತ ಕಡಿಮೆವ್ಯಾಸದ ಕೊಳವೆ ಬಾವಿಗಳು. ಆಳ ಬಾವಿಯಿಂದ ಬಾವಿಗೆ ವ್ಯತ್ಯಾಸಹೊಂದುತ್ತದೆ. ಹೆಚ್ಚೆಂದರೆ ಸುಮಾರು 100ಮೀ. ಆಳ. ಇವು ಭೂಮಿ ಅಡಿಯ ಕಲ್ಲುಪದರವನ್ನು ಕೊರೆದು ಭೂಮಿ ಅಡಿಯ ನೀರನ್ನು ತೆಗೆಯುವ ಕೊಳವೆ ಬಾವಿ (Bore well) ಗಳಿಗಿಂತ ಭಿನ್ನವಾದದ್ದು. ಇವು ಸಂಗ್ರಹಿಸುವ ನೀರು ಈ ಕಲ್ಲು ಪದರಗಳ ಮೇಲ್ಭಾಗದ್ದು. ಮಳೆಗಾಲದಲ್ಲಿ ಅಲ್ಪಸ್ವಲ್ಪ ಬೀಳುವ ಮಳೆಯ ನೀರು ಮರಳು ಪದರಗಳಲ್ಲಿ ಇಂಗಿ ಮರಳು ಕಣಗಳ ನಡುವೆ ಸಂಗ್ರಹಗೊಂಡಿರುತ್ತದೆ. ಮರಳಿನ ಪದರಗಳ ಕೆಳಗೆ ಇರುವ ಕಲ್ಲು ಪದರ ಈ ನೀರು ಸಂಪೂರ್ಣವಾಗಿ ಇಂಗಿ ಹೋಗದಂತೆ ರಕ್ಷಿಸಿರುತ್ತದೆ. ಇಂತಹ ನೀರನ್ನು ಈ ಬಾವಿಗಳು ಸಂಗ್ರಹಿಸುತ್ತವೆ.

ಈ ಬಾವಿಗಳು ಯಾರ ವೈಯಕ್ತಿಕ ಸ್ವತ್ತೂ ಅಲ್ಲ. ಇವುಗಳನ್ನು ಹಳ್ಳಿಯ ಜನ ಸಮುದಾಯಕ್ಕೆ ಸೇರಿದ ಸಾರ್ವತ್ರಿಕ ಜಮೀನಿನಲ್ಲಿ ತೆಗೆಯುತ್ತಾರೆ. ಎಲ್ಲಿ ಬಾವಿಗಳನ್ನು ತೆಗೆಯಬೇಕು ಹಾಗೂ ಎಷ್ಟು ತೆಗೆಯಬೇಕೆಂದು ನಿರ್ಧಾರ ಮಾಡುವುದು ಗ್ರಾಮ ಪಂಚಾಯಿತಿ.

ಈ ಬಾವಿ ತೋಡುವ ಕೆಲಸ ಬಹಳ ಕಷ್ಟಕರವಾದದ್ದು. ಇದು ಸಪೂರವಾದ ಬಾವಿಯಾದ್ದರಿಂದ ಆಳಕ್ಕೆ ಹೋದಂತೆ ಉಸಿರುಕಟ್ಟುವ ಸಾಧ್ಯತೆ ಹೆಚ್ಚು. ಮರಳು ಪದರಗಳಾದ್ದರಿಂದ ಅಗೆಯುವಾಗ ಕುಸಿಯುವ ಸಾಧ್ಯತೆಯೂ ಹೆಚ್ಚು. ಹಾಗಾಗಿ ಇದನ್ನು ತೋಡುವವರು ಇದರಲ್ಲೇ ನಿಪುಣರಾದ ಕೆಲವೇ ಕೆಲವು ವಿಶಿಷ್ಟ ಕೆಲಸಗಾರರು.

ಈ ಬಾವಿ ಕೆಲಸ ಮಾಡಲು ಇಬ್ಬರು ಕೆಲಸಗಾರರು ಬೇಕು. ಒಬ್ಬ ಬಾವಿ ಅಗೆಯುವವನು. ಇನ್ನೊಬ್ಬ ಮೇಲಿನಿಂದ ಅವನಿಗೆ ಸಹಾಯ ಮಾಡುವವನು. ಈ ಬಾವಿ ಅಗೆಯುತ್ತಾ ಹೋದಂತೆ ಬಾವಿಯ ಗೋಡೆಯ ಸುತ್ತಾ ಹಗ್ಗದ ಗೋಡೆ ಕಟ್ಟುತ್ತಾ ಹೋಗುತ್ತಾರೆ. ಕೆಳಗಿಳಿದು ಬಾವಿ ಅಗೆಯುವ ವ್ಯಕ್ತಿಯೇ ಹಗ್ಗವನ್ನು ಸುತ್ತಿ ಸುತ್ತಿ ಗೋಡೆ ಕಟ್ಟಬೇಕು. ಮೇಲೆ ನಿಂತ ವ್ಯಕ್ತಿ ಚಿತ್ರದಲ್ಲಿ ತೋರಿಸಿರುವಂತೆ ಹಗ್ಗ ಕೊಡುತ್ತಾ ಹೋಗುತ್ತಾನೆ. ಈ ಹಗ್ಗ ಕೂಡಾ ಸ್ಥಳೀಯವಾಗಿ ದೊರಕುವ ಗಿಡಗಳಿಂದಲೇ ಮಾಡಿದಂತಹದ್ದು. ನೂರು ಮೀಟರ್ ಆಳದ ಬಾವಿಗೆ ಸುಮಾರು 4000 ಮೀ. ಉದ್ದದ ಹಗ್ಗ ಬೇಕಾಗುತ್ತದೆ. ಹಗ್ಗ ಕೆಳಗೆ ಬಿಡುವುದರ ಜೊತೆಗೆ ಮೇಲೆ ನಿಂತ ವ್ಯಕ್ತಿ ಆಗಾಗ ಸ್ವಲ್ಪ ಮರಳು ಕೆಳಗೆ ಎಸೆಯುತ್ತಿರುತ್ತಾನೆ. ಹೀಗೆ ಮಾಡುವಾಗ ಒಳಗಿನ ಕೆಲಸಗಾರನಿಗೆ ಹೊಸಗಾಳಿ ದೊರೆಯುತ್ತದೆ. ಬದುಕಿನ ಮೂಲ ಅಗತ್ಯವಾದ ನೀರಿಗೆ ವ್ಯವಸ್ಥೆ ಮಾಡುವ ಈ ಕೆಲಸಗಾರರನ್ನು ಹಳ್ಳಿಯ ಜನ ಆದರ ಪೂರ್ವಕವಾಗಿ ಕಾಣುತ್ತಾರೆ. ಆತ್ಮೀಯತೆಯಿಂದ ಬರಮಾಡಿಕೊಳ್ಳುವ ಈ ಕೆಲಸಗಾರರನ್ನು ಉಡುಗೊರೆ ಕೊಟ್ಟು ಸನ್ಮಾನ ಪೂರ್ವಕವಾಗಿ ಹಳ್ಳಿಯಿಂದ ಹಳ್ಳಿಗೆ ಬೀಳ್ಕೊಡುತ್ತಾರೆ.

ಬಾವಿಯ ಮೇಲಿರುವ 'Y' ಆಕಾರದ ಕೋಲುಗಳು ಬಾವಿಯ ಗುರುತುಗಳು. ಜೊತೆಗೆ ಅವೇ ನೀರು ಮೇಲೆತ್ತಲು ಉಪಯೋಗಿಸುವ ಆಧಾರಗಳು. ಶತಮಾನಗಳಷ್ಟು ಹಳೆಯದಾದ ಆದರೆ ಈಗಲೂ ಬಳಕೆಯಲ್ಲಿರುವ ಇಂತಹ ಬಾವಿಗಳನ್ನು ರಾಜಸ್ಥಾನದಲ್ಲಿ ಕಾಣಬಹುದು.



ರಾಜಸ್ಥಾನದ ದೇವ ಭೂಮಿಗಳು

ರಾಜಸ್ಥಾನದ ಹಳ್ಳಿಗಳಲ್ಲಿ ಯಾರ ವೈಯಕ್ತಿಕ ಒಡೆತನಕ್ಕೂ ಸೇರದ ಆದರೆ, ಇಡೀ ಹಳ್ಳಿಗೇ ಸೇರಿದ ಕೆಲವು ಭೂಮಿಯಿರುತ್ತದೆ. ಸ್ಥಳೀಯವಾಗಿ 'ಅರಾನ್' (AURAN) ಎಂಬ ಹೆಸರಿನ ಈ ಭೂಮಿ ದೇವರಿಗೆಂದು ಧಾರ್ಮಿಕ ಹೆಸರಿನಲ್ಲಿ ಕಾಯ್ದಿಟ್ಟವುಗಳು ; ಈ ಭೂಮಿಯಲ್ಲಿನ ಗಿಡ ಮರಗಳನ್ನು ಕಡಿಯುವ ಅಧಿಕಾರ ಯಾವ ವ್ಯಕ್ತಿಗೂ ಇಲ್ಲ. ಹಾಗೇನಾದರೂ ಕಡಿದಲ್ಲಿ ಅಂತಹ ವ್ಯಕ್ತಿಗೆ ಗ್ರಾಮಪಂಚಾಯಿತಿಯವರು ತಕ್ಕ ಶಿಕ್ಷೆ ವಿಧಿಸುವ ಅಧಿಕಾರ ಹೊಂದಿರುತ್ತಾರೆ. ಅವರು ಕೊಡುವ ಶಿಕ್ಷೆಗಳು ಈ ರೀತಿ ಧಾರ್ಮಿಕ ದೃಷ್ಟಿಯಲ್ಲಿ ಭೂಮಿಯನ್ನು ಮುಡಿಪಾಗಿಡುವುದರ ಹಿನ್ನೆಲೆಯಲ್ಲಿ, ಅವರಿಗೆ ಸಮಸ್ತ ಜೀವಜಂತುಗಳ ಬಗೆಗಿರುವ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

ಒಂದು ಹಳ್ಳಿಯಲ್ಲಿ ಈ ರೀತಿಯ ದೇವಭೂಮಿಯಲ್ಲಿನ ಮರವೊಂದನ್ನು ವ್ಯಕ್ತಿಯೊಬ್ಬ ಕಡಿದಾಗ ಅಲ್ಲಿನ ಗ್ರಾಮ ಪಂಚಾಯಿತಿಯ ಹಿರಿಯರು ವಿಧಿಸಿದ ಶಿಕ್ಷೆ ಹೀಗಿತ್ತು. ಆ ವ್ಯಕ್ತಿ ನಡುಬಿಸಿಲಿನಲ್ಲಿ ಬರಿಗಾಲಲ್ಲಿ ನಿಂತು ಎರಡೂವರೆ ಕೆ.ಜಿ. ಕಾಳನ್ನು ಹಕ್ಕಿಗಳಿಗೆ ನೀಡತಕ್ಕದ್ದು. ಈ ಶಿಕ್ಷೆ ಬಹಳ ಅರ್ಥಪೂರ್ಣ. ಮರಗಳನ್ನು ಕಡಿದರೆ ಮನುಷ್ಯ ಎದುರಿಸಬೇಕಾಗಿ ಬರುವ ಬಿಸಿವಾತಾವರಣದ ಸೂಚನೆ ನೀಡುತ್ತದೆ. ಈ ಬರಿಗಾಲಿನಲ್ಲಿ ಬಿಸಿಲಿನಲ್ಲಿ ನಿಲ್ಲುವ ಶಿಕ್ಷೆ. ಮರ ಕಡಿದದ್ದರಿಂದ ಮನುಷ್ಯನಿಗೆ ಮಾತ್ರವಲ್ಲ ಪ್ರಾಣಿ ಪಕ್ಷಿಗಳಿಗೂ ತೊಂದರೆ. ಹಕ್ಕಿಗಳಿಗೆ ಆಹಾರ ಹಾಗೂ ಆಸರೆ ನೀಡುತ್ತಿದ್ದ ಮರವನ್ನು ಕಡಿದದ್ದಕ್ಕೆ ಪ್ರಾಯಶ್ಚಿತ್ತವಾಗಿ ಅವುಗಳಿಗೆ ಎರಡೂವರೆ ಕೆ.ಜಿ. ಕಾಳು ತಿನ್ನಿಸಬೇಕೆನ್ನುವ ಶಿಕ್ಷೆ ವಿಧಿಸುತ್ತಾರೆ.

ಬಾಷಾಂತರ : ತೇಜಸ್ವಿನಿ

ಮೂಲ : ಡಾ. ಸುಧೀರೇಂದ್ರ ಶರ್ಮ

ಹನಿ ಬೀ ಸಂ 7(3), 1996

"ಹಿತ್ತಲಗಿಡ"ದ ಎಲ್ಲಾ ಹಳೇ ಸಂಚಿಕೆಗಳನ್ನು ರೂ.200 ಪಾವತಿ ಮಾಡಿ ಪಡೆಯಬಹುದು.

ಬಹು ಉಪಯೋಗಿ ಹುಣಸೆ - ನಾಟಿ ರುಚಿತನದ ಸಂಕೇತ

ನಾಗರತ್ನ ಬಿ.ಕೆ., ತೃತೀಯ ಕೃಷಿ ವಿದ್ಯಾರ್ಥಿನಿ, ಬೆಂಗಳೂರು

ಹುಣಸೆ ಕಡಿಮೆ ಮಳೆ ಬೀಳುವ ಪ್ರಾಂತ್ಯದಲ್ಲಿ ಬೇಲಿಗಳ ಬಳಿ ಬಿಸಾಡಿದ ಬೀಜಗಳಿಂದಲೇ ಬೆಳೆದು ಫಲ ನೀಡುವ ವೃಕ್ಷ. ಪ್ರತಿ ವರ್ಷ ನಾಲ್ಕು ಹಂತಗಳಲ್ಲಿ, ಚಿಗುರು, ಹೂ, ಕಾಯಿ ಮತ್ತು ಹಣ್ಣು ಎಂದು ತನ್ನ ಜೀವನವನ್ನು ನಿರ್ವಹಿಸುತ್ತದೆ. ಎಲ್ಲರ ಬಾಯಿಯಲ್ಲಿ ನೀರಿಳಿಸುವ ಹಣ್ಣು ಯಾವುದು ಎಂದರೆ ಸಹಜವಾಗಿ ನೆನಪಿಗೆ ಬರುವುದು ಹುಣಿಸೆ ಎಂಬ ಪದ. ಪ್ರತಿಯೊಂದು ಹಂತದಲ್ಲಿಯೂ ಧಾರಾಳ ಉಪಯೋಗ ನೀಡುವ ಹುಣಿಸೆ ನಿಜಕ್ಕೂ ಒಂದು ಕಲ್ಪವೃಕ್ಷವೇ ಸರಿ ಎನ್ನಬಹುದು.

ಯುಗಾದಿ ಸಮಯದಲ್ಲಿ ಜನತೆಗೆ ಹೊಸ ವರುಷ ಬರುವುದು ಪ್ರಕೃತಿಯ ನವ ಚೈತನ್ಯದಿಂದ ಅಲ್ಲವೇ? ಹಾಗೆಯೇ ಹುಣಸೆಯು ಸಹ ಹೊಸ ಚಿಗುರು ಹಳೇ ಬೇರುಗಳಿಂದ ಕೂಡಿಕೊಂಡು ನಸುಗೆಂಪಿನಲ್ಲಿ ಮುದ್ದಾಗಿ ಕಂಗೊಳಿಸಿ, ಮಾರ್ಚ್-ಏಪ್ರಿಲ್ ತಿಂಗಳಲ್ಲಿ ತನ್ನ ಸೊಬಗನ್ನು ಮೆರೆಯುತ್ತದೆ.

ಮೊದಲಿನ ಚಿಗುರು

ಬರೀ ಸೌಂದರ್ಯದಿಂದ ಕಂಗೊಳಿಸದೇ ಚಿಗುರ ಎಳೆತನದಲ್ಲಿಯೂ ಮಾನವನಿಗೆ ರುಚಿ ತೋರಿದೆ. ಶುಚಿಗೊಳಿಸಿದ ಚಿಗುರನ್ನು ಸಾಂಬಾರ್ (ಸಾರು) ಮಾಡಿದರೆ ಎಂಥವರಿಗೂ ರಾಗಿಮುದ್ದೆಯ ನೆನಪು ತರುತ್ತದೆ. ಇಲ್ಲವೇ ಅಕ್ಕಿರೊಟ್ಟಿಯ ಚಿತ್ರಣ ಕಣ್ಣಮುಂದೆ ಬರುವುದರೊಂದಿಗೆ ಬಾಯಿಯಲ್ಲಿ ನೀರು ಸುರಿಸುತ್ತದೆ. ಈ ಸಾರಿಗೆ ಕೆಲವರು 'ಗಟ್ಟಿಸೊಪ್ಪು' ಎಂದರೆ, ಮತ್ತೆ ಕೆಲವರು 'ಮಸ್ಸೊಪ್ಪು' ಎನ್ನುತ್ತಾರೆ. ಮತ್ತೆ ಕೆಲವರು ಹುಳಿಸೊಪ್ಪು ಎನ್ನುವರು. ಇನ್ನು ಕೆಲವರು ಪಪ್ಪು (ತೆಲುಗಿನ ಪದ) ಎಂದು ಕರೆದು ರುಚಿಯ ಸ್ಮರಿಸುವರು. ಇದೇ ಚಿಗುರನ್ನು ಒಣಗಿಸಿ ಅದನ್ನು ಹುಳಿಯ ಬದಲಾಗಿ ಉಪಯೋಗಿಸಬಹುದು ಅಥವಾ ಉಪ್ಪು ಖಾರಗಳೊಂದಿಗೆ ಬೆಳ್ಳುಳ್ಳಿ ಸೇರಿಸಿ ಚಟ್ನಿಪುಡಿ ಮಾಡಿ ಊಟಕ್ಕೆ ನಂಚಿಕೆಯಾಗಿ ಬಳಸಬಹುದು. ಅಥವಾ ಪಲ್ಯ (Curry)ಗಳಿಗೆ ಮೇಲೋಗರವಾಗಿ ಉಪಯೋಗಿಸಬಹುದು. ಈ ರೀತಿ ಒಣಗಿಸಿಟ್ಟ ಎಳೆಯ ಚಿಗುರು ವರ್ಷವಿಡೀ ಹಾಳಾಗದಂತೆ ತನ್ನ ತಾಜಾತನವನ್ನು ಉಳಿಸಿಕೊಳ್ಳುತ್ತದೆ. ಇದನ್ನು ಕೆಲವರು ಚಿತ್ರಾನ್ನ, ಪುಳಿಯೊಗರೆ, ಬಿಸಿ ಬೇಳೆಬಾತ್ ಇತ್ಯಾದಿ ತಿಂಡಿಗಳಿಗೆ ಹುಳಿಯ ಬದಲಾಗಿ ಉಪಯೋಗಿಸುತ್ತಾರೆ.

ಚಿಗುರಿನ ನಂತರ ಬರುವ ಹಂತವೇ ಹೂ.

ಇದು ಎರಡನೇ ಹಂತ. ಈ ಹಂತ ಏಪ್ರಿಲ್ ಕೊನೆಯಿಂದ ಪ್ರಾರಂಭವಾಗಿ ಜೂನ್ ಆರಂಭದಲ್ಲಿ ಅಂತ್ಯಗೊಳ್ಳುತ್ತದೆ. ಈ ಸಮಯದಲ್ಲಿ ಹುಣಸೆ ಮರವು ತನ್ನ ಹೂಗಳಿಂದ ಅಲಂಕೃತಳಾಗಿ ಬಂಗಾರ ಕಳಸ ಹೊತ್ತಂತೆ ಹಳದಿ ಬಣ್ಣದಿಂದ ಹಸಿರ ಎಲೆಗಳ ಮಧ್ಯೆ ಎಳೆ ಬಿಸಿಲಿಗೆ ತನ್ನ ಮೈ ಒಡ್ಡಿ ನಿಂತು ನೋಡುವ ಕಣ್ಣುಗಳಿಗೆ ಮುದ ನೀಡುವಂತಾಗುತ್ತದೆ. ನೋಡುವ ಕಣ್ಣುಗಳ ಬೆರಗುಗೊಳಿಸುವುದಲ್ಲದೆ ತನ್ನ ಮೊಗ್ಗು ಹೂವುಗಳಲ್ಲಿ ಉಪಯುಕ್ತತೆಯನ್ನು ತುಂಬಿ ಕೊಂಡು ಮಾನವರಿಗೆ ಮನವರಿಕೆ ಮಾಡಿಕೊಟ್ಟಿದೆ. ಈ ಹೂ ಮೊಗ್ಗುಗಳು ಸಿಹಿಯಿಂದ ತುಂಬಿಕೊಂಡು ದಳಗಳು ಹುಳಿಯಿಂದ ಕೂಡಿದ್ದು ಮೊಗ್ಗುಗಳು ಬೆಳವಣಿಗೆಯ ಎರಡನೇ ಹಂತವಾಗಿದೆ. ಈ ಹೂ ಮೊಗ್ಗುಗಳನ್ನು ಚಿಗುರಿನಂತೆಯೇ ಮನುಷ್ಯ ತನ್ನ ಬಳಕೆಗೆ ಉಪಯೋಗಿಸಿ ಕೊಂಡಿದ್ದಾನೆ. ಆದರೆ ಈ ಹೂಗಳು ಮಧು ತುಂಬಿಕೊಂಡು, ದುಂಬಿಗಳ ಬರಸೆಳೆದು, ತನ್ನ ಗರ್ಭಧಾರಣೆಗೆ ಅನುಕೂಲ ಮಾಡಿಕೊಂಡಿದೆ.

ನಂತರದ ಕಾಯಿ

ಪುಟ್ಟ ಪುಟ್ಟ ಉದ್ದನೆಯ ಕಂದು ಮಿಶ್ರಿತ ಹಸಿರು ಕಾಯಿಯೋ ಮೂರನೇ ಹಂತ. ಈ ಕಾಯಿಗಳು ದಿನದಿಂದ ದಿನಕ್ಕೆ ಮೈತುಂಬಿ ಬೆಳೆದು ಕಂಡವರ ಬಾಯಿಯಲ್ಲಿ ನೀರೂರಿಸುತ್ತದೆ. ಅದರಲ್ಲೂ ಬಸರಿ ಹೆಣ್ಣಿಗೆ ತನ್ನ ಬಯಕೆಯನ್ನು ತೀರಿಸುವ ಪ್ರೇಮ ಸಂಜೀವಿನಿಯಾಗಿದೆ. ಸಂಪೂರ್ಣವಾಗಿ ಬಲಿತ, ಹಣ್ಣಾಗದಿರುವ ಕಾಯಿಗಳನ್ನು ಮಕ್ಕಳ ಮುಂದೆ ಕಾಣಿಸಿದರೆ ಅವುಗಳ ಸಂಭ್ರಮ ಹೇಳತೀರದು. ಅದಕ್ಕೆ ಉಪ್ಪು, ಜೀರಿಗೆ, (Cumin seeds) ಮತ್ತು ಮೆಣಸಿನಕಾಯಿ ಗಳೊಂದಿಗೆ ಸೇರಿಸಿ ಕುಟ್ಟಿಕೊಂಡು ಕಡ್ಡಿಯ ತುದಿಯಲ್ಲಿ ಇಟ್ಟುಕೊಂಡು 'ಕುಟ್ಟುಂಡಿ' ಎಂದು ತಿನ್ನುವ ಮಕ್ಕಳನ್ನು ನೋಡಿದಾಗ ದೊಡ್ಡವರಿಗೂ ತಿನ್ನುವ ಬಯಕೆ ಬರುವುದು ಸಹಜ. ಇದೇ ಕಾಯಿ ಸ್ವಲ್ಪ ಮಾಗಿದಾಗ ಅದನ್ನು 'ದೊಂಬೇ ಹಣ್ಣು' ಎನ್ನುವರು. ಈ 'ದೊಂಬೇ ಹಣ್ಣೆ'ಗೆ ಉಪ್ಪು, ಮೆಣಸಿನಕಾಯಿ ಹಾಗೂ ಮೆಂತ್ಯ (Methi) ವನ್ನು ಸೇರಿಸಿ ರುಬ್ಬಿ ತಯಾರಿಸಿದ 'ಹುಣಸೆ ಚಟ್ನಿ' ಅಥವಾ 'ಹುಣಸೆ ತೊಕ್ಕು' (ತೆಲುಗಿನಿಂದ ಬಂದ ಪದ ತೊಕ್ಕು = ಗೊಜ್ಜು ಅಥವಾ ಚಟ್ನಿ) ಎಂದು ಹೇಳಿಕೊಳ್ಳುವ ಈ ಚಟ್ನಿ ತನ್ನ ತಾಜಾತನವನ್ನು ಒಂದು ವರ್ಷದ ವರೆಗೂ ಪಡೆದಿರುತ್ತದೆ.

ಕೊನೆಯ ಹಂತವಾದ ಹುಣಸೇ ಹಣ್ಣು

ಹುಣಸೇ "ಮರ ಮುಪ್ಪಾದರೆ ಹುಳಿ ಮುಪ್ಪೆ" ಎಂಬ ಗಾದೆಗೆ ಅರ್ಥ ನೀಡಿದೆ. ತನ್ನ ತೂಕದಲ್ಲಿ ಕಾಯಿಗಿಂತ ಹಗುರವಾಗಿ ತನ್ನಲ್ಲಿರುವ ನೀರಿನ ಅಂಶವನ್ನು ದೂರ ತಳ್ಳಿರುವುದು. ಈ ಹಣ್ಣನ್ನು ಸಿಪ್ಪೆಯಿಂದ ಬೇರ್ಪಡಿಸಿ, ಮೂರು ನಾಲ್ಕು ದಿನಗಳ ಕಾಲ ಬಿಸಿಲಿನಲ್ಲಿ ಒಣಗಿಸಿ ಬೀಜವನ್ನು ಕುಟ್ಟಿ ಬೇರ್ಪಡಿಸಿ ಶೇಖರಿಸುವರು. ಹಣ್ಣಿನಲ್ಲಿ ಬೀಜಗಳನ್ನು ಬೇರ್ಪಡಿಸದಿದ್ದರೆ ಹುಳಗಳು ದಾಳಿ ಮಾಡಿ ಹಣ್ಣಿನ ತಾಜಾತನ ಮತ್ತು ಗುಣವನ್ನು ಹಾಳು ಮಾಡುತ್ತವೆ. ನಾರನ್ನು ಬೇರ್ಪಡಿಸದಿದ್ದರೆ ಹುಳಿಯನ್ನು ಹಿಂಡುವಾಗ ಕೈಗೆ ಜಾರದೆ ಇರುವುದು ಎಂದು ಕೆಲವರು ಹಾಗೇ ಬಿಡುವರು. ಕೆಲವರು ಹಣ್ಣಿನ ಮೇಲಿನ ನಾರನ್ನು ಬೇರ್ಪಡಿಸಿ ಅದನ್ನು ಶುಚಿಮಾಡಿ ಇಡುವುದರಿಂದ ಮೇಲ್ಮುಖ ಕಂದು ಬಣ್ಣದಿಂದ ಮತ್ತು ಒಳಮುಖ ಬಿಳಿಬಣ್ಣದಿಂದ ಕೂಡಿರುವುದು.

ಬಿಸಾಡಿದ ಬೀಜ, ನಾರು, ಸಿಪ್ಪೆಗಳು ಸಹ ಒಳ್ಳೆಯ ಉಪಯುಕ್ತತೆ ಹೊಂದಿವೆ. ಬೀಜಗಳನ್ನು ಹುರಿದು ಮೇಲಿನ ಕಪ್ಪು ಸಿಪ್ಪೆ (Shell) ತೆಗೆದು ತಿಂದರೆ ಇದರ ರುಚಿಯು ಕಡಲೆಕಾಯಿಯಂತೆ ಇರುವುದು.

ಹೀಗೆ ಆರೋಗ್ಯ, ನಾಟೀ ರುಚಿತನ, ಸಮುದಾಯ ಆಯಾಮಗಳನ್ನು ಹೊಂದಿರುವ ಹುಣಸೆಯನ್ನು ನಿಜ ಅರ್ಥದಲ್ಲಿ ಕಲ್ಪವೃಕ್ಷಕ್ಕೆ ಹೋಲಿಸುವುದು ಉಚಿತವೇ ಆಗಿದೆ.

"ಸವಣೂರಿನ ಖಾರಾ" ಸ್ಪೆಷಲ್

ಧಾರವಾಡ ಜಿಲ್ಲೆಯ ಸವಣೂರಿನ "ಶೀರವಾಲ ಖಾರಾ" ಇಂದು ಎಲ್ಲರ ಮೆಚ್ಚಿನ ಖಾದ್ಯ ಎನಿಸಿ, ಜಿಲ್ಲೆ, ರಾಜ್ಯ, ದೇಶದ ಗಡಿ ದಾಟಿ ಕಡಲಾಚೆಗೂ ತನ್ನ ಕೀರ್ತಿ ಹರಡಿರುವುದು. ಈ ಖಾರಾ ಜನಪ್ರಿಯತೆಗೊಂದು ಮುಖ್ಯ ಸಾಕ್ಷಿ. ಆದರೆ ಈ ಜನಪ್ರಿಯತೆ, ಖ್ಯಾತಿ ಸುಲಭದಲ್ಲಿ ಒಳಿತಿಲ್ಲ. ಈ ಯಶೋಗಾಥೆಯ ಹಿಂದೆ ಕುಟುಂಬವೊಂದರ ತ್ಯಾಗವಿದೆ. ನಿಸ್ವಾರ್ಥತೆ ಇದೆ.

ಇದೆಲ್ಲ ನಡೆದದ್ದು 1937 - 38 ಸುಮಾರಿನಲ್ಲಿ. ಆಗ ಶಿವಲಾಲ್ ತೋಥಕ್ ಕುಟುಂಬ ವಾಸಿಸುತ್ತಿದ್ದುದು ದೂರದ ಕರಾಚಿಯಲ್ಲಿ. ಅಲ್ಲಿ ಸಣ್ಣದೊಂದು ಸ್ವೀಟ್‌ಸ್ಟಾಲ್ ನಡೆಸುತ್ತಿದ್ದರು. ಸವಣೂರು ಸಂಸ್ಥಾನದ ನವಾಬರಾಗಿದ್ದ ದಲೇಖಾನ್ ಆಕಸ್ಮಿಕವೆಂಬಂತೆ ಕರಾಚಿಗೆ ಬಂದಿದ್ದರು. ಶಿವಾಲಾಲರ ಖಾರಾಕ್ಕೆ ಮಾರುಹೋದ ದಿಲೇಖಾನರು "ಸವಣೂರಿಗೆ" ಬನ್ನಿ ಎಂದು ಆಹ್ವಾನ ಕೊಟ್ಟರು. ಬೇಕಾದ ಸಹಾಯ ಸಹಕಾರ ನೀಡುವುದಾಗಿ ತಿಳಿಸಿದರು. ಶಿವಲಾಲರ ಕುಟುಂಬ ಸವಣೂರಿಗೆ ವಲಸೆ ಬಂದದ್ದು ಹೀಗೆ. ಶಿವಲಾಲ್ ಖಾರಾ ನಾಡಿನಾದ್ಯಂತ ಮನೆಮಾತಾಗಿ ಹೋಗಿದೆ. ಇತರ ರಾಜ್ಯಗಳಾದ ರಾಜಸ್ಥಾನ, ಗುಜರಾತ್, ಉತ್ತರ ಪ್ರದೇಶ, ಮಹಾರಾಷ್ಟ್ರಕ್ಕೂ ಇಲ್ಲಿನ ಖಾರಾ ರವಾನೆಯಾಗುತ್ತದೆ. ಇಷ್ಟೇ ಅಲ್ಲ, ದೂರದ ದೇಶಗಳಾದ ಮಸ್ಕಟ್, ದುಬೈ, ಆಫ್ರಿಕಾ, ಅಮೆರಿಕಾ ಮುಂತಾದ ದೇಶಗಳಲ್ಲೂ ಶಿವಲಾಲ ಖಾರಾ ನಲಿದಾಡತೊಡಗಿದೆ. ಧಾರವಾಡ ಜಿಲ್ಲೆಯ ಕೆಲವು ಕಡೆ ಖಾರಾದ ಅಂಗಡಿ ತೆರೆಯಲಾಗಿದೆ.

"ಶಿವಲಾಲ್ ಖಾರಾ"ದ ಬೆಲೆ ಒಂದು ಕೆಜಿಗೆ ಐವತ್ತು ರೂಪಾಯಿ ಜೆ.ಎಂ.ಆರ್ ಹೆಸರಿನ ಪಾಲಿಥಿನ್ ಬ್ಯಾಗಿನಲ್ಲಿ ಮಾರಾಟ. ಈ ಖಾರಾದಲ್ಲಿರುವುದು ಅವಲಕ್ಕಿ, ಸೇವು, ಒಣದ್ರಾಕ್ಷಿ, ಒಣಕೊಬ್ಬರಿಯ ಚೂರುಗಳು ಸಿಹಿ ಮಿಶ್ರಿತ ತುಪ್ಪದ ಸುವಾಸನೆ ಹೊಂದಿರುವ ಈ ಖಾರಾವನ್ನು ಒಮ್ಮೆ ಬಾಯೊಳಗೆ ಹಾಕಿಕೊಂಡರೆ ಸಾಕು, ಆಹಾ! ಎಂಬ ಉದ್ಗಾರ ತಾನೇ ತಾನಾಗಿ ಹೊರಟು ಬಿಡುತ್ತದೆ!

ಕೃಪೆ : ಕನ್ನಡ ಪ್ರಭ, ಫೆಬ್ರುವರಿ 23, 1998

ಸಾಂಸ್ಕೃತಿಕ ಆಯಾಮದ ತುಳಸಿಯಲ್ಲೂ ಪೌಷ್ಟಿಕ ಮೌಲ್ಯ

ತುಳಸಿ ಭಾರತೀಯರಿಗೆ ಅತ್ಯಂತ ಪವಿತ್ರವಾದ ಗಿಡ. ತುಳಸಿಯಿಲ್ಲದೆ ದೇವರಿಗೆ ಅರ್ಚನೆಯಿಲ್ಲ, ತುಳಸೀ ಗಿಡವಿಲ್ಲದ ಮನೆಗಳಿಲ್ಲ. ತುಳಸೀ ಗಿಡದ ಮೇಲೆ ಹಾಯ್ದ ಗಾಳಿಯು ಮನೆಯ ಒಳಗೆ ಪ್ರವೇಶಿಸಿದರೆ ಶುಭ ಹಾಗೂ ಆರೋಗ್ಯಕರವೆಂದು ನಂಬಿಕೆ. ಗೃಹಿಣಿಯರು ನಿತ್ಯವೂ ತುಳಸಿ ಪೂಜೆ ಮಾಡಿ ಮಾಂಗಲ್ಯ ಭಾಗ್ಯ ಶಾಶ್ವತವಾಗಿರಲೆಂದು ಪ್ರಾರ್ಥಿಸುವುದು ನಮ್ಮಲ್ಲಿಯ ಸಂಪ್ರದಾಯ. ಬರೀ ಇಂತಹ ಧಾರ್ಮಿಕ ನಂಬಿಕೆಯಲ್ಲದೆ ತುಳಸಿಯ ಔಷಧೀಯ ಗುಣಗಳನ್ನೂ ಭಾರತೀಯ ಪ್ರಾಚೀನ ವೈದ್ಯರು ಕಂಡುಕೊಂಡು ಹಾಡಿಹೊಗಳಿದ್ದಾರೆ. ಅಥರ್ವಣ ವೇದದಲ್ಲಿ, ಚರಕ ಮತ್ತು ಭಾವಮಿಶ್ರರ ಆಯುರ್ವೇದ ಗ್ರಂಥಗಳಲ್ಲಿ ತುಳಸಿಯ ಎಲೆಯ ಮಹತ್ವ ಮತ್ತು ಉಪಯೋಗದ ಬಗ್ಗೆ ಉಲ್ಲೇಖವಿದೆ. ಕಫ, ವಾಯು ಹಾಗೂ ನಂಜನ್ನು ಹೋಗಲಾಡಿಸುವ ವಿಶಿಷ್ಟ ಗುಣವನ್ನು ಇದು ಹೊಂದಿದೆ. ಇದರ ಮತ್ತೊಂದು ಅಚ್ಚರಿ ಯನ್ನುಂಟು ಮಾಡುವ ಗುಣವೆಂದರೆ ನಿಗದಿತ ಪ್ರಮಾಣದ ಎಲೆಗಳ ಸೇವನೆಯಿಂದ ಅಧಿಕ ಹಾಗೂ ಕಡಿಮೆ ರಕ್ತದೊತ್ತಡ ಎರಡೂ ತೊಂದರೆಗಳಿಗೆ ಉಪಶಮನ ಕಂಡು ಬರುತ್ತದಂತೆ! ಹೀಗೆ ಎಲ್ಲೆಡೆ ಸುಲಭವಾಗಿ ದೊರೆಯುವ ವೆಚ್ಚರಹಿತ ಹಾಗೂ ಅತ್ಯಂತ ಪರಿಣಾಮಕಾರಿಯಾದ ತುಳಸಿ ಎಲೆಗಳನ್ನು ಆಹಾರದಲ್ಲೂ ಉಪಯೋಗಿಸುವ ಪ್ರಯೋಗಗಳು ನಡೆಯುತ್ತಿವೆ. ಈಗಾಗಲೇ ಕೆಲವೆಡೆ ಎಲೆಗಳನ್ನು ಚಹಾ ಮತ್ತು ಕೋಸಂಬರಿ (ಸಲಾಡ್) ಗಳ ತಯಾರಿಕೆಯಲ್ಲಿ ಪರಿಮಳ ವರ್ಧನೆಗೆ ಸೇರಿಸುವುದುಂಟು.

ಮುಂಬಯಿಯಲ್ಲಿ ನಡೆಸಿದ ಆಹಾರವಿಜ್ಞಾನದ ಸಂಶೋಧನೆಯೊಂದರ ಪ್ರಕಾರ ನೂರು ಗ್ರಾಂ ತಾಜಾ ತುಳಸಿ ಎಲೆಯಲ್ಲಿ ಪೋಷಕಾಂಶಗಳು ಈ ರೀತಿ ಇವೆ.

> ತೇವಾಂಶ79.6 ಗ್ರಾಂ, ಕ್ಯಾಲ್ಸಿಯಂ 360 ಮಿ.ಗ್ರಾಂ., ಪ್ರೋಟೀನ್ 3.4 ಗ್ರಾಂ, ಕಬ್ಬಿಣ 79 ಮಿ.ಗ್ರಾಂ., ಶಕ್ತಿ 71ಕಿ.ಕ್ಯಾಲರಿ, ಫಾಸ್ಫರಸ್395 ಮಿ.ಗ್ರಾಂ., ಶರ್ಕರಪಿಷ್ಟ 10.7 ಗ್ರಾಂ, ವಿಟಮಿನ್ ಸಿ 223 ಮಿ.ಗ್ರಾಂ. ನಾರಿನಂಶ2.2 ಗ್ರಾಂ, ಆಕ್ಸಾಲಿಕ್ ಆಮ್ಲ 320, ಖನಿಜಾಂಶ 2.5 ಗ್ರಾಂ, ಕೊಬ್ಬು 1.6 ಗ್ರಾಂ.

ಇತರ ಸೊಪ್ಪಿನ ತರಕಾರಿಗಳಂತೆ ತುಳಸಿ ಎಲೆಯಲ್ಲಿ ಪ್ರೋಟೀನ್, ಕೊಬ್ಬು ಹಾಗೂ ಶರ್ಕರ ಪಿಷ್ಟಗಳು ಕಡಿಮೆ ಪ್ರಮಾಣ ದಲ್ಲಿದ್ದರೂ ವಿಟಮಿನ್ ಸಿ ಮೌಲ್ಯವು ಅತ್ಯಧಿಕ ಪ್ರಮಾಣದಲ್ಲಿದೆ. (220 ಮಿ.ಗ್ರಾಂ./100 ಗ್ರಾಂ.) ಇತರ ಸೊಪ್ಪಿನ ತರಕಾರಿಗಳಲ್ಲಿ ವಿಟಮಿನ್ ಸಿ ಪ್ರತಿಶತ 100 ಮಿ.ಗ್ರಾಂ ಗಿಂತ ಕಡಿಮೆ ಪ್ರಮಾಣದಲ್ಲಿದೆ. ಅಲ್ಲದೆ ಖನಿಜಾಂಶಗಳಾದ ಕಬ್ಬಿಣ, ಕ್ಯಾಲ್ಸಿಯಂ ಹಾಗೂ ಫಾಸ್ಫರಸ್ ಕೂಡಾ ಗಮನೀಯ ಪ್ರಮಾಣದಲ್ಲಿವೆ. ಒಬ್ಬ ಮಧ್ಯ ವಯಸ್ಕನಿಗೆ ದಿನಕ್ಕೆ 25 ಗ್ರಾಂಗಳಷ್ಟು ತುಳಸ ಎಲೆಯ ಸೇವನೆಯಿಂದ ದಿನಕ್ಕೆ ಬೇಕಾಗುವಷ್ಟು ವಿಟಮಿನ್ ಸಿ ಹಾಗೂ ಕಬ್ಬಿಣದ ಅವಶ್ಯಕತೆ ಪೂರೈಕೆಯಾಗುತ್ತದೆ. ಸಾಮಾನ್ಯವಾಗಿ ಸೊಪ್ಪಿನ ತರಕಾರಿಗಳನ್ನು ಸೇವಿಸಿದಾಗ ಅವುಗಳಲ್ಲಿರುವ ಆಕ್ಸಾಲಿಕ್ ಆಮ್ಲ ಎಂಬ ಅಂಶವು ಕ್ಯಾಲ್ಸಿಯಂನ ಪಚನಕ್ರಿಯೆಗೆ ತಡೆಯುಂಟುಮಾಡಿ ರಕ್ತಗತವಾಗುವುದನ್ನು ತಡೆಯುತ್ತದೆ. ನಾವು ಹೆಚ್ಚಾಗಿ ಉಪಯೋಗಿಸುವ ದಂಟಿನ ಸೊಪ್ಪಿನಲ್ಲಿ ಅಕ್ಸಾಲಿಕ್ ಆಮ್ಲವು 700 ಮಿ.ಗ್ರಾಂ./100 ಗ್ರಾಂ ಇದ್ದರೆ ತುಳಸಿ ಎಲೆಯಲ್ಲಿ 320 ಮಿ.ಗ್ರಾಂ. / 100ಗ್ರಾಂ ಇದ್ದುದು ಕಂಡು ಬಂದಿದೆ. ಆದ್ದರಿಂದ ತುಳಸಿ ಎಲೆಯನ್ನು ಸೇವಿಸಿದಾಗ ಕ್ಯಾಲ್ಸಿಯಂ ಪೋಷಕಾಂಶವು ದೇಹಕ್ಕೆ ದೊರೆಯುವ ಪ್ರಮಾಣ ಹೆಚ್ಚು.

ನಾವು ದಿನನಿತ್ಯ ಸೊಪ್ಪಿನಿಂದ ತಯಾರಿಸುವ ಸಾರು, ಹುಳಿ, ಪಲ್ಯ, ತೊವ್ವೆ, ಚಟ್ನಿ, ಸೂಪ್ ಹಾಗೂ ಮಸಾಲೆ ರೊಟ್ಟಿಗಳಲ್ಲಿ ಶೇ.15 ಹಾಗೂ ಶೇ.30ರ ಪ್ರಮಾಣದಲ್ಲಿ ತುಳಸಿ ಎಲೆಗಳನ್ನು ಸೇರಿಸಿ ತಯಾರಿಸಿ ನಡೆಸಿದ ಪ್ರಯೋಗಗಳಿಂದ ಆಸಕ್ತಿಕರ ಫಲಿತಾಂಶಗಳು ಕಂಡು ಬಂದವು. ಹೋಲಿಸಿ ನೋಡಿದಾಗ ಶೇ.15 ರ ಪ್ರಮಾಣದಲ್ಲಿ ತುಳಸಿ ಸೇರಿಸಿದ ಆಹಾರ ಪದಾರ್ಥಗಳು ಹೆಚ್ಚು ರುಚಿಕರವೆಂದು ಮೆಚ್ಚುಗೆ ಗಳಿಸಿದವು. ತುಳಸಿ ಎಲೆಗಳನ್ನು ಸೇರಿಸಿ ತಯಾರಿಸಿದ ಮಸಾಲೆ ಟೀ, ಮೋಸಂಬಿ ಶರಬತ್ ಹಾಗೂ ಶುಂಠಿ ಮೆಣಸಿನ ಕಷಾಯಗಳು ಉತ್ತಮವೆಂದು ಪ್ರಶಂಸೆಯನ್ನು ಗಳಿಸಿದವು.

ಇದರಿಂದ ತುಳಸಿ ಗಿಡವನ್ನು ಪ್ರತಿ ಮನೆಯ ಅಂಗಳದಲ್ಲೂ ಬೆಳೆಸಬೇಕೆಂಬ ಭಾರತೀಯ ಸಂಪ್ರದಾಯಕ್ಕೆ ವೈಜ್ಞಾನಿಕ ಸಿದ್ಧಾಂತದ ನೆಲೆಗಟ್ಟು ಸಹ ದೊರೆದಂತಾಗಿದೆ.

ಶ್ರೀಮತಿ ಬನು ದೇಶಪಾಂಡೆ
ಗ್ರಾಮೀಣ ಗೃಹ ವಿಜ್ಞಾನ ವಿಭಾಗ
ಕೃ.ವಿ.ವಿ. ಬೆಂಗಳೂರು

ನಾಟಿ ಪಶುವೈದ್ಯ ಪಾಲಯ್ಯನ ದೇಶೀಯ ಪದ್ಧತಿಗಳು

- ನಾಗರತ್ನ ಬಿ.ಕೆ., ತೃತೀಯ ಕೃಷಿ ವಿದ್ಯಾರ್ಥಿನಿ, ಬೆಂಗಳೂರು

ಐವತ್ತರ ಹರೆಯದ ಪಾಲಯ್ಯ ಮೈಲನ ಹಳ್ಳಿ, ಚಿತ್ರದುರ್ಗ ಜಿಲ್ಲೆಯ ನಾಟಿ ವೈದ್ಯ. ಓದು ನಾಲ್ಕನೇ ತರಗತಿಯವರೆಗೆ. ಆದರೆ ಪಶುಗಳ ಆರೋಗ್ಯ ಕಾಪಾಡುವಲ್ಲಿ ಪಡೆದುಕೊಂಡಿರುವ ಅನುಭವ ಅಪಾರ.

ಔಷಧಿಗೆ ಯಾವ ಅಪೇಕ್ಷೆಯೂ ಇಲ್ಲ. 'ಜನಸೇವೆಯೇ ಜನಾರ್ಧನ ಸೇವೆ' ಎಂಬ ಮಾತು ಇಲ್ಲಿ ಸ್ಪಷ್ಟ. ಪಾಲಯ್ಯನವರ ಕೆಲವು ನಾಟಿ ಔಷಧಿಗಳ ಬಗ್ಗೆ ತಿಳಿಯೋಣ.

◆ ಕರು ಹಾಕಿದ ನಂತರ ಹಾಲಿನ ಉತ್ಪನ್ನ ಹೆಚ್ಚಿಸಲು

ಸಜ್ಜೆ (Bajra) ಯನ್ನು 3-4 ಗಂಟೆ ನೀರಿನಲ್ಲಿ ನೆನೆಸಿ, ಈಚಲಗಡ್ಡೆ (Mysore Taddy Palm - *Phoenix sylvestris*) ಮತ್ತು ಎಳನೀರಿನ ತಿರುಳನ್ನು ನೀರಿನಲ್ಲಿ ಅರೆದು ಬಂದ ಮಿಶ್ರಣವನ್ನು ಪಶುಗಳಿಗೆ ದಿನಕ್ಕೆ ಎರಡು ಬಾರಿ ಬೆಳಿಗ್ಗೆ ಮತ್ತು ಸಂಜೆ 10-15 ದಿನಗಳು ತಿನ್ನಿಸುವುದರಿಂದ ಹಾಲಿನ ಉತ್ಪನ್ನ ಹೆಚ್ಚುತ್ತದೆ.

◆ ಕರು ಹಾಕಿದ ನಂತರ ಕಸ ಹೊರಹಾಕಲು

ಕರು ತಾಯಿ ಗರ್ಭದಿಂದ ಹೊರಬಂದ ಅರ್ಧಗಂಟೆ ನಂತರ ಅದು ಕಸ ಹೊರಹಾಕಬೇಕು. ಇಲ್ಲವಾದಲ್ಲಿ ಆಗ ಈ ಚಿಕಿತ್ಸೆ ಮಾಡುವುದರಿಂದ ಬೇಗ ಕಸ ಹೊರಹಾಕುತ್ತವೆ.

ಕೇದಿಗೆ ತೆನೆ *(Pandanus tectorius)* ಯನ್ನು ನೀರಿನಲ್ಲಿ ಅರೆದು ಕುಡಿಸಬೇಕು. ಅಥವಾ ಅಡವಿ ಎಳ್ಳಿನ *(Sesamum wild variety)* ಸೊಪ್ಪನ್ನು ಅರೆದು ಕುಡಿಸಬೇಕು. ಒಂದು ಹಿಡಿ ಸೊಪ್ಪನ್ನು ಒಂದು ಲೀಟರ್ ನೀರಿನಲ್ಲಿ ಹಾಕಿ ಕುಡಿಸಬೇಕು. ನಂತರ ತಿನ್ನಲು ಒಣಹುಲ್ಲನ್ನು ಕೊಡಬೇಕು.

◆ ಕಾಲು ಬಾಯಿ ರೋಗ / ಜರ್ಪು (Foot and Mouth Disease)

ಈ ರೋಗ ಬಂದಾಗ ಬಾಯಿಯಿಂದ ಜೊಲ್ಲು ಸುರಿಯುವುದು, ಕಾಲು ಕುಂಟುವುದು, ಮೈ ಬಿಸಿಯಿಂದ ಇರುವುದು. ಹುಲ್ಲು ಅತೀ ಕಡಿಮೆ ತಿನ್ನುವುದು. ಇವು ಈ ರೋಗದ ಲಕ್ಷಣಗಳು.

ಈ ರೋಗಕ್ಕೆ 2-3 ಲೋಟ ಮಜ್ಜಿಗೆ ಅಥವಾ ಬಿಸಿನೀರಿನಲ್ಲಿ ಎರಡೂವರೆ ತೊಲ ಬೆಳ್ಳುಳ್ಳಿ ಮತ್ತು ಕುಪ್ಪಿ ಸೊಪ್ಪು *(Acalypha indica)* ನ್ನು ಒಂದು ಹಿಡಿ ಅರೆದು ಕುಡಿಸಬೇಕು.

◆ ಚಕ್ರರೋಗ

ಮಾವಿನ ಎಲೆ ಮತ್ತು ಬೇರನ್ನು ಸಮನಾಗಿ ತೆಗೆದುಕೊಂಡು ಅನ್ನದ ಗಂಜಿಯಲ್ಲಿ ಅರೆದು ಮೂರು ಬಾರಿ ದಿನವೊಂದಕ್ಕೆ ಕೊಡಬೇಕು. ಈ ರೀತಿ ದಿನ ಮಾಡುವುದರಿಂದ ಚಕ್ರರೋಗ ವಾಸಿಯಾಗುವುದು.

◆ ದನಗಳ ಕೆಮ್ಮು ನಿವಾರಣೆ

ಎಕ್ಕೆಯ ಕುಡಿ *(Calotropis sp)* ಯನ್ನು ತಂದು ದನಗಳ ಮೂಗಿನ ಹೊಳ್ಳೆಗೆ ಬಡಿದರೆ ಕೆಮ್ಮು ನಿವಾರಣೆಯಾಗುವುದು.

◆ ಖಾರದಿಂದ ದನಗಳು ಉಬ್ಬುವುದು ಅಥವಾ ಮೈದುಂಬುವುದು

ಕೆಂಪು ಜೋಳ (Red Jowar/Sorghum) ದ ಅನ್ನ ಮಾಡಿ ಅಪರಂಜಿ ಸೊಪ್ಪು (*Tinospora cardifolia*) ನಾಲ್ಕು ಹಿಡಿ, ಮೂರು ತೊಲ ಕಸ್ತೂರಿ ಅರಿಶಿನ *(Curculgo aromatica)*, ಐದು ತೊಲ ಮೆಣಸು (Black pepper) ಐದು ತೊಲ ಬೆಳ್ಳುಳ್ಳಿಯನ್ನು ಎರಡು ಲೀಟರ್ ಮಜ್ಜಿಗೆಯಲ್ಲಿ ಅರೆದು ಇದನ್ನು ಮೂರು ದಿವಸ ಗಾಳಿ ಹೋಗದಂತೆ ಮುಚ್ಚಿ ಇಡಬೇಕು. ನಂತರ ದನಗಳಿಗೆ ಕುಡಿಸಿದರೆ ದನಗಳು ಚೆನ್ನಾಗಿ ಮೇವು ತಿನ್ನುವುವು. ಅಲ್ಲದೇ ಅವುಗಳು ಚುರುಕಾಗಿ ಹೆಚ್ಚಿನ ತೂಕ ಹೊಂದುವುವು. ಇದಕ್ಕೆ ಐದು ಬಿಳಿ ಈರುಳ್ಳಿ ಮತ್ತು ಹನ್ನೆರಡು ತೊಲ ಮೆಣಸಿನಕಾಯಿ ಸೇರಿಸಿದರೆ ಇದಕ್ಕೆ ತುಂಬಾ ವಿಶೇಷ ಗುಣ ಬಂದಂತಾಗುವುದು.

◆ ಕುಂದು ರೋಗ

ಈ ರೋಗ ಬಂದಾಗ ದನಗಳ ಮೈಕುಗ್ಗಿರುವುದು, ಭುಜದ ಕೂದಲು ನಿಗುರಿ ನಿಲ್ಲುವುದು. ಹುಲ್ಲು ತಿನ್ನುವುದಿಲ್ಲ. ಆಗ ರೋಗ ಪೀಡಿತ ಪಶುಗಳಿಗೆ ಈ ಚಿಕಿತ್ಸೆ ನೀಡಬೇಕು. ಕುಂಟಿಗೆ ಸೊಪ್ಪು ಹನ್ನೆರಡು ತೊಲ, ಆಡು ಮುಟ್ಟದ ಸೊಪ್ಪು *(Tylophora asthmatica)* 9 ತೊಲ ಬಿಳಿ ಎಕ್ಕೆ ಹೂವಿನ ಮೊಗ್ಗು ಮೂರು ತೊಲ, 4-5 ತೊಲ ಮೆಣಸು (Black pepper), 4-5 ತೊಲ ಬೆಳ್ಳುಳ್ಳಿ ಸೇರಿಸಿ ಎಳನೀರಿನಲ್ಲಿ ಅರೆದು ಮೂರು ದಿವಸ ಕುಡಿಸುವುದರಿಂದ ಕುಂದುರೋಗ ವಾಸಿಯಾಗುವುದು. ಈ ಕಷಾಯವನ್ನು ಪ್ರತಿದಿನವೂ ತಾಜಾ ತಯಾರಿಸಿಕೊಂಡು ಕುಡಿಸಬೇಕು.

◆ ನಾಲಿಗೆ ಮುಳ್ಳು

ದನಗಳ ನಾಲಿಗೆಯು ದಪ್ಪವಾಗಿ, ಒರಟಾಗಿರುತ್ತದೆ. ನಾಲಿಗೆಯ ಮೇಲ್ಭಾಗವನ್ನು ಮುಟ್ಟಿದಾಗ ಚಿಕ್ಕ ಚಿಕ್ಕ ಮುಳ್ಳಿನ ಮೇಲೆ ಕೈ ಇಟ್ಟ ಅನುಭವವಾಗುತ್ತದೆ. ಈ ಸಂದರ್ಭದಲ್ಲಿ ದನಗಳು ಹುಲ್ಲು ತಿನ್ನದೆ, ಜೊಲ್ಲು ಸುರಿಸುತ್ತವೆ. ಆಗ ನೂರು ಗ್ರಾಂ. ಹುಣಸೆಹಣ್ಣು ಐವತ್ತು ಗ್ರಾಂ. ಉಪ್ಪು ಸೇರಿಸಿ ಇದನ್ನು ಕುಟ್ಟಿ ಭತ್ತದ ಹುಲ್ಲಿನ ಮಧ್ಯೆ ಇಟ್ಟು ಸುತ್ತಿ, ದನಗಳ ಬಾಯಿಗೆ ಕೊಡುವುದರಿಂದ ನಾಲಿಗೆ ಮುಳ್ಳು ಮುರಿಯುವುದು. ಈ ರೀತಿ ಹದಿನೈದು ನಿಮಿಷ ದನಗಳ ಬಾಯಿಯಲ್ಲಿ ಇಡಬೇಕು. 2-3 ದಿನ ಮಾಡುವುದರಿಂದ ನಿವಾರಣೆಯಾಗುವುದು.

◆ ಒಣಲದ್ದಿ ಬೇನೆಗೆ

ಹಿಕ್ಕೆ ಹಿಕ್ಕೆಯಾಗಿ ಸಗಣಿ ಹಾಕುವುದು ಅಥವಾ ನೀರಾಗಿ ಉಚ್ಚೆ ಕೊಳ್ಳುವುದು, ಅತಿಕಡಿಮೆ ಮೇವು ತಿನ್ನುವುದು, ದೇಹ ಒಣಗಿ ಹೋಗುವುದು (dehydration) ಈ ರೋಗದ ಲಕ್ಷಣಗಳು.

ಆಗ ಒಂದು ಪಾವು ಮೆಣಸಿನ ಕಾಯಿಯನ್ನು ತಾಂಬಂಡಿಯ (ತಾಮ್ರದ ಪಾತ್ರೆಯಲ್ಲಿನ) ನೀರು ಹಾಕಿ ಅರೆದು ಎರಡು ಗುಟುಕು ದಿನಕ್ಕೆ ಎರಡು ಬಾರಿ ಕೊಟ್ಟರೆ ಒಣ ಹಿಕ್ಕೆಯ ರೀತಿಯ ಸಗಣಿ ಹಾಕದೆ ತೇವಾಂಶದಿಂದ ಕೂಡಿದ ಸಗಣಿ ಹಾಕುತ್ತವೆ.

ಅಥವಾ ಒಂದು ಪಾವು ಮೆಣಸು (Black pepper), ಒಂದು ಗೊಬ್ಬರಿಯಲ್ಲಿ ಅರೆದು ಕೊಟ್ಟರೆ ಸರಿಯಾಗಿ ಸಗಣಿ ಹಾಕುವುವು. ಅಥವಾ ಒಂದು ಪಾವು ಮೆಣಸನ್ನು ತುಪ್ಪದಲ್ಲಿ ಅರೆದು ಕುಡಿಸುವುದರಿಂದ ಸರಿ ಹೊಂದುವುದು. ಅಥವಾ ಹಾಲುವಾಣದ *(Erythrina mysorensis)* ತೊಗಟೆ ಯನ್ನು ಅರೆದು ಅದರ ರಸವನ್ನು ಸೇರಿಸಿ ಕುಡಿಸುವುದು. 3-4 ದಿನ ಈ ಚಿಕಿತ್ಸೆ ನೀಡುವುದರಿಂದ ಸರಿಯಾಗುವುವು.

ಹಲವಾರು ಔಷಧೀಯ ಗುಣಗಳ ದಾಸವಾಳ
ಮೈಲನಹಳ್ಳಿಯ ವೀರಮ್ಮ ಉವಾಚ

ಬಿಳಿ, ಕೆಂಪು ಹಾಗೂ ಮಿಶ್ರಿತ ಬಣ್ಣಗಳಲ್ಲಿ ಸಹಜ ಸರಳ ಸೌಂದರ್ಯದ ಸಾಮಾನ್ಯವಾಗಿ ದೊರಕುವ ದಾಸವಾಳವು ಔಷಧಿಯ ಗುಣ ಹೊಂದಿದೆ. ಚಿತ್ರದುರ್ಗಜಿಲ್ಲೆಯ ಮೈಲನ ಹಳ್ಳಿಯ ವೀರಮ್ಮ ಈ ದಾಸವಾಳವನ್ನು ಹೇಗೆ ಉಪಯೋಗಿಸಬಹುದು ಮತ್ತು ಯಾವ ದೋಷ ಅಥವಾ ಕಾಯಿಲೆಗಳಿಗೆ ಬಳಸ ಬಹುದು ಎಂದು ತಿಳಿಸುತ್ತಾರೆ.

ರಕ್ತಸ್ರಾವ ಅಥವಾ ಗಾಯವಾದಾಗ

ಪೆಟ್ಟು ತಾಗಿ ಅದರಿಂದ ರಕ್ತಸ್ರಾವ ವುಂಟಾದಾಗ ದಾಸವಾಳದ ಹೂವಿನ ರಸವನ್ನು ಹಿಂಡಿ, ಗಾಯದ ಮೇಲೆ ಹಚ್ಚುವುದರಿಂದ ರಕ್ತಸ್ರಾವ ನಿಲ್ಲುವುದಲ್ಲದೆ ಬೇಗ ಕಾಯಿಲೆ ವಾಸಿಯಾಗುವುದು.

ನುಸಿಕೆಮ್ಮು ಆದಾಗ

ಬೆಳಿಗ್ಗೆ ಎದ್ದು ಬಾಯಿ ತೊಳೆದು ಏಳು ಎಂಟು ಹೂಗಳನ್ನು ತಿನ್ನುವುದರಿಂದ ನುಸಿಕೆಮ್ಮು ಮಾಯವಾಗುವುದು. ಇದನ್ನು ಅತ್ತಿಯ ಮರ (*Ficus electa*) ದ ಹಾಲಿನೊಂದಿಗೆ ಬೆರೆಸಿ ತಿನ್ನುವುದರಿಂದ ಉತ್ತಮ ಗುಣಕಂಡು ಬರುವುದು.

ರಕ್ತ ಸ್ರಾವ (ಮಲ)

ಮಲವಿಸರ್ಜನಾ ನಂತರ ಆಸನದಿಂದ ರಕ್ತಸ್ರಾವ ಕಾಣಿಸಿಕೊಂಡಾಗ ದಾಸವಾಳದ ಹೂ ಮತ್ತು ಮೊಗ್ಗುಗಳನ್ನು ನೆರಳಿನಲ್ಲಿ ಒಣಗಿಸಿ ಚೂರ್ಣಮಾಡಿ, ಆ ಚೂರ್ಣವನ್ನು ಎರಡು ಚಿಟಿಕೆಯಷ್ಟು ಹಾಲಿನಲ್ಲಿ ಕಲಸಿ ಕುಡಿಯುತ್ತಾ ಬಂದರೆ ರಕ್ತ ಮೂಲವ್ಯಾಧಿ ಉಪಶಮನ ತಾಳುವುದು.

ಕೇಶ ವರ್ಧಿನಿ

ತಲೆ ಕೂದಲು ಉದುರುತ್ತಿದ್ದರೆ ಅದನ್ನು ತಡೆಗಟ್ಟಲು ದಾಸವಾಳದ ಹೂವುಗಳನ್ನು ಗೋಮೂತ್ರದಲ್ಲಿ ಅರೆದು, ಅದನ್ನು ತಲೆಗೆ ಹಚ್ಚಿದ ಒಂದು ತಾಸಿನ ನಂತರ ತೊಳೆಯುವುದರಿಂದ, ಕ್ರಮೇಣ ತಲೆ ಕೂದಲು ಉದುರುವುದು ತಡೆಯುವುದು ಮತ್ತು ಕೂದಲ ಬೆಳವಣಿಗೆ ಸಮೃದ್ಧಿ ಹೊಂದುವುದು. ಅಲ್ಲದೆ ಕೆಂಚು ಕೂದಲು ಸಹ ಕಪ್ಪಾಗಲು ನೆರವಾಗುತ್ತದೆ.

ಪುಷ್ಪ ದಳಗಳನ್ನು ಕೊಬ್ಬರಿ ಅಥವಾ ಎಳ್ಳೆಣ್ಣೆಯಲ್ಲಿ 10-15 ಹೂಗಳನ್ನು ಕಾಲು ಕೆ.ಜಿ. (250 gms) ಎಣ್ಣೆಯಲ್ಲಿ ಹಾಕಿ, 10-15 ದಿನಗಳ ನಂತರ ಈ ಎಣ್ಣೆಯನ್ನು ಬಳಕೆಗೆ ತೆಗೆದುಕೊಳ್ಳುವುದರಿಂದ ಉದುರುವ ಕೂದಲನ್ನು ತಡೆಗಟ್ಟಬಹುದು.

ದಾಸವಾಳದ ಎಲೆಗಳನ್ನು ರುಬ್ಬಿ ತಯಾರಿಸಿದ ಪೇಸ್ಟನ್ನು ತಲೆಗೆ ಲೇಪನ ಮಾಡಿ ಅರ್ಧಗಂಟೆ ನಂತರ ತಲೆ ತೊಳೆಯುವುದದರಿಂದ, ತಲೆಹೊಟ್ಟು ನಿವಾರಣೆ ಮಾಡಬಹುದು.

ಪ್ರತಿ ದಿನ ನಾಲ್ಕು ಅಥವಾ ಐದು ಹೂವು ಗಳನ್ನು ಪ್ರಾತಃಕಾಲ ಸೇವಿಸುವುದರಿಂದ ತಲೆಸುತ್ತುವದನ್ನು ತಡೆಯಬಹುದು.

ರಕ್ತಸ್ರಾವ (ಮುಟ್ಟು)

ಮುಟ್ಟಿನ ವೇಳೆಯಲ್ಲಿ ಸ್ರಾವವು ಅತಿಯಾಗಿ ಹೋಗುತ್ತಿದ್ದರೆ ಪ್ರತಿ ನಿತ್ಯ ಈ ಹೂವಿನ ದಳಗಳನ್ನು ಜೇನು ತುಪ್ಪದಲ್ಲಿ ಸೇವಿಸುತ್ತಾ ಬಂದರೆ ಗುಣಕಂಡು ಬರುವುದು.

ಚಿತ್ರದುರ್ಗ, ತುಮಕೂರು, ಶಿವಮೊಗ್ಗ ಜಿಲ್ಲೆಗಳ ಕೆಲವು ಪ್ರಾಂತ್ಯದ ಜನರು ತಮ್ಮದೇ ಆದ ಮನೆ ಔಷಧಿಗಳಿಂದ ತಮ್ಮ ಚಿಕ್ಕ ಪುಟ್ಟ ರೋಗಗಳನ್ನು ನಿವಾರಣೆ ಮಾಡಿಕೊಳ್ಳಲು ಕೆಲವು ಸುಲಭ ಸರಳ ಹಾಗೂ ಸಾಂಪ್ರದಾಯಿಕ ಪದ್ಧತಿಯಲ್ಲಿ ಈ ಗಿಡಮೂಲಿಕೆಗಳ ಬಳಕೆಯನ್ನು ಕಂಡು ಕೊಂಡಿದ್ದಾರೆ. ಇವುಗಳಿಂದ ಆಗದೆ ಇದ್ದಲ್ಲಿ ಮಾತ್ರ ವೈದ್ಯರ ಬಳಿ ಹೋಗುವ ಜನರ ಕೆಲವು ಮನೆ ಔಷಧಿಗಳ ಬಳಕೆ ಈ ರೀತಿ ಇವೆ.

ತಲೆ ನೋವಿಗೆ ಕೆಲವು ಮನೆ ಔಷಧಿಗಳು

- ಸಹಜವಾಗಿ ಬೇಲಿಮೇಲೆ ಬೆಳೆದಿರುವ ತೊಂಡೆಯ ಸೊಪ್ಪನ್ನು ತಂದು ಎಡ ಬದಿಯ ತಲೆನೋವಿಗೆ ಬಲಗಿವಿಯಲ್ಲಿ ಮತ್ತು ಬಲ ಬದಿಯ ತಲೆನೋವಿಗೆ ಎಡಗಿವಿಯಲ್ಲಿ ಇದರ ರಸವನ್ನು ಹಾಕಿಕೊಂಡರೆ ಅರೆತಲೆನೋವು ನಿವಾರಣೆಯಾಗುವುದು.
- ಒಣ ಶುಂಠಿಪುಡಿಯನ್ನು (*Zingiber officinale*) ಬಿಸಿ ನೀರಿನಲ್ಲಿ ನೆನೆಸಿ ಸ್ವಲ್ಪ ಬಿಸಿಮಾಡಿ (ಕುದಿಸಿ) ಹಣೆಗೆ ಲೇಪಿಸಿ ಕೊಳ್ಳುವುದರಿಂದ ತಲೆನೋವು ನಿವಾರಣೆಯಾಗುವುದು.
- ಅಳಲೇ ಕಾಯಿ (*Tephrosia chebula*) ಯನ್ನು ಬಿಸಿನೀರಿನಲ್ಲಿ ತೇದು ಅದರ ಗಂಧವನ್ನು ಹಣೆಗೆ ಹಚ್ಚಿಕೊಳ್ಳುವುದರಿಂದ ತಲೆನೋವು ನಿವಾರಣೆಯಾಗುವುದು.
- ಲಕಲಿಪತ್ರೆಯನ್ನು (*Vinca leucoxylon*) ಅರೆದು ನೀರಿನಲ್ಲಿ ಕುದಿಸಿ ಅದರ ಆವಿಯನ್ನು ಮುಖಕ್ಕೆ ಮೈಗೆ ತೆಗೆದುಕೊಳ್ಳುವುದರಿಂದ ಶೀತ ತಲೆನೋವು ನಿವಾರಣೆಯಾಗುವುದು.

ದಿನನಿತ್ಯದ ಔಷಧಿಯಾಗಿ ಹುಣಸೆ

ಅಜೀರ್ಣ

ತಿಂದ ಆಹಾರವು ಜೀರ್ಣವಾಗದೆ ಇದ್ದಾಗ, ಹುಳಿ ತೇಗುಗಳು ಬರುವುದು, ಹೊಟ್ಟೆ ಭಾರವಾಗುವುದು, ನಿದ್ರೆ ದೂರವಾಗುವುದು, ಬೇಧಿ ಆಗುವ ಲಕ್ಷಣಗಳು ಕಂಡಾಗ ಹುಣಸೆ ಹಣ್ಣನ್ನು ನೀರಿನಲ್ಲಿ ನೆನೆಸಿ ಬರುವ ಹುಳಿಗೆ ರುಚಿಗೆ ತಕ್ಕಷ್ಟು ಸಕ್ಕರೆಹಾಕಿ, ಹುಣಸೆ ಪಾನಕ ಕುಡಿಯುವುದರಿಂದ ಅಜೀರ್ಣತೆ ದೂರವಾಗುವುದು.

ಕಣ್ಣುನೋವು ಅಥವಾ ಕಣ್ಣು ಉರಿ

ಅತಿಯಾದ ಬಿಸಿಲಿಗೆ ಕಣ್ಣುಗಳು ಉರಿಯಾಗಿ ಕೆಂಪೇರುತ್ತವೆ. ಆಗ ಹುಣಿಸೆ ಹಣ್ಣಿನ ದಳಗಳನ್ನು ಅರೆದು ಕಣ್ಣಿಗೆ ಬಿಳಿಬಟ್ಟೆಯಿಂದ ಪಟ್ಟು ಹಾಕುವುದರಿಂದ ಕಣ್ಣು ಉರಿತ ಕಡಿಮೆಯಾಗುವುದು.

ತಲೆಸುತ್ತು

ಹುಣಸೇ ಪಾನಕಕ್ಕೆ ಒಂದು ಟೀ ಚಮಚ ಜೀರಿಗೆ ಸೇರಿಸಿ ಊಟ ಅಥವಾ ತಿಂಡಿ ತಿನ್ನದೇ ಬೆಳಗ್ಗೆ ಎದ್ದ ತಕ್ಷಣ ಸೇವಿಸಿ ಎರಡು ತಾಸುಗಳ ನಂತರ ಆಹಾರ ತಿನ್ನುವುದರಿಂದ ತಲೆಸುತ್ತು ನಿವಾರಣೆಯಾಗುವುದು. ಉಷ್ಣದಿಂದ ಮೈಕಾವು ಬಂದಾಗ ಹುಣಿಸೆ ಪಾನಕದಿಂದ ದೇಹವನ್ನು ತಂಪಾಗಿಸಿ ಕೊಳ್ಳಬಹುದು.

ಸಂಗ್ರಹ : ಬಿ.ಕೆ ನಾಗರತ್ನ
ತೃತೀಯ ಕೃಷಿ ವಿದ್ಯಾರ್ಥಿನಿ, ಬೆಂಗಳೂರು

ಮರಳು ಗಾಡಿನ ನಂದನವನ, ಇಸ್ರೇಲ್

ಹಳೇಕೋಟೆ ರಮೇಶ್
ಶಾರದಾಂಬ ಎಸ್ಟೇಟ್
ಅಂಚೆಪೆಟ್ಟಿಗೆ - 29,
ಮೂಡಿಗೆರೆ - 577 132
ಚಿಕ್ಕಮಗಳೂರು ಜಿಲ್ಲೆ.

ಕೇವಲ ವೈಶಿಷ್ಟ ವ್ಯವಸಾಯಕ್ಕೆ ಯೋಗ್ಯವಾಗಿರುವ ಭೂಮಿಯುನ್ನು ಹೊಂದಿರುವ ಇಸ್ರೇಲ್‌ನಲ್ಲಿ ಅತಿಕಡಿಮೆ ನೀರನ್ನು ಹೊಂದಿದ್ದರೂ ಅಲ್ಲಿಯ ಜನರು ನೀರನ್ನು ಸಮರ್ಪಕವಾಗಿ ಹೇಗೆ ಬಳಸಿಕೊಂಡಿದ್ದಾರೆ, ಅವರು ಯಾವ ರೀತಿಯ ಕೃಷಿಯನ್ನು ಮಾಡುತ್ತಾರೆ. ಅಲ್ಲಿಯ ಜನರ ತಾಂತ್ರಿಕ ಮತ್ತು ವೈಜ್ಞಾನಿಕ ಪದ್ಧತಿಗಳು, ಯಂತ್ರೋಪಕರಣಗಳ ಬಳಕೆ, ಸಾರಿಗೆ ಸಂಪರ್ಕ ಹೇಗಿವೆ ಎಂದು ಇವುಗಳ ಉಪಯೋಗದಿಂದ ಅಧಿಕ ಕೃಷಿ ಇಳುವರಿ ಹೇಗೆ ಪಡೆಯುತ್ತಾರೆ ಎಂಬುದನ್ನು ಹಳೆಕೋಟೆ ಶ್ರೀ ರಮೇಶ್ ಇಸ್ರೇಲ್‌ಗೆ ಭೇಟಿ ನೀಡಿ ಅವರ ಕಣ್ಣಾರೆ ಕಂಡ ಅಲ್ಲಿಯ ಕೃಷಿ ಪದ್ಧತಿಯನ್ನು ಛಾಯಚಿತ್ರಗಳ ಸಮೇತ ಮರಳು ಗಾಡಿನ ನಂದನವನ ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ಇದರ ಬೆಲೆ ರೂ.40.

ಈ ಪುಟ್ಟ ಪುಸ್ತಕ ಅಲ್ಲಿನ ಪೂರ್ವೇತಿಹಾಸ, ಜನರ ನಡೆ, ನುಡಿ, ಪರಂಪರೆ, ಸಂಪ್ರದಾಯ, ಮಾದರಿ ಬೇಸಾಯ, ಹಸಿರು ಮನೆಯ ಉಪಯೋಗ, ಹನಿ ನೀರಾವರಿ, ಮುಂದುವರಿದ ಸಾರಿಗೆ ಪದ್ಧತಿ ಮತ್ತು ಮಾರುಕಟ್ಟೆ ಹಾಗು ವಿವಿಧ ಕೃಷಿ ಕ್ಷೇತ್ರಗಳಾದ, ಮೀನುಗಾರಿಕೆ, ಕೋಳಿ ಸಾಕಣೆ ಮತ್ತು ಮಾಂಸ ಉತ್ಪಾದನೆಗಳ ಬಗ್ಗೆ ಮಾಹಿತಿ ಒದಗಿಸುತ್ತದೆ.

ಅಲ್ಲದೆ ಅಲ್ಲಿಯ ಅಧಿಕ ಇಳುವರಿಯ ಬೀಜಗಳು, ಅಂಗಾಂಶ ಕೃಷಿ, ಕ್ರಿಮಿನಾಶಕಗಳ ಬಳಕೆ ಮತ್ತು ಸಾವಯವ ಗೊಬ್ಬರಗಳ ಬಳಕೆಯ ಬಗ್ಗೆ ಗಮನ ಹರಿಸುವಂಥದ್ದಾಗಿದೆ. ರೈತನೊಬ್ಬರು ಸ್ವತಃ ಭೇಟಿ ನೀಡಿ, ತಮ್ಮ ಅನುಭವವನ್ನು ಈ ಪುಸ್ತಕದಲ್ಲಿ ಹಂಚಿಕೊಂಡಿರುವುದೇ ಈ ಪುಸ್ತಕದ ವಿಶೇಷ.

ಜೀವಚೈತನ್ಯ ಕೃಷಿ ಮತ್ತು ತೋಟಗಾರಿಕೆ - ಒಂದು ಪರಿಚಯ

ಅನುವಾದ ಮತ್ತು ಸಂಪಾದನೆ ಇಕ್ರಾ, ಬೆಂಗಳೂರು
ಬೆಲೆ : Rs. 25/-
ಪುಟಗಳು : 74 + VI

"ಜೀವಚೈತನ್ಯ ಕೃಷಿ" (Bio-dynamic farming) ಯು ಒಂದರ್ಥದಲ್ಲಿ ಹೈಟೆಕ್ ಸಾವಯವ ಕೃಷಿ ಎಂದರೆ ತಪ್ಪಾಗಲಾರದು. ಜೀವಚೈತನ್ಯ ಕೃಷಿಯು ರುಡೋಲ್ಫ್ ಸ್ಟೀನರ್‌ರವರು 1924ರಲ್ಲಿ ಜರ್ಮನಿಯ ಸಿಲೇಸಿಯಾದ ಕೋಬರ್‌ವಿಟ್ಸ್ ಎಸ್ಟೇಟಿನಲ್ಲಿ ನೀಡಿದ ಎಂಟು ಉಪನ್ಯಾಸಗಳನ್ನೇ ತಳಹದಿಯಾಗಿಸಿಕೊಂಡಿದೆ.

ಭಾರತದಲ್ಲಿ 1993 ರಲ್ಲಿ ಟಿ.ಕೆ.ಮೆನನ್ ಅವರ ಪ್ರಯತ್ನದ ಫಲವಾಗಿ ಮೊದಲ ಜೀವ ಚೈತನ್ಯ ಕೃಷಿ ಸಂಬಂಧದ ಶಿಬಿರ ನಡೆಯಿತು. ತದನಂತರದಲ್ಲಿ ಅನೇಕ ಶಿಬಿರಗಳು ತರಬೇತಿ ಕಾರ್ಯಕ್ರಮಗಳು ನಡೆಯುತ್ತಾ ಬಂದಿದ್ದು ಅನೇಕಾನೇಕ ರೈತರು ಜೀವ ಚೈತನ್ಯ ಕೃಷಿಯುನ್ನು ಸ್ವಲ್ಪ ಮಟ್ಟಿಗಾದರೂ ಅಳವಡಿಸಿಕೊಳ್ಳುವತ್ತ ಹೆಜ್ಜೆ ಇರಿಸಿದ್ದಾರೆ. ಈ ಕಿರು ಹೊತ್ತಿಗೆಯು ಜೀವ ಚೈತನ್ಯ ಮಿಶ್ರಣಗಳನ್ನು ಪ್ರಾಯೋಗಿಕವಾಗಿ ತಯಾರಿಸುವ ಮತ್ತು ಬಳಸುವ ವಿಧಾನಗಳನ್ನು ವಿವರಿಸುತ್ತದೆ.

ಈ ಪುಸ್ತಕದಲ್ಲಿ ಮುಖ್ಯವಾಗಿ ಒಂಬತ್ತು ಅಧ್ಯಾಯಗಳಿವೆ :-

- ಜೀವಚೈತನ್ಯಗಳು - ಒಂದು ಪ್ರಾಯೋಗಿಕ ಪರಿಚಯ
- ಜೀವಚೈತನ್ಯ ಸಿದ್ಧತೆ 500 - ತಯಾರಿಕೆ ಮತ್ತು ಬಳಕೆ
- ಜೀವ ಚೈತನ್ಯ 501 - ಸಿದ್ಧತೆ ತಯಾರಿಕೆ ಮತ್ತು ಬಳಕೆ
- ಮಿಶ್ರ ಗೊಬ್ಬರ, ಹಟ್ಟಿ ಗೊಬ್ಬರದ ಗುಂಡಿಗಳು ಹಾಗೂ ದ್ರವರೂಪದ ಗೊಬ್ಬರಗಳನ್ನು ತಯಾರಿಸುವ ವಿಧಾನಗಳು
- ಜೀವ ಚೈತನ್ಯ ಸಿದ್ಧತೆ ಮತ್ತು 508 ರ ತಯಾರಿಕೆ ಮತ್ತು ಬಳಕೆ
- ಬೇಸಾಯ ಕಾಲ ಸೂಚಕ
- ಕೃಷಿ ಪಂಚಾಂಗ
- ಒಂದು ಹೊಲವನ್ನು ಜೀವ ಚೈತನ್ಯದೆಡೆಗೆ ಪರಿವರ್ತಿಸುವಿಕೆ
- ಜೀವಚೈತನ್ಯ ಸಿದ್ಧತೆಗಳ ಪ್ರಯೋಗಗಳು

ಜೀವ ಚೈತನ್ಯ ಬೇಸಾಯ ಮತ್ತು ತೋಟಗಳ ಪದ್ಧತಿಯು ರಸಗೊಬ್ಬರಗಳ ಬಳಕೆಯನ್ನು ಸಂಪೂರ್ಣ ನಿಷೇಧಿಸಿತ್ತದೆ. ಜೀವಂತಿಕೆಯ ಗುಣವೇ ಇಲ್ಲದ ಈ ರಾಸಾಯನಿಕಗಳು ಜೀವವನ್ನು ಕಾಪಾಡಲಾರವು, ಮಣ್ಣಿಗೆ ಫಲವತ್ತತೆ ತರಲಾರವು.

ಮಾನವ ಮತ್ತು ಪಶು ಪ್ರಾಣಿಗಳ ಆರೋಗ್ಯದ ಸಮಸ್ಯೆ ಮತ್ತು ಪರಿಸರ ಅವನತಿಯ ಸಮಸ್ಯೆಗಳಿಗೆ ಉತ್ತರವಿರುವುದು ನಿಜವಾದ ಫಲವತ್ತತೆಯುಳ್ಳ ಮಣ್ಣನ್ನು ಕಾಪಾಡಿಕೊಳ್ಳುವಲ್ಲಿ. ಆವರ್ತ ಬೆಳೆ ಪದ್ಧತಿ,

ಮಣ್ಣಿಗೆ ವಿಪುಲವಾಗಿ ಸಾವಯವ ವಸ್ತುಗಳನ್ನು ಮತ್ತು ಜೀವಚೈತನ್ಯ ಮಿಶ್ರಣಗಳನ್ನು ಕೊಡುವುದರಿಂದ ಇದು ಸಾಧ್ಯ ಜೀವ ಚೈತನ್ಯ ಮಿಶ್ರಣಗಳ ತಯಾರಿಕೆ ಮತ್ತು ಬಳಕೆ, ನಾಟಿಯ ಕಾಲ ವಿವರ ಇತ್ಯಾದಿಗಳನ್ನೆಲ್ಲಾ ವಿವರವಾಗಿ ತಿಳಿಸುವ ಈ ಪುಸ್ತಕ ಸಾವಯವ ಬೇಸಾಯಗಳಿಗೆ ಬಲು ಮೌಲ್ಯದ್ದು

ಕೊನೆಯಲ್ಲಿ, ಇಂದೋರ್ ಕೃಷಿ ವಿಶ್ವ ವಿದ್ಯಾನಿಲಯದಲ್ಲಿ 1994, 1995 ಮತ್ತು 1996 ರಲ್ಲಿ ಜೀವ ಚೈತನ್ಯ ಕೃಷಿ ಬಗ್ಗೆ ನಡೆಸಿದ ಸಂಶೋಧನೆಯ ಸಂಕ್ಷಿಪ್ತ ವಿವರಗಳನ್ನು ಕೊಡಲಾಗಿದೆ.

ಹೆಚ್ಚಿನ ಮಾಹಿತಿಗೆ ಹಾಗೂ ಪ್ರತಿಗಳನ್ನು : ***ಇಕ್ರಾ, (ICRA) "ಸಂಸ್ಕೃತಿ" ನಂ.22, ಮೈಕೇಲ್ ಪಾಳ್ಯ, ಹೊಸ ತಿಪ್ಪಸಂದ್ರ ಅಂಚೆ, ಬೆಂಗಳೂರು - 560 075*** ಇವರಿಂದ ಪಡೆಯಬಹುದು.

ಶೂನ್ಯ ಕೃಷಿ ತತ್ತ್ವಗಳಿಗೆ ಸೋತ ಕೈಲಾಸ್ ಮೂರ್ತಿಯವರು

ನಲ್ವತ್ತರ ಹರಯ. ಬ್ಯಾಂಕು ಉದ್ಯೋಗ. ಗಂಡು ಹೆಣ್ಣು ಎರಡು ಮಕ್ಕಳ ಅಚ್ಚುಕಟ್ಟು ಕುಟುಂಬ. ಸುಖ, ಸಂತೋಷಕ್ಕೆ ಬೇಕಾದ ಎಲ್ಲವೂ ಇರುವ ಕೈಲಾಸ ಮೂರ್ತಿಯವರು 1985 ರಲ್ಲಿ ಸ್ವತಂತ್ರವಾಗಿ ಕೃಷಿಯನ್ನು ಆರಂಭಿಸಿದರು. ಚಿನ್ನದ ಬೆಳೆ ಎಂದೇ ಪ್ರಖ್ಯಾತವಾಗಿರುವ ರೇಷ್ಮೆಗೆ ಶ್ರೀಯುತರು ಬಲಿಯಾದದ್ದು ಕಾಲಧರ್ಮದಂತೆಯೇ ಇತ್ತು.

ಕೊರೆದ ತೂತು ಬಾವಿ 2500 ಗ್ಯಾಲನ್ ನೀರೂಡುತ್ತಿತ್ತು. ಅದಕ್ಕನುಗುಣವಾಗಿ ಒಂದುಕಾಲು ಎಕ್ರೆ ಹಿಪ್ಪು ನೇರಳೆ ತೋಟವೆಬ್ಬಿಸಿದರು. ವರ್ಷಕ್ಕೆ ಆರು ಬೆಳೆ ರೇಷ್ಮೆ ತೆಗೆಯುತ್ತಿದ್ದರು. ಎಲ್ಲಾ ರೇಷ್ಮೆ ಇಲಾಖೆ ಸಲಹೆ ಮೇರೆಗೆ ನೂರು ಮೊಟ್ಟೆಗೆ ಐವತ್ತು ಕಿ.ಗ್ರಾಂ. ನಂತೆ ಇಳುವರಿ ಬರುತ್ತಿತ್ತು. ಲಾಭವೂ ಕಾಣುತ್ತಿತ್ತು. ಐದು ವರ್ಷಗಳ ರಾಸಾಯನಿಕ ಕೃಷಿಯು ದಿನಗಳು ಕಳೆದಂತೆ ಭಯಾನಕವಾಗತೊಡಗಿತು. ಖರ್ಚು ಹೆಚ್ಚುತ್ತಾ ಹೋಯಿತು. ಲಾಭ ಸೊರಗುತ್ತಾ ಬಂತು. ಇಲಾಖೆಯ ಅವ್ಯವಸ್ಥೆ, ಅನಾಸ್ಥೆಗಳ ದೆಸೆಯಿಂದ ಗಂಟು ರೋಗ (ಪೆಬ್ರಿನ್) ಮಾರಿಯಾಗಿ ಕಾಡಿತು. ಅನುಕ್ರಮವಾಗಿ ಹದಿನಾಲ್ಕು ಬೆಳೆಗಳು ಸೋತವು. ಕಳೆದ ಐದು ವರ್ಷಗಳ ಲಾಭವನ್ನು ಹೀರಿ ನೀರು ಕುಡಿದವು.

ಎಷ್ಟಾದರೂ ಬ್ಯಾಂಕು ಉದ್ಯೋಗಿಯಲ್ಲವೇ? ಬ್ಯಾಂಕಿನ ಲೆಕ್ಕಾಚಾರ ನೈಪುಣ್ಯವನ್ನು ಕೃಷಿಗೆ ಹೊಂದಿಸಲು ಪ್ರಯತ್ನಿಸಿದರು. ಈ ಪ್ರಯತ್ನದ ಮುನ್ನೆಲೆಯಲ್ಲಿ ಮೂರ್ತಿಯವರು ನೆಮ್ಮದಿ ಕಳಕೊಂಡರು. ಪ್ರಕೃತಿಯ ಜೊತೆಗೆ ಕಲಹವಿಲ್ಲದೆ ಕೃಷಿ ಹೇಗೆ? ಉತ್ತರದ ಅರಸುವಿಕೆಯಲ್ಲಿ ಊರೂರು ಸುತ್ತಿದರು.

ಶೂನ್ಯ ಕೃಷಿಯ ತತ್ವಗಳಿಗೆ ಮನಸೋತರು. ರಾಸಾಯನಿಕ ಕೃಷಿಯನ್ನು ಒಮ್ಮೆಲೇ ಕೈಬಿಟ್ಟರು. ಹಂತ ಹಂತವಾಗಿ ಶೂನ್ಯ ಕೃಷಿಯತ್ತ ದಾಪುಗಾಲು ಹಾಕಿದರು. ಎಂತಲೇ ಅಂದಿನ ತಳಮಳ ಇಂದಿಲ್ಲ. ಮತ್ತೆ ನೆಮ್ಮದಿ ಕಂಡರು. ಎರಡು ರೀತಿಗಳಿಂದ. ಒಂದು, ಪ್ರಕೃತಿಯನ್ನು ಅರ್ಥೈಸುವ ದಾರಿ ಗೋಚರಿಸಿದ್ದರಿಂದ, ಎರಡು, ಜೀವನದ ರೀತಿ ತಿಳಿದದ್ದರಿಂದ.

ರೇಷ್ಮೆಯ ಗಂಟುರೋಗ ಕೈಲಾಸ್ ಮೂರ್ತಿಯವರ ಕೃಷಿಯ ದಿಕ್ಕನ್ನು ಬದಲಾಯಿಸಿತು. ರಾಸಾಯನಿಕ ಗೊಬ್ಬರವನ್ನು ಕೈ ಬಿಟ್ಟರು ಮಾತ್ರವಲ್ಲ ರೇಷ್ಮೆ ಹುಳ ಸಾಕುವುದನ್ನು ನಿಲ್ಲಿಸಿದರು. ಹುಳ ಸಾಕುವವರಿಗೆ ಇಂದು ಸೊಪ್ಪು ಮಾರುತ್ತಿದ್ದಾರೆ. ಈಗ ಹನಿ ನೀರಾವರಿ ವ್ಯವಸ್ಥೆ, ಎಲ್ಲಾ ಕಳೆ ಕಸಗಳನ್ನು ಅಲ್ಲೇ ಚೆಲ್ಲುವ ಪ್ರಕೃತಿಯ ಸಾಮರಸ್ಯ. ಉಳುಮೆ ಅಗೆತಗಳಿಲ್ಲ. ಯಾವುದೇ ರೀತಿಯ ಗೊಬ್ಬರಗಳಿಲ್ಲ. (ಇಂದು ನೀರು ಮಾತ್ರ ಅಲ್ಲಿರುವ ಕೃತಕತೆ). ವರ್ಷಕ್ಕೆರಡು ಬಾರಿ ಬುಡಮಟ್ಟ ಕತ್ತರಿಸಿ ಅಲ್ಲೇ ಬಿಡುತ್ತಾರೆ. ವಿಪುಲವಾಗಿ ಎರೆಹುಳುಗಳು ವೃದ್ಧಿಯಾಗಿವೆ. ನಿಶ್ಚಯವಾದ ಮೇಲ್ಮಣ್ಣು ಸೃಷ್ಟಿಯಾಗಿದೆ. ವರ್ಷಕ್ಕೆ ಆರು ಬಾರಿ ಸೊಪ್ಪು ಮಾರುವುದರಿಂದ ರೂಪಾಯಿ ಐವತ್ತು ಸಾವಿರಕ್ಕೂ ಮೇಲ್ಪಟ್ಟು ಖರ್ಚಿಲ್ಲದ ಆದಾಯ ಬರುತ್ತಿದೆ. ಆದರೂ ಮುಂದಿನ ವರ್ಷ ಹಿಪ್ಪು ನೇರಳೆ ಕಿತ್ತು ಬಾಳೆ, ಅಡಿಕೆ, ವೆನಿಲಾ, ಸಂಯುಕ್ತ ಕೃಷಿ ಕೈಗೊಳ್ಳುವ ಯೋಜನೆಯಲ್ಲಿದ್ದಾರೆ.

ಈ ತೋಟದ ಮೂವತ್ತು ಗುಂಟೆ ಜಾಗವನ್ನು ಕಬ್ಬು ಆಶ್ರಯಿಸಿದೆ. ಮೂರನೇ ಕೂಳೆ, ಉಳುಮೆಮಾಡಿ ಪರಂಪರೆಯ ಪದ್ಧತಿಯಂತೆ ನಾಟಿಮಾಡಿ ಒಮ್ಮೆ ಪಟಕಟ್ಟಿದ್ದು ಬಿಟ್ಟರೆ ಇನ್ನು ಯಾವ ತರವಾದಿ ಕೆಲಸವೂ ಅದರೊಳಗಿಲ್ಲ. ಕಳೆಕಿತ್ತಿಲ್ಲ. ಬೆಂಕಿಕೊಟ್ಟಿಲ್ಲ. ಹಟ್ಟಿಗೊಬ್ಬರವೂ ಇಲ್ಲ. ಉಳುಮೆಯಂತೂ ಇಲ್ಲವೇ ಇಲ್ಲ. ತುಂತುರು ನೀರಾವರಿ, ಮೊದಲ ಬೆಳೆ ಎಪ್ಪತ್ತು ಟನ್, ಎರಡನೇ ಬೆಳೆ ಐವತ್ತು ಟನ್, ಮೂರನೆಯ ಬೆಳೆ ಕೂಡಾ ಐವತ್ತರ ನಿರೀಕ್ಷೆ. ಮುಂದಿನ ವರ್ಷ ಈ ಜಾಗದಲ್ಲಿ ಕಬ್ಬಿನ ಬದಲು ಫುಕುವೋಕ ಮಾದರಿಯಲ್ಲಿ ಉಳುಮೆ ಇಲ್ಲದೆ ಭತ್ತ ಬೆಳೆಯುವ ಉತ್ಸಾಹ.

ಮೂರು ವರ್ಷ ಪ್ರಾಯದ ಇವರ ಎರಡೂವರೆ ಎಕ್ರೆ ಅಡಿಕೆ ತೋಟ ಬಹಳ ವೈಶಿಷ್ಟ್ಯ ಪೂರ್ಣ. ಎಂಟಡಿ ಅಂತರದಲ್ಲಿ ಸಣ್ಣ ಕುಣಿ ಹೊಡೆದು ಬಿತ್ತನೆ ಅಡಿಕೆ ಇಟ್ಟು ಡ್ರಿಪ್ ಅಳವಡಿಸಿದ್ದು ಮಾತ್ರ. ಹುಟ್ಟುವುದು ಬೆಳೆಯವುದು ಪ್ರಕೃತಿಯ ನಿಯಮವೆಂದು ನಂಬಿ ಕೈ ಬಿಟ್ಟರು. ಮಧ್ಯಂತರದಲ್ಲಿ ನುಗ್ಗೆ ಬೀಜಗಳನ್ನು ಇಟ್ಟರು. ಬಂದ ಕಳೆಗಳಿಗೆಲ್ಲ ಅವಕಾಶ ಕೊಟ್ಟರು. "ನಂಬಿ ಕೆಟ್ಟವರಿಲ್ಲವೋ ಪ್ರಕೃತಿ ದೇವನಾ" ಈ ಜಾಗ ದೃಷ್ಟಾಂತವಾಗಿದೆ. ಪ್ರತಿವರ್ಷ ನುಗ್ಗೆ ರೂಪಾಯಿ ಅರವತ್ತು ಸಾವಿರ ಮೇಲ್ಪಟ್ಟು ಆದಾಯ ಕೊಡುತ್ತಿದೆ. ನಿನಗೆ ನಾನಿದ್ದೇನೆ ಎಂದು ಅಡಿಕೆ ನಿರ್ಭಯವಾಗಿ ಸಾರುತ್ತಿದೆ. ಹಾಗೆಯೇ ಸುಮಾರು ಇನ್ನೂರೈವತ್ತು ಕುಳ್ಳ ಜಾತಿ ಕ್ಯಾವೆಂಡಿಷ್ ಬಾಳೆಗಳು, ಇನ್ನೊಂದಷ್ಟು ಏಲಕ್ಕಿ ಬಾಳೆಗಳು, ಕೈಲಾಸ್ ಮೂರ್ತಿಯವರು ಬ್ಯಾಂಕಿನ ಧಫ್ತರುಗಳ ಮೇಲೆ ಕಣ್ಣಾಡಿಸುತ್ತಿರುವಾಗಲೂ "ತನಗೆ ತಾನೇ ಗೆಳೆಯ" ಎಂದು ಹೇಳುತ್ತಾ ಗೊನೆಯ ನಂತರ ಗೊನೆಗಳನ್ನು ಕೊಡುತ್ತಿದೆ ರೋಗದ ಬೆಳೆಗಳು ನಿರೋಗಿಗಳಿಗೆ ಗೊಬ್ಬರವಾಗುತ್ತಿವೆ.

ತೋಟದ ಸುತ್ತ ಇಪ್ಪತ್ತನಾಲ್ಕು ಕಸಿ ಮಾವಿನ ಮರಗಳು. ಗೊಬ್ಬರವನ್ನು ಬೇಡಿಲ್ಲ. ಪ್ರತಿ ವರ್ಷವೂ ಆರಿಂಚು ದಪ್ಪಕ್ಕೆ ತರಗೆಲೆಗಳು ಹಾಸಿಗೆಯನ್ನೇ ಸೃಷ್ಟಿಸಿ ಶೂನ್ಯ ಕೃಷಿ ತತ್ವವನ್ನು ಸತ್ವವನ್ನು ಸಾರಿ ಸಾರಿ ಹೇಳುವುದರ ಜೊತೆಗೆ, ಪ್ರಕೃತಿಯ ಈ ದೈವೀ ಸಾಮರ್ಥ್ಯವನ್ನು ಸಂಭ್ರಮದಿಂದ ನೂರಾರು ಜನರಿಗೆ ಸಾರಿ ಹೇಳುವ ಕೈಲಾಸ್ ಮೂರ್ತಿಯವರ ಉತ್ಸಾಹಕ್ಕೆ ಪ್ರೋತ್ಸಾಹ ವಾಗಲೆಂದು ಬಹುಮಾನ ರೂಪದಲ್ಲಿ ಇಪ್ಪತ್ತು ಸಾವಿರ. ರೂಪಾಯಿಗಳಿಗೂ ಮೇಲ್ಪಟ್ಟು ಮಾವಿನ ಹಣ್ಣುಗಳನ್ನು ಕೊಡುತ್ತಿವೆ.

ತೋಟದ ಉಸ್ತುವಾರಿಗೆ ಒಂದಾಳು. ಕೊಯಿಲಿನ ಸಮಯಕ್ಕೆ ಮಾತ್ರ ಹೆಚ್ಚುವರಿ ಎರಡಾಳು. ಉಳಿದಂತೆ ತೋಟದ ಸಮಸ್ತ ಉಸ್ತುವಾರಿ ಎರೆಹುಳಗಳ ಕೈಯಲ್ಲಿ, ಬ್ಯಾಕ್ಟೀರಿಯಾಗಳ ಕೈಯಲ್ಲಿ, ಹಕ್ಕಿಗಳ ಕೈಯಲ್ಲಿ, ಕೀಟಗಳ ಕೈಯಲ್ಲಿ. ಶೇಕಡಾ ತೊಂಭತ್ತಾರು ಕೀಟಗಳು ಕೃಷಿಗೆ ಅನುಕೂಲವಾದವುಗಳೆಂಬ ವಿಜ್ಞಾನದ ಹೇಳಿಕೆಗೆ ಪೂರಕವಾಗಿದೆ ಈ ತೋಟ. ಶೇಕಡಾ ನಾಲ್ಕರ ಹತೋಟಿಗಾಗಿ ಏನೆಲ್ಲ ಸರ್ಕಸ್ಸು ಬೇಕಿಲ್ಲವೆಂಬುದಕ್ಕೆ ದೃಷ್ಟಾಂತವಾಗಿದೆ ಈ ತೋಟದ ಮಾಟ.

ಎ.ಪಿ. ಚಂದ್ರಶೇಖರ್
ಕಳಲವಾಡಿ, ಮೈಸೂರು

ಶ್ರದ್ಧಾಂಜಲಿ

ಡಾ॥ ಮೈಕೇಲ್ ವಾರೆನ್

ಅಮೆರಿಕಾದ ಐವಾ ವಿಶ್ವವಿದ್ಯಾನಿಲಯದ "ದೇಶೀಯ ಕೃಷಿ ಜ್ಞಾನ ಹಾಗೂ ಗ್ರಾಮೀಣ ಅಭಿವೃದ್ಧಿ ಕೇಂದ್ರ" ದ ನಿರ್ದೇಶಕರಾಗಿದ್ದ ಡಾ॥ ಮೈಕೇಲ್ ವಾರೆನ್‌ರವರು ಆಫ್ರಿಕಾದಲ್ಲಿ ಪ್ರೌಢಶಾಲಾ ಶಿಕ್ಷಕರಾಗಿದ್ದಾಗ ಅಲ್ಲಿಯ ಗ್ರಾಮೀಣ ಜನರ ಮುಖ್ಯವಾಗಿ ಟೆಕಿಮನ್, ಜೋನೋ ಮತ್ತು ಮೊರುಬ ದೇಶೀಯ ತಂತ್ರಜ್ಞಾನ, ನಾಟಿ ಕೃಷಿ ಪದ್ಧತಿಗಳ ಬಗ್ಗೆ ಆಕರ್ಷಿತರಾದರು. ಈ ಗ್ರಾಮೀಣ ಜನರ ಜಾಣ್ಮೆಗೆ ಮೌಲ್ಯ ನೀಡಲು ಹಾಗೂ ಅವರ ತಂತ್ರಜ್ಞಾನಗಳು ಹೊರ ಪ್ರಪಂಚಕ್ಕೆ ಅಷ್ಟಾಗಿ ಗಮನಕ್ಕೆ ಬಂದಿರಲೂ ಇಲ್ಲ. ಅವರ ಬಗ್ಗೆ ಗೊತ್ತಿದ್ದ ಕೆಲವರಿಗೆ ಅಷ್ಟಾಗಿ ಆಸಕ್ತಿಯಿರಲಿಲ್ಲ. ಆದ್ದರಿಂದ ಆ ಗ್ರಾಮೀಣ ಜನರ ದೇಶೀಯ ಜ್ಞಾನಕ್ಕೆ ಮೌಲ್ಯ ಒದಗಿಸಲು ಶ್ರೀ ಮೈಕೇಲ್ ವಾರೆನ್ 1987 ರಲ್ಲಿ ಐವಾ ವಿಶ್ವವಿದ್ಯಾಲಯದಲ್ಲಿ ಸಿಕಾರ್ಡ್ (CIKARD) ಸ್ಥಾಪಿಸಿದರು. ಸಿಕಾರ್ಡ್ ಮೂಲಕ ದೇಶೀಯ ತಂತ್ರಜ್ಞಾನಗಳ ಬಗ್ಗೆ ಸಂಶೋಧನೆ ಮತ್ತು ತರಬೇತಿ ನೀಡುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು.

ಸೈಲಾಂಗ್ ಸಮ್ಮೇಳನದಲ್ಲಿ ಅವರು ನೀಡಿದ ಸಲಹೆಯಂತೆ, 1993 ಫೆಬ್ರುವರಿಯಲ್ಲಿ "ದೇಶೀಯ ಜ್ಞಾನ ಮತ್ತು ಅಭಿವೃದ್ಧಿ ಮಾನಿಟರ್" ಎಂಬ ಅಂತರರಾಷ್ಟ್ರೀಯ ಮಟ್ಟದ ಪತ್ರಿಕೆ ಮೊದಲಬಾರಿಗೆ ಮುದ್ರಿತಗೊಂಡಿತು. ಶ್ರೀ ವಾರೆನ್‌ರವರು ಆ ಪತ್ರಿಕೆಯ ಸಂಪಾದಕೀಯ ಮಂಡಳಿ ಸದಸ್ಯರಾಗಿದ್ದರು. ಸುಸ್ಥಿರ ಅಭಿವೃದ್ಧಿಯಲ್ಲಿ ದೇಶೀಯ ಜ್ಞಾನ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅಪಾರ ನಂಬಿಕೆ ಇಟ್ಟಿದ್ದ ಶ್ರೀ ವಾರೆನ್‌ರವರು ದೇಶೀಯ ಜ್ಞಾನಕ್ಕೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳು, ಸಂಶೋಧನಾ ವರದಿಗಳು, ಲೇಖನಗಳನ್ನು ಬರೆದಿದ್ದಾರೆ.

ವಿಶ್ವ ಮಟ್ಟದಲ್ಲಿ ದೇಶೀಯ ಜ್ಞಾನವ್ಯವಸ್ಥೆ ಬಗ್ಗೆ ಗೌರವ, ಕಾಳಜಿ ಏರ್ಪಾಟಾಗಿ ಆ ಬಗ್ಗೆ ಸಂಶೋಧನೆ, ಚರ್ಚೆಗಳೇರ್ಪಡಿಸಲು ಡಾ. ವಾರೆನ್ ನೀಡಿದ ಕೊಡುಗೆ ಅಪಾರ. ಇವರು 1997 ರ ಡಿಸೆಂಬರ್‌ನಲ್ಲಿ ನೈಜೀರಿಯಾದಲ್ಲಿ ನಿಧನರಾದರು. ಅವರ ನಿಧನಕ್ಕೆ ಹಿತ್ತಲಗಿಡ ತೀವ್ರ ಶೋಕ ವ್ಯಕ್ತಪಡಿಸುತ್ತದೆ.

ಸುಸ್ಥಿರ ಕೃಷಿ ಲೇಖಕರ ಬಳಗ,
ಜಿ.ಕೆ.ವಿ.ಕೆ. ಬೆಂಗಳೂರು

'ದವ್ವರ್' ಎಂಬ ದೇಸೀಕ್ರೇನು

'ದವ್ವರ್' ಹೊರಪ್ರಪಂಚಕ್ಕೆ ಇನ್ನೂ ಅಷ್ಟಾಗಿ ತಿಳಿಯದ ಒಂದು ಸರಳ ಮರ ಯಂತ್ರ. ಯಾವ ಹೈಟೆಕ್ ಕ್ರೇನುಗಳಿಗೂ ಸರಿಸಾಟಿಯಾಗಿ ನಿಲ್ಲಬಲ್ಲ ದೈತ್ಯ, ಈ 'ದವ್ವರ್' ಎಂಬ ದೇಸೀಕ್ರೇನು. ದವ್ವರ್‌ಗೆ ಶತಮಾನಗಳ ಇತಿಹಾಸವಿದೆ. ಕಡಲ ದಡದಲ್ಲಿದರ ಆವಿಷ್ಕಾರ, ಕೇರಳದ ಕಲ್ಲಿಕೋಟೆ ಬಳಿಯ ಬೈಪೂರ್ ನಾಡ ಹಡಗು ತಯಾರಿಕೆಯಲ್ಲಿ ಬಹಳ ಹಿಂದಿನಿಂದಲೂ ಪ್ರಸಿದ್ಧಿ. ಇಲ್ಲಿ ಹಡಗುಗಳನ್ನು ನೀರಿಗಿಳಿಸಲು ದವ್ವರ್‌ನ ಬಳಸಲು ಪ್ರಾರಂಭಿಸಿದರು. ಹಾಗಾಗಿ ದವ್ವರ್‌ನ ಹುಟ್ಟು ಬಳಕೆ ಇಲ್ಲೇ ಆರಂಭಗೊಂಡಿರಬಹುದೆಂದು ನಂಬಿಕೆ.

ಅಪಘಾತಗಳಲ್ಲಿ ಮಗುಚಿಬಿದ್ದ ವಾಹನಗಳನ್ನು ಪ್ರಪಾತದಿಂದ ಎತ್ತಲು ಸಹಕಾರಿಯಾಗಿದ್ದಾರೆ ಮಂಗಳೂರಿನ ಒಂದು ಕುಟುಂಬ. ಐವತ್ತು ವರುಷಗಳಿಂದಲೂ ಈ ಕಾಯಕದಲ್ಲೇ ತೃಪ್ತಿ. 'ಹಾಜಿಕ್ರೇನ್' ಎಂಬ ಹೆಸರಿನ ಈ ತಂಡದ ಸ್ಥಾಪಕ ಅಬ್ಬು ಅಬ್ದುಲ್ ರೆಹಮಾನ್ ಬೇಂದ್ರೆ ಕಡಲತೀರದಲ್ಲಿ ದವ್ವರ್ ತಂಡದಲ್ಲಿ ದುಡಿಯುತ್ತಿದ್ದರು. ಅಬ್ಬು ಅವರು ಗತಿಸಿ ಒಂದು ವರುಷವಾಗಿದೆ. ಈಗ ಅವರ ಮಕ್ಕಳಾದ ಮೊಯಿದಿನ್ ಆದಿಲ್ ಮತ್ತು ಅಬ್ದುಲ್ ಹಮೀದ್ ದವ್ವರ್ ವೃತ್ತಿ ಮುಂದುವರೆಸಿದ್ದಾರೆ. ಒಂದೇ ದಿನದಲ್ಲಿ ಏಳು ಗಾಡಿ ತೆಗೆದದ್ದು ಅವರ ದಾಖಲೆಯಾಗಿದೆ. ಅಬ್ಬು ಅವರ ಕಾಲದ ದವ್ವರ್‌ಗಳು ಈಗ ಮೂಲೆ ಸೇರಿವೆ. ಈಗ ಬಳಸುತ್ತಿರುವ ದವ್ವರ್‌ಗಳು ಇತ್ತೀಚೆಗೆ ರೂಪುಗೊಂಡಿದ್ದವಾಗಿವೆ.

ಪ್ರಪಾತಕ್ಕೆ ಬಿದ್ದಿರುವ ವಾಹನಗಳನ್ನು ಅವುಗಳ ಚಕ್ರದ ಮೇಲೆಯೇ ಎಳೆದು ಮೇಲೆ ತರುವುದು ದವ್ವರ್‌ನಿಂದ ಸಾಧ್ಯ. ಇದರಿಂದ ಗಾಡಿಗೆ ಹಾನಿಯಿಲ್ಲ. ದವ್ವರ್ ಯಾವುದನ್ನೂ ಎಳೆಯುವುದಿಲ್ಲ ಅಂತ ಇಲ್ಲ.

ದವ್ವರ್‌ನ ಮತ್ತೊಂದು ಅನುಕೂಲತೆಯೆಂದರೆ ಇದನ್ನು ಗಂಟೆಯೊಳಗೆ ಕಳಚಿ ಕೂಡಿಸಬಹುದು. ಹಾಗಾಗಿ ದೂರ ಸಾಗಿಸಲೂ ಸುಲಭ.

ಇಂದಿನ ಬೆಲೆಯಲ್ಲಿ ಮಧ್ಯಮ ಗಾತ್ರದ ದವ್ವರ್ ನಿರ್ಮಿಸಲು 50,000 ರೂಪಾಯಿ ಬೇಕಾದೀತು ಎಂದು ಆದಿಲ್‌ರ ಅಂದಾಜು.

ದವ್ವರ್‌ನ ಬಳಕೆ ಬೇರೆಡೆಯಲ್ಲೂ ಇದೆ ಎಂದರೆ ನಂಬುವಿರಾ? ಕಾರ್ಕಳದ ಗೊಮ್ಮಟೇಶ್ವರನನ್ನು ಎತ್ತಿ ನಿಲ್ಲಿಸಿದ್ದು, ಮಂಗಳೂರು ರಥಬೀದಿ ದೇವಸ್ಥಾನದ ಮಹಾದ್ವಾರ, ಮಂಜೇಶ್ವರ ಜೈನ ದೇವಾಲಯದ ದ್ವಾರ, ಚಿಕ್ಕಮಗಳೂರಿನ ಕಾಡಿಗೆ ಮರ ಎಳೆಯಲು ಹೋಗಿದ್ದು. ಮುಂದುವರಿಯುವತ್ತದೆ ದವ್ವರ್‌ನ ಸಾಹಸ ಗಾಥೆ. ದವ್ವರ್ ಇನ್ನೂ ಹೊರ ಪ್ರಪಂಚಕ್ಕೆ ಅಷ್ಟಾಗಿ ತಿಳಿಯದು. ಈಗ ನಿಧಾನವಾಗಿ ಮೂಲೆ ಗುಂಪಾಗುತ್ತಿದೆ.

ಕೃಪೆ : 'ಸುಧಾ' ವಾರ ಪತ್ರಿಕೆ, 15.2.1998

ಯುವ ಕೃಷಿಕನ ನಾಟಿ ತಂತ್ರಜ್ಞಾನ

ಉತ್ತರ ಕನ್ನಡದ ಕೃಷಿಕರಿಗೆ ನಾಟೀ ತಂತ್ರಜ್ಞಾನದಲ್ಲೇ ಹೆಚ್ಚು ನಂಬಿಕೆ. ಹಾಗೆಯೇ ಪ್ರಯೋಗಶೀಲರೂ ಕೂಡಾ. ಅದಕ್ಕೆ ಉದಾಹರಣೆಯೆಂಬಂತೆ ಕಬ್ನಳ್ಳಿಯ ಯುವ ಕೃಷಿಕ ಶ್ರೀಧರ ಎಂ. ಹೆಗಡೆ ವಿದ್ಯುತ್ ರಗಳೆಯಿಂದ ಹೊರತುಗೊಂಡ "ಕೈಯಿಂದಲೇ ನೀರೆತ್ತುವ ಪಂಪ"ನ್ನು ಸಂಶೋಧಿಸಿದ್ದಾರೆ.

ಈ ಕೈಚಾಲಿತ ಪಂಪು ಮೋಟಾರ್ ಸೈಕಲ್‌ನ ಹಾಳಾದ ರಿಮ್, ಹಗ್ಗ, ರಬ್ಬರ್ ವಾಷರ್, ಬಾಲ್ ಬೇರಿಂಗ್‌ಗಳನ್ನುಳಗೊಂಡಿದೆ. ಇದಕ್ಕೆ ಎಲ್ಲಾ ಸೇರಿ ಗರಿಷ್ಠವೆಂದರೂ ಇನ್ನೂರೈವತ್ತು ರೂಪಾಯಿಗಳು ಖರ್ಚಾದೀತು. ಕೇವಲ ಆರು ನಿಮಿಷಕ್ಕೆ ನೂರು ಲೀಟರ್ ನೀರು ಬಾವಿಯಿಂದ ಮೇಲಕ್ಕೆ, ಸರಳ, ಆದರೆ ಪರಿಣಾಮಕಾರಿ ತಂತ್ರಜ್ಞಾನ, ಆಸಕ್ತಿಯುಳ್ಳವರು ಪ್ರತ್ಯಕ್ಷವಾಗಿ ನೋಡಿ ಬರಲು ಶ್ರೀಧರ ಎಂ. ಹೆಗಡೆ ಕಬ್ನಳ್ಳಿ, ಕಾನಗೋಡ್ ಅಂಚೆ, ಶಿರಸಿ - 581 340 (ಉ.ಕ) ಇವರನ್ನು ಸಂಪರ್ಕಿಸಿ.

ಕೃಪೆ ಸಂಯುಕ್ತ ಕರ್ನಾಟಕ 19.2.1998
ಸುಳಿವು : ಧರ್ಮಾ ನಾಗಪ್ಪ ನಾಯ್ಕ
ನಡುಗಿನ ಬೇಲಿ, ಮಾವಿನಕುರ್ವೆ (ಉ.ಕ)

ಹಿತ್ತಲ ಗಿಡದ ಕುಟುಂಬ

Honey Bee	- ಇಂಗ್ಲೀಷ್
Nam Vazhi Velanmai	- ತಮಿಳು
Lokasarvani	- ಗುಜರಾತಿ
Dzongkha Honey Bee	- ಭೂತಾನಿ
Thenetiga	- ತೆಲುಗು
Sujh Bujh	- ಹಿಂದಿ
Khoj Bhal	- ಪಂಜಾಬಿ

ಗ್ಯಾಟ್, ಬೌದ್ಧಿಕ ಸನ್ನದಿನ ಹಕ್ಕು ಮತ್ತು ನಮ್ಮ ಪಾಲು (ದು)?

ತೇಜಸ್ವಿನಿ ಮತ್ತು ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಬೇವಿನ ಮೇಲಿನ ಅಧಿಕಾರ ಅಮೇರಿಕಾಕ್ಕೆ! ಬೇವಿನಿಂದ ಔಷಧಿ ತಯಾರಿಸಿ ಅದನ್ನು ಕೀಟ ಹತೋಟಿಗೆ ಬಳಸಬಹುದೆಂಬ ಸಂಶೋಧನೆ ಮಾಡಿದ್ದಕ್ಕಾಗಿ, ತನಗೇ ಅದರ ಮೇಲೆ ಅಧಿಕಾರ ಎಂದು ಅಮೇರಿಕಾದ ಕಂಪೆನಿಯೊಂದು 'ಪೇಟೆಂಟ್ ಪಡೆದುಕೊಂಡಿತು.

ಬೇವಿನ ಹಿಂದೆಯೇ ಬಂದದ್ದು ಅರಿಶಿನ. ಅದರಲ್ಲಿರುವ ಔಷಧೀಯ ಗುಣಗಳಿಗಾಗಿ ಅಮೇರಿಕಾದ ವಿಜ್ಞಾನಿಗಳು ಪೇಟೆಂಟ್ ಪಡೆದರು. ಅನಂತರ ಬಂದದ್ದು 'ಬಾಸುಮತಿ ಅಕ್ಕಿ'. ಅದೂ ಕೂಡ ಅವರದ್ದಂತೆ. ಏನಿದು ಈ 'ಪೇಟೆಂಟ್'? ಬೇವನ್ನು ಹಿಂಡಿಯಾಗಿ ಬಳಸುವುದು, ಗಿಡಗಳಿಗಿರಲಿ, ಮನುಷ್ಯರ ಅನೇಕ ಸಣ್ಣ ಪುಟ್ಟ ಕಾಯಿಲೆಗಳಿಗೂ ಬೇವಿನ ರಸ ಕುಡಿಸುವುದು, ಬೇವಿನ ಎಲೆ ಕುದಿಸಿದ ನೀರಿನಲ್ಲಿ ಸ್ನಾನ ಅರಿಶಿನ ಮನೆ ಮದ್ದಾಗಿ ಬಳಸುವುದು ತಲ ತಲಾಂತರದಿಂದ ಬಳಸಿಕೊಂಡು ಬಂದ ಪದ್ಧತಿ. ಹಾಗಾದರೆ, ಈ 'ನಮ್ಮ ವಸ್ತುಗಳು' ಇದ್ದಕ್ಕಿದ್ದಂತೆ ಪರಕೀಯವಾದದ್ದಾದರೂ ಹೇಗೆ?

ಗ್ಯಾಟ್‌ನಿಂದ ಬೌದ್ಧಿಕ ಸನ್ನದಿನ ಹಕ್ಕಿನವರೆಗೆ

ಅಂತರರಾಷ್ಟ್ರೀಯ ವ್ಯಾಪಾರ ನಡೆಸಲು ಮಾಡಿಕೊಂಡ ಒಪ್ಪಂದವೇ ಗ್ಯಾಟ್. ಇದು 1948 ರಲ್ಲಿ ಆರಂಭವಾದ ಒಪ್ಪಂದ. ನಮ್ಮ ಭಾರತ ಪ್ರಾರಂಭದಿಂದಲೂ ಅದರ ಸದಸ್ಯತ್ವ ಹೊಂದಿದೆ. ಈಗ 125 ರಾಷ್ಟ್ರಗಳು ಇದರಲ್ಲಿ ಭಾಗಿಯಾಗಿವೆ. ಈ 'ಗ್ಯಾಟ್' ಆಗಿಂದಾಗ್ಗೆ ಸಮಾಲೋಚನೆ ನಡೆಸಿ ಮಾರಾಟದ ನಿಯಮಾವಳಿಗಳನ್ನು ಪರಿಷ್ಕರಿಸುತ್ತಿರುತ್ತದೆ. ಇತ್ತೀಚೆಗೆ ಅಥವಾ ಕೊನೆಯದಾಗಿ ನಡೆದದ್ದು ಎಂಟನೇ ಸುತ್ತಿನ ಸಮಾಲೋಚನೆ. ಇದು ನಡೆದದ್ದು ಉರುಗ್ವೆಯಲ್ಲಿ. ಹಾಗಾಗಿ ಉರುಗ್ವೆ ಸುತ್ತಿನ ಮಾತುಕತೆ ಎಂದು ಪ್ರಖ್ಯಾತ. ಈ ಎಂಟನೇ ಸುತ್ತಿನಲ್ಲಿ ಜೈವಿಕ ವಸ್ತುಗಳು ಅರ್ಥಾತ್ ಬೀಜ, ಸಸಿ ಇತ್ಯಾದಿಗಳು ಚರ್ಚೆಗೆ ಒಳಪಟ್ಟಿತ್ತು. ಅಲ್ಲಿಯವರೆಗೆ ಕೇವಲ ಔದ್ಯಮಿಕ ವಸ್ತುಗಳಿಗೆ ಮಾತ್ರ ಪೇಟೆಂಟ್ ಇತ್ತು. ಅಂದರೆ, ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಹೊಸ ವಸ್ತುವನ್ನು ತಯಾರಿಸಿದಾಗ, ಅಥವಾ ವಸ್ತು ತಯಾರಿಸಲು ಅಗತ್ಯವಾದ ಹೊಸ ವಿಧಾನ ಕಂಡುಹಿಡಿದಾಗ ಆ ವಸ್ತು ಅಥವಾ ತಯಾರಿಕಾ ವಿಧಾನದ ಮೇಲಿನ ಸಂಪೂರ್ಣ ಹಕ್ಕನ್ನು ಸಂಶೋಧನೆ ಮಾಡಿದ ವ್ಯಕ್ತಿ ಅಥವಾ ಸಂಸ್ಥೆಗೆ ಕೊಡಲಾಗುತ್ತದೆ. ಈ ಹಕ್ಕು ನಿರ್ದಿಷ್ಟ ಅವಧಿಗೆ ಸೀಮಿತವಾಗಿದ್ದು ಆ ಅವಧಿಯಲ್ಲಿ ಇತರರು ಅದನ್ನು ಬಳಸಲು 'ರಾಯಲ್ಟಿ' ಶುಲ್ಕ ಒಪ್ಪಿಸಬೇಕಾಗುತ್ತದೆ. ಒಟ್ಟಿನಲ್ಲಿ ಸಂಶೋಧನೆ ಮಾಡಿದವರಿಗೆ ಮಾರುಕಟ್ಟೆಯಲ್ಲಿ ಅಧಿಕ ಪಾಲು ದೊರೆಯುತ್ತದೆ. 1978 ರಲ್ಲಿ ಅಂತರಾಷ್ಟ್ರೀಯ ಮಾತುಕತೆಯೊಂದು ನಡೆದು ಸಸ್ಯಗಳ ಹೊಸ ತಳಿಗಳನ್ನು ಈ ರೀತಿ ಪೇಟೆಂಟ್ ಕಾಯಿದೆಗೆ ಒಳಪಡಿಸಬೇಕು ಅಥವಾ ಅವರಿಗೆ 'ಬೌದ್ಧಿಕ ಸಂಪತ್ತಿನ ಹಕ್ಕು' ಕೊಡಬೇಕೆಂದು ತೀರ್ಮಾನ ಕೈಗೊಂಡಿತು. ಈ ಮಾತುಕತೆಯೇ ಯು.ಪಿ.ಒ.ವಿ(UPOV), ಮುಂದೆ ಗ್ಯಾಟ್‌ನ ಎಂಟನೇ ಸುತ್ತಿನ ಮಾತುಕತೆಯಲ್ಲಿ ಈ ನಿರ್ಧಾರವನ್ನು ಅಂತರಾಷ್ಟ್ರೀಯ ಮಾರುಕಟ್ಟೆಯ ನಿಯಮಾವಳಿಯಲ್ಲಿ ಅಳವಡಿಸುವ ಎಲ್ಲಾ ಪ್ರಯತ್ನಗಳೂ ನಡೆದವು.

ಆದರೆ, ಇದಕ್ಕೆ ಸಾಕಷ್ಟು ಪ್ರತಿರೋಧಗಳು ಬಂದವು. 1936 ರಿಂದ 1990 ರ ವರೆಗೆ ಈ ಮಾತುಕತೆಗಳು ನಡೆದರೂ ಎಲ್ಲಾ ರಾಷ್ಟ್ರಗಳು ಸರ್ವಸಮ್ಮತ ಒಪ್ಪಂದಕ್ಕೆ ಬರಲು ಸಾಧ್ಯವಾಗಲಿಲ್ಲ. ಅನಂತರ ಆಗಿನ 'ಗ್ಯಾಟ್'ನ ಅಧ್ಯಕ್ಷನಾಗಿದ್ದ ಆರ್ಥರ್ ಡಂಕೆಲ್ ಎಂಬುವನು ಉರುಗ್ವೆ ಸುತ್ತಿನ ಮಾತುಕತೆಗಳ ಅಧಾರದ ಮೇಲೆ ಕೆಲವು ನಿಯಮಾವಳಿಗಳನ್ನು ರೂಪಿಸಿದ. ಇವೇ 'ಡಂಕಲ್‌ಡ್ರಾಫ್ಟ್' ಎಂದು ಪ್ರಖ್ಯಾತ. ಈ ನಿಯಮಾವಳಿಗಳ ಆಧಾರದ ಮೇಲೆ ಉರುಗ್ವೆ ಒಪ್ಪಂದಕ್ಕೆ 1993 ಡಿಸೆಂಬರ್‌ನಲ್ಲಿ 112 ರಾಷ್ಟ್ರಗಳು ಸಹಿ ಹಾಕಿದವು . ಅದರಲ್ಲಿ ಭಾರತವೂ ಒಂದು. ಹೀಗೆ ಸಹಿ ಹಾಕುವಾಗ ಈ ರಾಷ್ಟ್ರಗಳು ಅವುಗಳ ನಿಯಮಾವಳಿಗಳನ್ನು ರೂಪಿಸಲು ಕಾಲಾವಕಾಶ ನೀಡಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಕೇವಲ ಒಂದು ವರ್ಷದ ಕಾಲಾವಧಿ ನೀಡಿದ್ದು, ಅಮೇರಿಕ ಹಾಗು ಇನ್ನಿತರ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು 1996 ಜನವರಿ ಒಂದರಿಂದಲೇ ಇದನ್ನು ಒಪ್ಪಿಕೊಂಡಿವೆ. ಆದರೆ, ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ನಾಲ್ಕು ವರ್ಷಗಳ ಕಾಲಾವಧಿ ನೀಡಿದ್ದು, 1999ರ ಒಳಗಾಗಿ ನಾವು ನಮ್ಮ ನಿಯಮಾವಳಿಗಳನ್ನು ರೂಪಿಸಬೇಕಾಗಿದೆ.

ಬಿತ್ತನೆ ಬೀಜಗಳ ಪೇಟೆಂಟಿಂಗ್ ಬಗ್ಗೆ ಈ ಒಪ್ಪಂದ ಏನನ್ನೂ ಕಡ್ಡಾಯಗೊಳಿಸಿಲ್ಲ. 'ಸುಯಿಜನಿರಿಸ್' (ಅಂದರೆ ತನ್ನದೇ ಆದ ವಿಶಿಷ್ಟ ವ್ಯವಸ್ಥೆ) ರಕ್ಷಣೆಯನ್ನು ಸಹ ಕೊಡಬಹುದಾಗಿದೆ. ಸುಯಿಜನಿರಿಸ್ ರಕ್ಷಣೆ ಎಂದರೆ ಬೌದ್ಧಿಕ ಸಂಪತ್ತು ರಕ್ಷಣೆಯ ಇತರ ವರ್ಗಗಳಿಂದ (ಉದಾಹರಣೆಗೆ ಪೇಟೆಂಟ್) ಬೇರೆಯಾದ ಒಂದು ಏರ್ಪಾಡು. ಇದೇ ಒಂದು . ಪ್ರತ್ಯೇಕ ವರ್ಗ. 1978ರ ಯು.ಪಿ.ಒವಿ.ಯ ಪ್ರಕಾರ ರೈತ ತಾನು ಖರೀದಿಸಿದ ಸಂರಕ್ಷಿತ ಬಿತ್ತನೆ ಬೀಜದಿಂದ ಬೆಳೆಯುವ ಸ್ವಲ್ಪ ಭಾಗವನ್ನು ಉಳಿಸಿಕೊಂಡು, ಅದನ್ನು ಮುಂದಿನ ಸಲದ ಬೆಳೆ ಬೆಳೆಯಲು ಉಪಯೋಗಿಸುವ ಹಕ್ಕು ಹೊಂದಿರುತ್ತಾನೆ. ಆದರೆ, 1991 ರಲ್ಲಿ ಮಾಡಿದ ತಿದ್ದುಪಡಿಯ ಪ್ರಕಾರ ರೈತನಿಗೆ ಈ ಹಕ್ಕು ಇರುವುದಿಲ್ಲ. ಆದರೆ, ಉರುಗ್ವೆ ಒಪ್ಪಂದದಲ್ಲಿ 'ಸುಯಿಜನಿರಿಸ್' ಪದ್ಧತಿಗಳ ನಿಯಮಾವಳಿಗಳನ್ನು ಸದಸ್ಯ ರಾಷ್ಟ್ರಗಳು ರೂಪಿಸಿಕೊಳ್ಳುವಾಗ ತಮ್ಮ ಸಂಪೂರ್ಣ ವಿವೇಚನೆಯ ಮೇಲೆ, 1978 ರ ಒಪ್ಪಂದ ಅಥವಾ 1991 ರ ತಿದ್ದುಪಡಿಯನ್ನು ಅಳವಡಿಸಿ ಕೊಳ್ಳಬಹುದಾಗಿದೆ.

ಇದರ ದುಷ್ಪರಿಣಾಮಗಳೇನಾಗಬಹುದು?

ಅಂತರರಾಷ್ಟ್ರೀಯ ಪೇಟೆಂಟ್ ಪಡೆಯಲು ಕನಿಷ್ಟ ಎಂದರೂ ಅರವತ್ತರಿಂದ ಎಂಭತ್ತು ಸಾವಿರ ರೂಪಾಯಿಗಳಷ್ಟು ಖರ್ಚಾಗುತ್ತದೆ. ಹೀಗಾಗಿ ಅತ್ಯಂತ ಶ್ರೀಮಂತ ಸಂಸ್ಥೆಗಳಲ್ಲದೆ; ಸಾಮಾನ್ಯ ವ್ಯಕ್ತಿ, ಸಾರ್ವಜನಿಕ ಸಂಸ್ಥೆಗಳಿರಲಿ,

ದೇಶೀಯ ಖಾಸಗಿ ಸಂಸ್ಥೆಗಳಿಗೂ ಇದು ಕಷ್ಟದ ಮಾತು. ಹೀಗಾಗಿ ಬಹುರಾಷ್ಟ್ರೀಯ ಸಂಸ್ಥೆ (Multinational company)ಗಳ ಸಾರ್ವಭೌಮತ್ವ ಅಧಿಕವಾಗುವ ಸಾಧ್ಯತೆ ಹೆಚ್ಚು.

ಅಂತರರಾಷ್ಟ್ರೀಯ ಸಂಸ್ಥೆಗಳ ಕಣ್ಣೆಲ್ಲಾ ಲಾಭದ ಮೇಲೆ. ಬೀಜ ಗೊಬ್ಬರ, ಔಷಧಿ ಎಲ್ಲವನ್ನೂ ಉತ್ಪಾದಿಸುವ ಸಾಮರ್ಥ್ಯ ಅವರಿಗಿದೆ. ಅವರು ಕೊಡುವ ಬೀಜ ಅಧಿಕ ಇಳುವರಿ ಕೊಡುತ್ತದೆ. ಆದರೆ, ಆ ಅಧಿಕ ಇಳುವರಿ ಕೊಡಲು ಗೊಬ್ಬರ ಹಾಕಲೇ ಬೇಕು. ಜೊತೆಗೆ ಅವುಗಳಿಗೆ ಕೀಟ ರೋಗಗಳ ಹಾವಳಿಯೂ ಅಧಿಕ ಹಾಗಾಗಿ ಅವರು ಹೇಳಿದ ಔಷಧಿ ಹೊಡೆಯಲೇ ಬೇಕು. ಇದೊಂದು ವಿಷ ವರ್ತುಲ. ಉತ್ತರ ಕರ್ನಾಟಕದಲ್ಲಿ ವರದಿಯಾಗುತ್ತಿರುವ ರೈತರ ಆತ್ಮಹತ್ಯೆ ಪ್ರಕರಣಗಳು; ಈ ದಿಶೆಯಲ್ಲಿ ಎಚ್ಚರಗೊಳಿಸುವ ಘಟನೆಗಳು.

ಈ ಪೇಟೆಂಟ್ ಆಗಲೀ, ಸುಯಿಜನಿರಿಸ್ ಆಗಲೀ ನಮಗೆ ಬೇಡ ಎಂದರೆ ಭಾರತ ಗ್ಯಾಟ್‌ನಿಂದ ಹೊರಗುಳಿಯಬೇಕಾಗುತ್ತದೆ. ಅರ್ಥಾತ್ ವಿಶ್ವವ್ಯಾಪಾರದಲ್ಲಿ ನಮಗೆ ಸ್ಥಾನವಿಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಮದು ಮತ್ತು ರಫ್ತು ಎರಡರಲ್ಲೂ ನಮಗೆ ಸ್ಥಾನವಿಲ್ಲ. ನಮ್ಮ ಉತ್ಪನ್ನಗಳನ್ನು ನಾವು ರಫ್ತು ಮಾಡಿದಾಗ ಮಾತ್ರ ತೈಲ ಕೈಗಾರಿಕಾ ಕಚ್ಚಾ ಸಾಮಗ್ರಿಗಳು, ಯಂತ್ರಗಳು ಇವನ್ನೆಲ್ಲಾ ಕೊಂಡುಕೊಳ್ಳಲು ಸಾಧ್ಯ.

ಇಲ್ಲಿಯವರೆಗಿನ ನಮ್ಮ ದೇಶದ ಪೇಟೆಂಟ್ ನಿಯಮಾವಳಿಯ ಪ್ರಕಾರ ನಮ್ಮ ದೇಶದಲ್ಲಿ ಔದ್ಯಮಿಕ ವಸ್ತುಗಳಿಗಲ್ಲದೆ, ಜೀವಂತ ವಸ್ತುಗಳಿಗೆ ಪೇಟೆಂಟ್ ಮಾಡುವ ಸಾಧ್ಯತೆಯಿಲ್ಲ. ಈಗ 'ಡಂಕಲ್‌ಡ್ರಾಫ್ಟ್' ಮುಂದಿಟ್ಟಿರುವ ಸಲಹೆಯ ಪ್ರಕಾರ, ಯಾವುದೇ ತಳಿಯಲ್ಲಿನ ಉತ್ತಮ ಗುಣವನ್ನು ಗುರುತಿಸಿದ ಸಂಸ್ಥೆ ಅಥವಾ ವಿಜ್ಞಾನಿ ಆ ಗುಣಗಳನ್ನು ಪೇಟೆಂಟ್ ಮಾಡಿಕೊಳ್ಳಬಹುದು. ಉದಾಹರಣೆಗೆ, ಗಾಳಿಯಿಂದ ಸಾರಜನಕವನ್ನು ಹಿಡಿದಿಡುವ ಸಾಮರ್ಥ್ಯವುಳ್ಳ ಗುಣವನ್ನು ಒಬ್ಬ ವಿಜ್ಞಾನಿ 'ಎ' ತಳಿಯಲ್ಲಿ ಗುರುತಿಸಿದನೆಂದಿಟ್ಟುಕೊಳ್ಳೋಣ. ಅದರ ಮೇಲಿನ ಹಕ್ಕನ್ನು ಅವನು ತನ್ನದೆಂದು ಹಿಡಿದಿಟ್ಟುಕೊಳ್ಳಬಹುದು. ಮುಂದೊಮ್ಮೆ ಆ ಗುಣವನ್ನು ಬಳಸಿ, ಬಿ ಎಂಬ ಹೊಸ ತಳಿ ಸೃಷ್ಟಿಸಿದರೆ, ಅದನ್ನು ಉತ್ಪಾದಿಸಿ ಮಾರುವ ಹಕ್ಕೆಲ್ಲಾ ಅವನಿಗೆ. ಮೂಲ ಕಾರಣವಾಗಿ 'ಎ' ತಳಿಯನ್ನು ಉಳಿಸಿಕೊಂಡು ಬಂದ ರೈತನಿಗೆ ಏನೂ ಇಲ್ಲ. ಅಷ್ಟೇ ಅಲ್ಲ, ಮೂಲ ಕಾರಣವಾದ 'ಎ' ತಳಿಯನ್ನು ಯಾವ ರೈತ ಉಳಿಸಿಕೊಂಡ ಬಂದಿದ್ದನೋ, ಆ ರೈತ ಈ ಹೊಸ 'ಬಿ' ತಳಿಯ ಬೀಜವನ್ನು ಪುನಃ ಬಿತ್ತನೆಗೆ ಬಳಸಲು ಉಳಿಸಿಕೊಳ್ಳುವ ಅಧಿಕಾರವೂ ಇಲ್ಲ!

ಲಾಭವೇನು ಸಿಕ್ಕೀತು ?

ನಮ್ಮ ದೇಶವೂ ಸೇರಿದಂತೆ ಜಗತ್ತಿನ ಹಿಂದುಳಿದ ಹಾಗೂ ಮುಂದುವರಿಯುತ್ತಿರುವ ದೇಶಗಳೆಲ್ಲವೂ ನೈಸರ್ಗಿಕ ಸಂಪನ್ಮೂಲದಲ್ಲಿ ಹಾಗೂ ಸಸ್ಯ ವೈವಿಧ್ಯತೆಯಲ್ಲಿ ಶ್ರೀಮಂತ ರಾಷ್ಟ್ರಗಳು. ನಮ್ಮಲ್ಲಿನ ಸಸ್ಯಸಂಪತ್ತು, ಅದಕ್ಕೆ ಸಂಬಂಧಿಸಿದ ಜ್ಞಾನಸಂಪತ್ತು ಎರಡೂ ಹೇರಳವಾಗಿವೆ.

ತಂತ್ರಜ್ಞಾನದಲ್ಲಿ ಅಮೆರಿಕಾ ಅಥವಾ ಐರೋಪ್ಯರಾಷ್ಟ್ರಗಳು ಮುಂದುವರೆದಿರಬಹುದು. ಆದರೆ, ಅದಕ್ಕೆ ಬೇಕಾದ ಮೂಲ ತಳಿಗಳು ಇರುವುದು ನಮ್ಮಲ್ಲಿ. ಅಷ್ಟೇ ಅಲ್ಲ ಪರಂಪರಾನುಗತವಾಗಿ ಹರಿದುಬಂದಿರುವ ಜ್ಞಾನ ಸಂಪತ್ತೂ ಹೇರಳವಾಗಿದೆ ನಮ್ಮಲ್ಲಿ.

ಅನೇಕ ರೋಗ ಅಥವಾ ಕೀಟ ನಿರೋಧ ಗುಣವುಳ್ಳ ತಳಿಗಳು ನಮ್ಮಲ್ಲಿವೆ. ಔಷಧೀಯ ಗುಣವುಳ್ಳ ಸಸ್ಯಗಳೂ ಸಾಕಷ್ಟಿವೆ. ಇವೆಲ್ಲ ನಮ್ಮ ರಾಷ್ಟ್ರದ ಆಸ್ತಿ. ಅದರಲ್ಲೂ ಮುಖ್ಯವಾಗಿ ಅದನ್ನು ಕಾಪಾಡಿಕೊಂಡು ಬಂದ ರೈತ ಜನಾಂಗ ಅಥವಾ ಬುಡಕಟ್ಟು ಜನಾಂಗ ಅಥವಾ ಬುಡಕಟ್ಟು ಜನಾಂಗದ ಆಸ್ತಿ.ಈ ಸಸ್ಯ ಸಂಪತ್ತನ್ನು ಇತರರಿಗೆ, ಅನ್ಯ ರಾಷ್ಟ್ರಗಳಿಗೆ, ಖಾಸಗಿ ಸಂಸ್ಥೆಗಳಿಗೆ ಲಾಭ ಮಾಡಿಕೊಳ್ಳುವುದಕ್ಕಾಗಿ ನಾವೇಕೆ ಪುಕ್ಕಟೆಯಾಗಿ ಕೊಡಬೇಕು?

ಆಯಾ ಪ್ರದೇಶದ ಸಸ್ಯಗಳು ಅಲ್ಲಿನ ಜನರ ಸಂಪತ್ತು. ಯಾವುದೇ ಒಂದು ಸಸ್ಯವನ್ನು ಹೊರಗಿನವರು ಬಳಸಿಕೊಳ್ಳುವ ಮೊದಲು ಅಲ್ಲಿನ ಜನರಿಗೆ ಸೂಕ್ತ ಪ್ರತಿಫಲ ನೀಡುವ ವ್ಯವಸ್ಥೆ ಬರಬೇಕು. ಅದು ಹಣವಾಗಬಹುದು ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಕ್ರಮವಾಗಬಹುದು. ಒಟ್ಟಿನಲ್ಲಿ ಬೇರೊಬ್ಬರು ನಮ್ಮ ಸಂಪತ್ತನ್ನು ದೋಚಿಕೊಂಡು ಹೋಗದೇ, ಕೊಂಡುಕೊಂಡು ಹೋಗುವ ವ್ಯವಸ್ಥೆ ಸರಿಯಾಗಿ ಮೂಡಿ ಬರಬೇಕು. ಈ ರೀತಿಯ 'ಸುಯಿಜನಿರಿಸ್' ಪದ್ಧತಿ ರೂಪುಗೊಳ್ಳಬೇಕು.

ತೋರಿಕೆಗೆ, ಇವೆಲ್ಲಾ ಸಾಧ್ಯ ಎನ್ನಿಸುತ್ತದೆ. ನಮಗೆ ಬೇಕಾದ ಸುಯಿಜನಿರಿಸ್ ಪದ್ಧತಿಯ ಮುಖಾಂತರ ನಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಬಹುದು ಎಂದು. ಆದರೆ ವಿಷಯ ಅಷ್ಟು ಸರಳವಲ್ಲ. ಜೀವವೈವಿಧ್ಯತೆಯ ಕುರಿತಂತೆ ಒಂದು ಸಮಾಲೋಚನೆ (convention on Bio-diversity) ಜಾಗತಿಕ ಮಟ್ಟದಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ ನಡೆದು ರೈತರ ಹಕ್ಕುಗಳನ್ನು (Farmers rights) ಕಾಪಾಡಿಕೊಳ್ಳಬೇಕೆಂದು ಹೇಳಿಕೆಗಳು ಬಂದವು. ಅದರಂತೆ ಥೈಲ್ಯಾಂಡ್ ತನ್ನ ಹಕ್ಕುಗಳನ್ನು ಪ್ರತಿಪಾದಿಸಲು ಪ್ರಯತ್ನಪಟ್ಟಿತು. ತನ್ನ ದೇಶದ ಸಸ್ಯಸಂಪನ್ಮೂಲಗಳನ್ನು, ತನ್ನ ಬುಡಕಟ್ಟು ಜನಾಂಗದ ಔಷಧಿಯ ಸಸ್ಯಗಳನ್ನು ಅದಕ್ಕೆ ಸಂಬಂಧಿಸಿದ ಜ್ಞಾನವನ್ನು ಹೊರಗಿನವರು ಪೇಟೆಂಟ್ ಮಾಡುವ ಮೊದಲೇ ತನ್ನ ಹಕ್ಕು ಪ್ರತಿಪಾದಿಸುವ ಕಾಯಿದೆ ತರಲು ನಿರ್ಧರಿಸಿತು. ನಿರ್ಧಾರ ಜಾರಿಗೆ ಬರುವ ಮಾತಿರಲಿ, ಆ ರೀತಿಯ ಪ್ರಯತ್ನ ನಡೆಯುತ್ತಿದೆ ಎಂದು ತಿಳಿದೊಡನೆ ಅಮೇರಿಕಾದ ರಾಯಭಾರಿ ಕಚೇರಿ ಥೈಲ್ಯಾಂಡಿನ ಸರಕಾರಕ್ಕೆ ಆ ರೀತಿ ಮಾಡುವುದರಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಔಷಧೀಯ ಸಂಶೋಧನೆಗಳಿಗೆ ಅಡ್ಡಿಯುಂಟಾಗುತ್ತದೆ ಎಂದು ಹೇಳಿ ಅದರ ಸಮಜಾಯಿಸಿ ಕೇಳಿತು. ಹೊರಗಿನ ಬಲಿಷ್ಠ ರಾಷ್ಟ್ರಗಳ ದಬ್ಬಾಳಿಕೆ ಒಂದೆಡೆಯಾದರೆ, ನಮ್ಮ ನಮ್ಮಲ್ಲೇ ಇರುವ ಅಂತರ ಒಂದೆಡೆ. ಉದಾಹರಣೆಗೆ ದಾಸ್‌ಪ್ರಕಾಶ್ ಗುಂಪಿನ ಹೋಟೆಲ್‌ಗಳು ಇಡ್ಲಿ, ದೋಸೆ ಮಾಡುವ ವಿಧಾನಕ್ಕೆ ಪೇಟೆಂಟ್ ಕೇಳಿದೆ. ಬಹುರಾಷ್ಟ್ರೀಯ ಸಂಸ್ಥೆ ನೆಸ್ಲೆ 'ಕುಚಲಕ್ಕಿ' (Par boiled rice) ಮೇಲೆ ಪೇಟೆಂಟ್ ಕೇಳಿದೆ. ಇವೆಲ್ಲಾ ನಾಳೆ ದೇಶದ ಮೂಲೆ ಮೂಲೆಯಲ್ಲಿರುವ ನಮ್ಮ ಉಡುಪಿ ಹೋಟೆಲ್‌ಗಳಿಗೇ ಮಾರಕವಾಗುವುದೇ?

ಪೇಟೆಂಟ್‌ನ ಕೆಲ ವಿವಾದಗಳು

ಹೀಗೊಂದು ಅರಿಶಿನದ ಕಥೆ !

ಅರಿಶಿನದ ಮೇಲೆ, ಅದರ ಔಷಧೀಯ ಗುಣಗಳನ್ನು ಕಂಡು ಹುಡುಕಿದ್ದಕ್ಕಾಗಿ ಅಮೇರಿಕಾದಲ್ಲಿ ಯಾರೋ ಇಬ್ಬರು ವಿಜ್ಞಾನಿಗಳು ಪೇಟೆಂಟ್ ಕೇಳಿದ್ದಾರೆಂದು ಸುದ್ದಿ. ಸುದ್ದಿ ಕೇಳಿ ಇಲ್ಲಿ ನಮಗೆ ಭಾರತೀಯರಿಗೆ ಆಶ್ಚರ್ಯ. ಇದೇನು ಹೊಸ ಅವಿಷ್ಕಾರ ಅಡುಗೆ ಮನೆಯ ಅಮ್ಮನ ಡಬ್ಬದಲ್ಲಿರುವ ಅರಿಶಿನ ಅಜ್ಜಿ ಕಾಲದಿಂದಲೂ ಗಾಯಕ್ಕೆ ಹಚ್ಚಿದ್ದು, ಮುಖದ ಚಂದಕ್ಕೆ ಬಳಿದುಕೊಂಡಿದ್ದು, ಶೀತಕ್ಕೆ ಕೆಮ್ಮಿಗೆ ಎಲ್ಲದಕ್ಕೂ ಮದ್ದೆಂದು ಕೊಟ್ಟಿದ್ದು ಯಾರಿಗೆ ಗೊತ್ತಿಲ್ಲ?

ಭಾರತೀಯರು ಸುಮ್ಮನಿರಲಿಲ್ಲ. ದಾಖಲೆ ಪುರಾವೆಗಳನ್ನು ಒದಗಿಸಿ ಕೊನೆಗೂ ಅಮೇರಿಕಾದವರಿಗೆ ಅರಿಶಿನದ ಮೇಲೆ ಕೊಟ್ಟ ಪೇಟೆಂಟ್ ಸರಿಯಲ್ಲ ಎಂದು ಕೋರ್ಟಿನಲ್ಲಿ ವಾದಿಸಿದರು. ಆದರೆ, ಈ ಪ್ರಯತ್ನ ಮಾಡಿದಾಗ ಹೊರ ಬಂದ ಸತ್ಯ ವಿಸ್ಮಯ ಮಾತ್ರವಲ್ಲ ಕಹಿ ಹಾಗೂ ವಿಷಾದವನ್ನು ಕೊಟ್ಟಿದೆ.

ಈ ಅರಿಶಿನದ ಮೇಲಿನ ಪೇಟೆಂಟ್ ಕೇಳಿದವರು ಬೇರಾರು ಅಲ್ಲ; ಇಲ್ಲಿಂದ ಹೋಗಿ ಅಲ್ಲಿ ನೆಲೆಸಿರುವ ಇಬ್ಬರು ಭಾರತೀಯ ವಿಜ್ಞಾನಿಗಳೇ ಅಂತೆ. ಅಷ್ಟೇ ಅಲ್ಲ, ಪೇಟೆಂಟ್ ಕೊಡುವ ಅಮೇರಿಕಾದ ಕಛೇರಿಯಲ್ಲಿರುವ ಸಿಬ್ಬಂದಿ ವರ್ಗದಲ್ಲಿ ಶೇಕಡಾ ಇಪ್ಪತ್ತು ಭಾಗ ಭಾರತೀಯರೇ ಅಂತೆ.

ಕಡಲೆ ಮೇಲಿನ ಅಧಿಕಾರ ಆಸ್ಟ್ರೇಲಿಯಾಕ್ಕೆ !

ಆಸ್ಟ್ರೇಲಿಯಾದ ಎರಡು ಖಾಸಗಿ ಕಂಪೆನಿಗಳು 'ಸೋನಾ' ಮತ್ತು 'ಹೀರಾ' ಎಂಬ ಹೆಸರಿನ ಎರಡು ಕಡಲೆ (Chickpea) ತಳಿಗಳಿಗೆ ತನ್ನ ಪೇಟೆಂಟ್ ಅಧಿಕಾರವನ್ನು ಕೇಳಿದೆ. ಹಾಗೊಂದು ವೇಳೆ ಅದಕ್ಕೆ ಅಂತರರಾಷ್ಟ್ರೀಯ ಪೇಟೆಂಟ್ ಸಿಕ್ಕಲ್ಲಿ ಇಪ್ಪತ್ತು ವರ್ಷಗಳ ಕಾಲ ಈ ತಳಿಗಳ ಬೀಜ ಉತ್ಪಾದನಾ ಹಕ್ಕು ಅದಕ್ಕೆ ಮಾತ್ರ ಮೀಸಲು. ಪ್ರತಿ ಸಲ ರೈತ ಆ ಕಂಪೆನಿಗಳಿಂದ ಬೀಜ ಕೊಳ್ಳಬೇಕಾಗುತ್ತದೆ.

ವಾಸ್ತವಿಕವಾಗಿ ಈ ಎರಡೂ ತಳಿಗಳು ಮೂಲತಃ ಭಾರತ ಮತ್ತು ಇರಾನ್ ದೇಶದವುಗಳು. ಅಂತರರಾಷ್ಟ್ರೀಯ ಸಂಶೋಧನಾ ಸಂಸ್ಥೆ 'ಇಕ್ರಿಸಾಟ್' (International Crop Research Institute for Semi Arid Tropics) ಈ ತಳಿಗಳನ್ನು ರೈತರ ಹೊಲಗಳಿಂದ ಸಂಗ್ರಹಿಸಿ ಸಂರಕ್ಷಣೆ ಮಾಡಿತ್ತು. ಆಸ್ಟ್ರೇಲಿಯಾದ ಖಾಸಗಿ ಸಂಸ್ಥೆಗಳು ತನ್ನ ಸಂಶೋಧನೆಗಾಗಿ ಪಡೆದ ಕೆಲವು ತಳಿಗಳಲ್ಲಿ ಈ ಎರಡು ತಳಿಗಳೂ ಸೇರಿದ್ದವು.

ಈ ರೀತಿ ಸಂಗ್ರಹಿಸಿ, ಸಂರಕ್ಷಿಸಿದ ತಳಿಗಳನ್ನು ಬೇರೆಯವರಿಗೆ ಕೊಡುವಾಗ ಕೆಲವು ಶರತ್ತುಗಳನ್ನು ಹಾಕುವ ಅಧಿಕಾರದ (Materials transfer agreement) ಆಧಾರದಿಂದ ಆಸ್ಟ್ರೇಲಿಯಾದ ಖಾಸಗಿ ಸಂಸ್ಥೆಗಳು ಪೇಟೆಂಟ್ ಪಡೆಯುವುದನ್ನು ಇಕ್ರಿಸಾಟ್ ಪ್ರಶ್ನಿಸಿದೆ

ಕೃಪೆ : ಇಂಡಿಯನ್ ಎಕ್ಸ್‌ಪ್ರೆಸ್, 10.1.98.

ಬಾಸುಮತಿ ಅಕ್ಕಿ ಯಾರಿಗೆ ಸೇರಿದ್ದು ?

ಅಮೇರಿಕಾದ ಖಾಸಗಿ ಕಂಪೆನಿಯೊಂದು 'ಬಾಸುಮತಿ' ಎನ್ನುವ ಹೆಸರಿನ ಅಕ್ಕಿ ತಳಿಯನ್ನು ಬಿಡುಗಡೆ ಮಾಡಿ ಅದರ ಮೇಲೆ ತನ್ನ ಪೇಟೆಂಟ್ ಹಕ್ಕನ್ನು ಸ್ಥಾಪಿಸಲು ಹೊರಟಿದೆ. ಇಲ್ಲ, ತಾನು ಹೇಳಿದ್ದು ಬಾಸುಮತಿ ಅಲ್ಲ 'ಟೆಕ್ಸ್‌ಮತಿ' ಎಂದು ಹೇಳಿಕೆ ಹೊರಡುತ್ತದೆ. ನಿಮ್ಮಲ್ಲಿ ಮಾತ್ರವಲ್ಲ ನಮ್ಮಲ್ಲೂ ಅನೇಕ ಪರಿಮಳಭರಿತ ಅಕ್ಕಿ ತಳಿಗಳಿವೆ ಎಂದು ಹೇಳುತ್ತದೆ. ಹಾಗಾದರೆ, ಈ ಹೆಸರಲ್ಲೇಕೆ ಇಷ್ಟು ಗೊಂದಲ?

ಜಗತ್ತಿನಲ್ಲಿ ಪರಿಮಳಭರಿತ ಅನೇಕ ತಳಿಗಳಿದ್ದರೂ, 'ಬಾಸುಮತಿ' ಅಕ್ಕಿಯ ವೈಶಿಷ್ಟ್ಯವೇ ಶ್ರೇಷ್ಠ. ಧಾನ್ಯ ಮತ್ತು ಕಾಳುಗಳನ್ನು ಆಮದು ಮಾಡಿಕೊಳ್ಳುವ ಇಂಗ್ಲೆಂಡಿನ ಅತ್ಯಂತ ದೊಡ್ಡ ವ್ಯಾಪಾರಸ್ಥರ ಸಂಘಟನೆ 'ಬಾಸುಮತಿ' ಅಕ್ಕಿಗೆ ಕೆಲವು ನಿರ್ದಿಷ್ಟ ಗುಣಮಟ್ಟವನ್ನು ಸಿದ್ಧಪಡಿಸಿದೆ. ಅದರ ಪ್ರಕಾರ ಉದ್ದ ಕಾಳಿನ, ಪರಿಮಳಭರಿತ ಭಾರತ ಅಥವಾ ಪಾಕಿಸ್ತಾನದಲ್ಲಿ ಬೆಳೆದ ಅಕ್ಕಿಗೆ ಮಾತ್ರ ಈ 'ಬಾಸುಮತಿ' ಹೆಸರು. ಬಾಸುಮತಿ ಅಕ್ಕಿಯನ್ನು ಅತ್ಯಧಿಕ ಪ್ರಮಾಣದಲ್ಲಿ ಬಳಸುವ ಹಾಗೂ ಆಮದು ಮಾಡಿಕೊಳ್ಳುವ ರಾಷ್ಟ್ರವೆಂದರೆ ಸೌದಿ ಅರೇಬಿಯಾ. ಆ ರಾಷ್ಟ್ರ ಕೂಡಾ ಭಾರತ ಮತ್ತು ಪಾಕಿಸ್ತಾನದಲ್ಲಿ ಬೆಳೆದ ಅಕ್ಕಿಯನ್ನಲ್ಲದೆ, ಅಮೇರಿಕಾ ಅಥವಾ ಥೈಲ್ಯಾಂಡಿನಿಂದ ಬರುವ ಉದ್ದಕಾಳಿನ, ಪರಿಮಳದ ಅಕ್ಕಿಯನ್ನು 'ಬಾಸುಮತಿ' ಎಂದು ಒಪ್ಪಲು ಸಿದ್ಧರಿಲ್ಲ. ಬಾಸುಮತಿಯಲ್ಲದೆ ಬೇರೆ ಅಕ್ಕಿ ಅವರಿಗೆ ಬೇಡ. ಈ ಮಾರುಕಟ್ಟೆಗಳನ್ನು ಹೇಗಾದರು ಕಬಳಿಸುವ ಯತ್ನ ಅಮೆರಿಕಾ ಕಂಪೆನಿಗಳಿಗೆ.

ಅಂತರರಾಷ್ಟ್ರೀಯ ವಾಣಿಜ್ಯಕ್ಕೆ ಸಂಬಂಧಿಸಿದ ಬೌದ್ಧಿಕ ಸಾಮ್ಯದ ಹಕ್ಕು(Trade related Intellectual Property rights = TRIPS) ಗಳ ನಿಯಮಾವಳಿಯ ಪ್ರಕಾರ ಪ್ರಾಂತ್ಯದ ಹೆಸರನ್ನು, ಪ್ರಾದೇಶಿಕ ಹೆಸರನ್ನು ಆಯಾ ಪ್ರದೇಶದವರು ಮಾತ್ರ ಉಪಯೋಗಿಸಲು ಸಾಧ್ಯ.

ಫ್ರಾನ್ಸನ 'ಷಾಂಪೇನ್' ಪ್ರಾಂತ್ಯದಲ್ಲಿ ಮಾಡಿದ 'ವೈನ್' ಗಷ್ಟೇ 'ಷಾಂಪೇನ್' ಹೆಸರು. ಅದೇ ವಿಧಾನದಲ್ಲಿ ಬೇರೆಲ್ಲಿ ವೈನ್ ಮಾಡಿದರೂ ಬೇರಾರೂ ಷಾಂಪೇನ್ ಹೆಸರು ಬಳಸುವಂತಿಲ್ಲ. ಸ್ಕಾಟ್ಲೆಂಡಿನಲ್ಲಿ ತಯಾರಿಸುವ 'ವಿಸ್ಕಿ' ಗಷ್ಟೇ 'ಸ್ಕಾಚ್' ಹೆಸರು. ಅದೇ ರೀತಿ ನಮ್ಮಲ್ಲಿ ಬೆಳೆದ 'ಬಾಸುಮತಿ' ಅಕ್ಕಿಯಲ್ಲದೇ ಬೇರೆ ರಾಷ್ಟ್ರಗಳಲ್ಲಿನ ತಳಿಗಳಿಗೆ 'ಬಾಸುಮತಿ' ಎಂಬ ಹೆಸರು ಪೇಟೆಂಟ್ ಮಾಡಕೂಡದು. ಇದು ಅಂತಿಮವಾಗಿ ಹೊರ ಮೂಡಿದ ತೀರ್ಮಾನ.

ಕೃಪೆ : ಜನತಾ, 22.3.1998

'ಹಿತ್ತಲಗಿಡ'ದ ಅಜೀವ ಸದಸ್ಯರು

1. ಗ್ರಂಥಾಲಯ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು.
2. The Ford Foundation well project, UAS, Bangalore
3. ಶ್ರೀ ವಾರಣಾಶಿ ಕೃಷ್ಣಮೂರ್ತಿ
4. ಶ್ರೀ ತಂಗಳೇಸರ ಸುಬ್ರಹ್ಮಣ್ಯ
5. ಶ್ರೀ ಕೆ.ಎಸ್. ಪ್ರಶಾಂತ
6. ಶ್ರೀ ಎಸ್.ಎಂ. ರವಿದಾಸ್ ಹೆಬ್ಬಾರ್
7. ಶ್ರೀ ಪ್ರಭು ವಿ. ಕೆಂಚನಗೌಡ
8. ಶ್ರೀ ವಿ.ಪಿ. ಹೆಗ್ಡೆ, ಹರಿಹಳ್ಳಿ
9. ಶ್ರೀ ಗುರುಲಿಂಗ ಚ. ಮಸಳಿ

ಪ್ರತಿಕ್ರಿಯೆ

ಸಹೋದರ ಪತ್ರಿಕೆಗಳ ನಡುವೆ

ಧಾನ್ಯ ಸಂರಕ್ಷಣೆ ಬಗ್ಗೆ ಕಳೆದ ಸಂಚಿಕೆಯಲ್ಲಿ ಪ್ರಕಟಿಸಲಾಗಿತ್ತು. ಕೋಲಾರದ ರೈತರು ತೊಗರಿ ಮತ್ತು ಅವರೆಕಾಳು ಬೀಜವನ್ನು ಹೊಂಗೆ ಮತ್ತು ಬೇವಿನ ಎಣ್ಣೆ ಲೇಪಿಸಿ ಶೇಖರಿಸಿಡುತ್ತಾರೆ ಎಂಬ ವಾಸುದೇವ, ಅದಮಾರು ಇವರ ಮಾಹಿತಿಯನ್ನು ಪುಷ್ಟೀಕರಿಸುವ ಮಾಹಿತಿ ಫುಟ್‌ಸ್ಟೆಪ್ ಎಂಬ ಇಂಗ್ಲೆಂಡ್ ಮೂಲದ ಪತ್ರಿಕೆಯಲ್ಲಿ ಪ್ರಕಟವಾಗಿದೆ ಎಂದು ಅಡಿಕೆ ಪತ್ರಿಕೆ ವರದಿ ಮಾಡಿದೆ.

ಫುಟ್‌ಸ್ಟೆಪ್ ಪತ್ರಿಕೆಯ ಮಾಹಿತಿಯ ಪ್ರಕಾರ

- ಬೀಜಗಳಿಗೆ ಖಾದ್ಯ ತೈಲ ಲೇಪಿಸುವುದರಿಂದ ಕೀಟಗಳ ಉಸಿರಾಟದಲ್ಲಿ ವ್ಯತ್ಯಯ ಉಂಟುಮಾಡುತ್ತದೆ.
- ಈ ರೀತಿ ಉಪಚರಿಸಿದ ಬೀಜಗಳ ಮೊಳೆಯುವಿಕೆಯಲ್ಲಿ ನ್ಯೂನತೆ ಕಂಡುಬರುವುದಿಲ್ಲ.
- ಹನ್ನೆರಡು ದಿನಗಳ ಬಳಿಕ ಇನ್ನೊಮ್ಮೆ ಉಪಚರಿಸಿದರೆ ಉಳಿದಿರುವ ಕೀಟ ಮೊಟ್ಟೆಗಳು ನಾಶವಾಗುತ್ತದೆ.
- ಕ್ಯಾಮರೊನ್ ದೇಶದಲ್ಲಿ ಅಲಸಂದೆ ಬೀಜವನ್ನು ಸಮಾನ ಪ್ರಮಾಣದ ಬೂದಿ ಬೆರೆಸಿ ಶೇಖರಿಸಿಡುತ್ತಾರೆ. ಪಾತ್ರೆ ತುಂಬಿದ ಮೇಲೆ ಮೇಲ್ಪದಿಯಲ್ಲಿ ಮೂರು ಸೆಂ.ಮೀ. ದಪ್ಪಕ್ಕೆ ಬೂದಿ ಹರಡುತ್ತಾರೆ.
- ರಂಧ್ರ ಕೊರೆಯಲು ಅನುಕೂಲ ವಾಗುವಂತೆ ಬೀಜಗಳ ನಡುವೆ ಹುಳು ಒಂದು ನಿರ್ದಿಷ್ಟ ಭಂಗಿಯಲ್ಲಿ ನೆಲೆಯಾಗುತ್ತದೆ. ಧಾನ್ಯ ತುಂಬಿದ ಗೋಣಿಯನ್ನು ಪ್ರತಿದಿನ ಮಗುಚಿ ಇಟ್ಟರೆ ಹುಳದ ಭಂಗಿ ತಲೆಕೆಳಗಾಗಿ ತೊಂದರೆಗೀಡಾಗುತ್ತದೆ. ಕೆಲವು ದಿನ ಹೀಗೆ ಮಾಡಿದಾಗ ಹುಳುಗಳು ಹೊಟ್ಟೆಗಿಲ್ಲದೆ ಸಾಯುತ್ತವೆ ಅಥವಾ ಜಜ್ಜಿ ಸಾಯುತ್ತವೆ.

ಮೂಲ : ಅಡಿಕೆ ಪತ್ರಿಕೆ , ಏಪ್ರಿಲ್ 1998

ಶ್ರೀಯುತರೇ,

ನಾನು ನಿಮ್ಮ ಹಿತ್ತಲಗಿಡದ ಚಂದಾದಾರನಾಗಿ ಅದರ ಪ್ರಯೋಜನ ಪಡೆದಿರುತ್ತೇನೆ. ನನಗೆ ವ್ಯವಸಾಯ, ಹಾಗೂ ತೋಟಗಾರಿಕೆ ಬಗ್ಗೆ ತುಂಬಾ ಆಸಕ್ತಿ ಇರುವುದು. ಆದರೆ ನನಗೀಗ ಇಳಿ ವಯಸ್ಸಾಗಿದ್ದು ಮಕ್ಕಳುಗಳಿಗೆ ಅಷ್ಟಾಗಿ ಆಸಕ್ತಿ ಇಲ್ಲದಿರುವುದರಿಂದ ವ್ಯವಸಾಯ ಮಾಡುವುದೇ ಕಷ್ಟವಾಗಿರುತ್ತದೆ. ಸುತರಾಂ ಕೂಲಿ ಜನಗಳು ಸಿಗುತ್ತಿಲ್ಲ. ಹೀಗಾಗಿ ನನ್ನ ವ್ಯವಸಾಯ ಕುಂಠಿತಗೊಂಡಿರುತ್ತೆ. ಐವತ್ತು ಎಕರೆಯಷ್ಟು ಭೂಮಿಯಿದ್ದೂ ಪ್ರಯೋಜನವಿಲ್ಲ. ತುಂಬಾ ವ್ಯಥೆಯಾಗುತ್ತದೆ. ತಿಳಿಸಲು ಅಷ್ಟೇ ಸಂಕೋಚವಾಗುತ್ತದೆ. ಯತ್ನವಿಲ್ಲ. ಪ್ರಯುಕ್ತ ತಾವು ಇನ್ನು ಮುಂದೆ ನಿಮ್ಮ ಹಿತ್ತಲಗಿಡ ಪತ್ರಿಕೆ ಕಳುಹಿಸುವುದನ್ನು ದಯವಿಟ್ಟು ನಿಲ್ಲಿಸಿಬಿಡಿ. ವಿಷಾದಿಸುತ್ತೇನೆ

ಇತಿ ವಂದನೆಗಳು
(ಓರ್ವ ನೊಂದ ರೈತರು)

[ನಿಮ್ಮ ವ್ಯಥೆಯನ್ನು ಪತ್ರಿಕೆ ಅರ್ಥ ಮಾಡಿಕೊಳ್ಳುತ್ತದೆ. ಹಿತ್ತಲಗಿಡದ ಮೂಲಕ ನಿಮ್ಮಂತಹ ನೊಂದ ರೈತರಿಗೆ ಭರವಸೆ ನೀಡಲು ಪ್ರಯತ್ನಿಸೋಣ. ದಯಮಾಡಿ ಪತ್ರಿಕೆ ಸದಸ್ಯತ್ವ ನಿರಾಕರಿಸಬೇಡಿ ಸಂ.]

ಶ್ರೀಯುತ ಪ್ರಕಾಶ್‌ಕಮ್ಮರಡಿಯವರಲ್ಲಿ ವಿನಂತಿ

ತಾ.28.12.97ರಂದು ಹಾಸನ ಜಿಲ್ಲಾ ಪರಿಸರ ಪ್ರಿಯ ಕೃಷಿಕರ ಮಾಸಿಕ ಸಭೆಯಲ್ಲಿ ಭಾಗವಹಿಸಿದ ಓರ್ವ ಬೆಳೆಗಾರರು ನಾಟಿ ವಿದ್ಯೆಯ ಬಗ್ಗೆ ಸಕಲೇಶಪುರದ ಬೆಳೆಗಾರರ ಸಂಘದಲ್ಲಿ ಒಂದು ವಿಚಾರಗೋಷ್ಠಿ ನಡೆಸಲು ಇಚ್ಛೆ ವ್ಯಕ್ತಪಡಿಸಿದ್ದಾರೆ. ಹಿತ್ತಲಗಿಡ ದಿಂದ ನಡೆಸಲು ಸಾಧ್ಯವೇ? ವಿಚಾರಗೋಷ್ಠಿಯಲ್ಲಿ ಮಾತನಾಡಲು ಮಹಾಪರಿಣಿತರು ಬೇಕಾಗಿದ್ದಾರೆ. ಕಾರ್ಯಕ್ರಮ ಕುರಿತು ಎಲ್ಲಾ ವ್ಯವಸ್ಥೆ ಮಾಡಲು ತಯಾರಿದ್ದಾರೆ. ಫೆಬ್ರುವರಿ-ಏಪ್ರಿಲ್ ತಿಂಗಳ ಎಂದಾದರೂ ರವಿವಾರ ಏರ್ಪಾಡು ಮಾಡಬಹುದು. ತಾವು ಬಂದು ಅಥವಾ ತಮ್ಮ ಬಳಗದವರು ಬಂದು ನಡೆಸಿಕೊಡಬೇಕೆಂದು ನನ್ನ ಪ್ರಸ್ತಾಪವು.

ಶ್ರೀ ವಾಲ್ಮೀಕಿ ಶ್ರೀನಿವಾಸ ಅಯ್ಯಂಗಾರ್,
ಅಗ್ನಿಗ್ರಾಮ, ಸಕಲೇಶಪುರ ತಾ. 577 119

[*ತಮ್ಮ ಸಲಹೆಗೆ ತುಂಬಾ ಧನ್ಯವಾದಗಳು ಹಿತ್ತಲಗಿಡ ಈ ಸಭೆ ನಡೆಸಲು ತಾವು ತಿಳಿಸಿದ ರೈತರೊಡನೆ ಸಂಪರ್ಕಿಸುವುದು ಸಂ.*]

ರೈತ ರೈತರ ನಡುವೆ

ಗೆ,
ಶ್ರೀ ಬಿ.ಜಿ. ಕಾಡಪ್ಪ, ಬೇಗಾನೆ

ಶ್ರೀ ನಾರಾಯಣ ರೆಡ್ಡಿಯವರ ಕಾಂಪೋಸ್ಟ್ ತಯಾರಿಕೆ ಪ್ರಮಾಣ ಕುರಿತು ಸ್ಪಷ್ಟೀಕರಣ ಕೋರಿ ಬರೆದ ಪತ್ರಕ್ಕೆ ರೆಡ್ಡಿಯವರಿಂದ ಪಡೆದ ಸ್ಪಷ್ಟ ಮಾಹಿತಿ ಈ ರೀತಿಯಿದೆ. ಮರಳೇನಹಳ್ಳಿಯಲ್ಲಿ 7.5' ಉದ್ದ x 6' ಅಗಲ x 3' ಎತ್ತರವಿರುವ ಗುಂಡಿಯ ಒಟ್ಟು ವಿಸ್ತೀರ್ಣ 135 ಘನ ಅಡಿ. ಈ ಗುಂಡಿಯಿಂದ ಪ್ರತಿ ಮೂರು ತಿಂಗಳಿಗೆ 5.5 ಟನ್ ಕಾಂಪೋಸ್ಟ್ ಸಿಗುತ್ತಿದೆ.

ವರ್ತೂರಿನಲ್ಲಿ 40' ಉದ್ದ x 6' ಅಗಲ x 3' ಎತ್ತರವಿರುವ ಗುಂಡಿಯ ಒಟ್ಟು ವಿಸ್ತೀರ್ಣ 720 ಘನ ಅಡಿ. ಇದರಿಂದ ಪ್ರತಿ ಮೂರು ತಿಂಗಳಿಗೆ ಇಪ್ಪತ್ತಾರು ಟನ್ ಉತ್ಕೃಷ್ಟ ಕಾಂಪೋಸ್ಟ್ ಗೊಬ್ಬರ ತಯಾರಾಗುತ್ತದೆ. - ಸಂ.

ಗೆ,
ಬಿ.ಎಸ್. ದಿನೇಶ್, ಬಾವಿಕೈಸರು

ಅದಾಗಿ ತಾವು ಸಾವಯವ ಕೃಷಿಯಲ್ಲಿ ಕೆಲವು ಹಳೆಯ ನಾಟಿ ಭತ್ತದ ತಳಿಗಳನ್ನು ಬೆಳೆಯುತ್ತಿರುವ ವಿಚಾರ ಹಿತ್ತಲಗಿಡದಿಂದ ತಿಳಿಯಿತು. ತಾವು ಬೆಳೆಯುವುತ್ತಿರುವ ರತ್ನಚೂಡಿ ಭತ್ತ ಬೆಳೆಯಬೇಕೆಂಬ ಹಂಬಲವಿದೆ. ದಯವಿಟ್ಟು ಸ್ವಲ್ಪ ಬೀಜದ ಭತ್ತ ಕೊಡಲಾಗುವುದೇ?

ತಮ್ಮ ವಿಶ್ವಾಸಿ,
ಎ. ಶಣ್ಮುಖಪ್ಪ, ಶಿಕಾರಿಪುರ

[*ತಾವು ದಯಮಾಡಿ ಮೇ 9ರಂದು ದಿನೇಶ್ ಊರಿನಲ್ಲಿ ನಡೆಸುವ ಹಿತ್ತಲಗಿಡ ಬಳಗದ ಕಾರ್ಯಾಗಾರದಲ್ಲಿ ಭಾಗವಹಿಸಿರಿ ಸಂ.*]

ದಿನಾಂಕ 6.4.98 ರಂದು ಬೆಂಗಳೂರಿನ ಗ್ರೀನ್ ಫೌಂಡೇಶನ್ ಸಂಸ್ಥೆ ತಮಿಳುನಾಡಿನ 'ತಳ್ಳಿ'ಯಲ್ಲಿ ಒಂದು ದಿನದ ಬೀಜಮೇಳವನ್ನು ಏರ್ಪಡಿಸಿತ್ತು. ಕಾರ್ಯಕ್ರಮ 'ಹೊನ್ನೇರು' ಎಂಬ ಸಾಂಪ್ರದಾಯಿಕ ನೇಗಿಲ ಪೂಜೆಯೊಂದಿಗೆ ಪ್ರಾರಂಭಗೊಂಡಿತು. ಶ್ರೀ ಜಿ. ಕೃಷ್ಣ ಪ್ರಸಾದ್ ಸ್ವಾಗತಿಸಿದರು. ಯಳವತ್ತಿಯ ಶ್ರೀ ಡಿ.ಡಿ. ಭರಮಗೌಡರು ಜೀವವೈವಿಧ್ಯತೆ, ಸಾವಯವ ಕೃಷಿ ಬಗ್ಗೆ ಉಪಯುಕ್ತ ಮಾಹಿತಿ ನೀಡಿದರು. ಮಧ್ಯಾಹ್ನ ಹೈಬ್ರಿಡ್ ಬೀಜಗಳಿಂದ ನಮ್ಮ ರೈತರಿಗೆ ಅನಾನುಕೂಲಗಳೇನು? ನಾವಿಂದು ನಾಟಿ ಬೀಜಗಳನ್ನು ಮರೆತಿದ್ದೇವೇಕೆ ಎಂಬ ಬಗ್ಗೆ ಮನಮುಟ್ಟುವಂತೆ ಸಣ್ಣ ನಾಟಕದ ರೂಪದಲ್ಲಿ ಪ್ರದರ್ಶಿಸಿದರು. ಸಂಸ್ಥೆಯ ನಿರ್ದೇಶಕಿ ಡಾ|| ವನಜಾ ರಾಮಪ್ರಸಾದ್ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಹಲವಾರು ಬೆಳೆಗಳ ನೂರಾರು ನಾಟಿ ಬೀಜಗಳ ತಳಿಗಳನ್ನು ಪ್ರದರ್ಶನಕ್ಕಿಡಲಾಗಿತ್ತು.

ಏಪ್ರಿಲ್ 14, 1998 ರಂದು ಮೈಸೂರು ತಾಲೂಕಿನ ಮರಸೆ ಗ್ರಾಮದಲ್ಲಿ ಆರನೇ "ಜೀವಧಾರಕ ಕೃಷಿ ಕೂಟ"ದ ಸಭೆ ಏರ್ಪಾಡಾಗಿತ್ತು. ಅನೇಕ ಸಾವಯವ ಕೃಷಿಯಲ್ಲಿ ತೊಡಗಿರುವ ಹಾಗೂ ತೊಡಗಲು ಆಸಕ್ತಿಯಿರುವ ರೈತನೊಡನೆ ಮೈಸೂರಿನ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಕೃಷಿ ಉಪನ್ಯಾಸಕರಾದ ಡಾ ವಿಷಕಂಠ, ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ ಎಲ್.ವಸಂತರವರನ್ನು ಆಹ್ವಾನಿಸ ಲಾಗಿತ್ತು. ಈ ಸಭೆ ಕೆಳಕಂಡ ವಿಷಯಗಳ ಕುರಿತು, ಚರ್ಚಿಸಲು ಉದ್ದೇಶಿಸಿತ್ತು.

- ಪರಿಸರದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮವಿಲ್ಲದ ಸಾವಯವ ಕೃಷಿಯನ್ನು ಕೃಷಿಕರು ಸ್ವೀಕರಿಸುವರೇ?
- ಶುದ್ಧ ಸತ್ವಯುತ ಆಹಾರದ ಮಹತ್ವವನ್ನು ಕೃಷಿಕ ಹಾಗೂ ಗ್ರಾಹಕ ಅರಿಯುತ್ತಾರೆಯೇ?
- ವಿದೇಶಿ ಸಂಪನ್ಮೂಲಗಳ ಮೂಲಕ ದೊರೆಯುತ್ತಿರುವ ರಾಸಾಯನಿಕ ಗೊಬ್ಬರದ ಅನಿಶ್ಚಿತತೆ ತಿಳಿದುಕೊಳ್ಳುತ್ತಾರೆಯೆ?
- ಕೃಷಿ ಸಂಪನ್ಮೂಲಗಳ ಕ್ರೋಡೀಕರಣ ಮತ್ತು ಪುನರ್ ಬಳಕೆ ಸಾಧ್ಯವೆ?
- ಸಾಂಪ್ರದಾಯಿಕ ಬೇಸಾಯ ಪದ್ಧತಿ ಪರಿಶೀಲನೆ ಅಳವಡಿಸಬಹುದೇ?
- ಮಾರುಕಟ್ಟೆ ಏರುಪೇರಾದಾಗ ರೈತರ ಪರಿಸ್ಥಿತಿ ಏನು?
- ಇದು ನಿರಂತರ ಮತ್ತು ದೃಢತೆ ಸಾಧಿಸಿ ಮುನ್ನುಗ್ಗ ಬಲ್ಲದೆ?
- ಏರುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸಬಲ್ಲದೆ?

ದಿನಾಂಕ 18.2.98 ರಂದು ತೀರ್ಥಹಳ್ಳಿಯಲ್ಲಿ ಮಲೆನಾಡು ಜಾಗೃತ ಸಮುದಾಯ ಹಾಗೂ ಬಳಕೆದಾರರ ವೇದಿಕೆಯ ಆಶ್ರಯದಲ್ಲಿ ಎಂ.ಪಿ.ಎಂ.ನವರ ಕೈಗಾರಿಕಾ ನೆಡುತೋಪಿನ ವಿಷಯವಾಗಿ ಜನಾಭಿಪ್ರಾಯದ ಸಭೆ ನಡೆಯಿತು.

ಮೈಸೂರು ಪೇಪರ್ ಮಿಲ್ಸ್‌ನವರು ತಮ್ಮ ಕೈಗಾರಿಕಾ ಕಚ್ಚಾವಸ್ತುಗಳನ್ನು ಪಡೆಯುವುದಕ್ಕಾಗಿ ಸಾವಿರಾರು ಎಕರೆ ಅರಣ್ಯ ಪ್ರದೇಶದಲ್ಲಿ, ಸೊಪ್ಪಿನಬೆಟ್ಟ, ಗೋಮಾಳಗಳಲ್ಲಿ ಅಕೇಶಿಯಾ, ಪೈನಸ್ ಕೃಷಿ ಮಾಡುತ್ತಿರುವ ವಿಚಾರವಾಗಿ ಜನಾಂದೋಲನದ ನಾಯಕರುಗಳಾದ ಧಾರವಾಡದ ಎಸ್.ಆರ್. ಹೀರೇಮಠ್, ಡಾ ಎಸ್.ಎಲ್. ಪವಾರ್ ಮುಂತಾದವರು ಮಾತನಾಡಿದರು.

ಎಂ.ಪಿ.ಎಂ. ನವರ ನೆಡುತೋಪುಗಳಿಂದಾಗಿ ಸಹಜ ಅರಣ್ಯ, ಔಷಧೀಯ ಸಸ್ಯಗಳು, ಹಣ್ಣಿನ ಮತ್ತು ನಾಟದ ಮರಗಳು ನಾಶವಾಗುವುದಾಗಿ ಜನಾಭಿಪ್ರಾಯ ಮೂಡಿಬಂತು. ಒಟ್ಟಾರೆ, ಸಭೆಯಲ್ಲಿ ಈ ಕೆಳಗಿನ ತೀರ್ಮಾನ ಕೈಗೊಳ್ಳಲಾಯಿತು.

1. 'ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ' ಎಂಬ ಸ್ಥಳೀಯ ಜನರ ಭಾಗವಹಿಸುವಿಕೆ ಮುಖ್ಯವಾಗಿರುವ ಸರ್ಕಾರದ ಯೋಜನೆ ಆದಷ್ಟು ಬೇಗನೆ ಅನುಷ್ಠಾನಕ್ಕೆ ತರುವಂತೆ ಸರ್ಕಾರವನ್ನು ಒತ್ತಾಯಿಸಬೇಕು.
2. ಎಲ್ಲಾ ಹಳ್ಳಿಗಳಲ್ಲಿ ಜಂಟಿ ಅರಣ್ಯ ಸಮಿತಿ ರಚನೆಯಾಗಬೇಕು.
3. ಎಂ.ಪಿ.ಎಂ.ನವರು ಅಕೇಶಿಯಾ ಸಸಿಗಳ ಜೊತೆಗೆ ಸ್ಥಳೀಯ ಸಸ್ಯಗಳನ್ನು ನೆಡತಕ್ಕದ್ದು.
4. ಗೋಮಾಳ ಮತ್ತು ಸೊಪ್ಪಿನ ಬೆಟ್ಟದಲ್ಲಿ ಗಿಡ ನೆಡುವ ಅಥವಾ ಕಡಿಯುವ ಅಧಿಕಾರವನ್ನು ಎಂ.ಪಿ.ಎಂ.ನವರಿಗೆ ಕೊಡಬಾರದು.

ಮಾನವನ ಉಳಿವಿಕೆಗಾಗಿ ಔಷಧಿ ಸಸ್ಯಗಳು

ಅಂತರ ರಾಷ್ಟ್ರೀಯ ಸಮ್ಮೇಳನ, 16-19 ಫೆಬ್ರುವರಿ 1998 ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು

FRLHT ಯ ಡಾ. ದರ್ಶನ್ ಶಂಕರ್‌ರವರು ಸಂಘಟಿಸಿರುವ ಈ ಮೇಲಿನ ಸಮ್ಮೇಳನ ಚರ್ಚೆ ವಿಚಾರಗಳು, ಭಾಗವಹಿಸಿದ ಗಣ್ಯರು, ಸಭೆಯ ಶಿಸ್ತು ಮಿಗಿಲಾಗಿ ವಿಚಾರದ ಮೇಲಿನ ಶ್ರದ್ಧೆ ಹಾಗೂ ಪ್ರಾಮಾಣಿಕತೆ ದೃಷ್ಟಿಗಳಿಂದ ಉತ್ತಮ ಮಟ್ಟದಲ್ಲಿತ್ತೆನ್ನಬಹುದು. ಔಷಧಿ ಸಸ್ಯಗಳ ಸಂರಕ್ಷಣೆ, ಇದರ ಉಪಯೋಗ ಮತ್ತು ಲಾಭಾಂಶಗಳ ನ್ಯಾಯಯುತ ಹಂಚಿಕೆ, ಈ ನಿಟ್ಟಿನಲ್ಲಿ ಬೌದ್ಧಿಕ ಸನ್ನದ್ಧಿನ ಹಕ್ಕಿನ ರೂಪುರೇಷೆಗಳು, ಉದ್ಯಮದ ಪಾತ್ರ, ಅಗತ್ಯ ನೀತಿ ನಿಲುವುಗಳು ಇತ್ಯಾದಿ ವಿಚಾರಗಳ ಬಗ್ಗೆ ಈ ಸಮ್ಮೇಳನದಲ್ಲಿ ಗಂಭೀರ ಚರ್ಚೆ ನಡೆದಿತ್ತು. ವಿಶ್ವದಾದ್ಯಂತದಿಂದ ಬಂದಿದ್ದ ಗಣ್ಯ ವ್ಯಕ್ತಿಗಳಾದ ಡಾ. ಪೀಟರ್ ರೇವನ್ ಕಮಲ್‌ಜಿತ್‌ಭಾವ, ಗೆರಾಲ್ಡ್ ಬಡ್‌ಕೆರ್, ಡೆರೆಲ್ ಪೋಸಿ, ವಂದನಾಶಿವ, ಮಾಧವ ಗಾಡ್ಗಿಳ್, ಅನಿಲ್ ಗುಪ್ತ, ಅಶಿಷ್ ಕೋಥಾರಿ ಇತರೇ ಮುಂತಾದವರು ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಿ, ಚರ್ಚೆಗೆ ಅವಕಾಶ ಕಲ್ಪಿಸಿಕೊಟ್ಟರ. ವ್ಯಕ್ತಿಗಳಿಗೆ ತಮ್ಮ ಇತರ ಅಭಿಪ್ರಾಯ ಮಂಡನೆಗಾಗಿ "ಮಲೋಕಾ" ಗೋಷ್ಠಿ ಒಂದಿತ್ತು. ('ಮಲೋಕ' ಅನ್ನುವುದು ದಕ್ಷಿಣ ಅಮೆರಿಕಾದ ಒಂದು ಶಬ್ದ. ಇದರ ಅರ್ಥ ವಿಚಾರದಲ್ಲಿ ಸಹಮತ ಏರ್ಪಡಿಸುವ ಸ್ಥಳ ಎಂಬುದಾಗಿ) ಕೇರಳದ ಕಾನಿ ಬುಡಕಟ್ಟು

ಜನಾಂಗದ ನಾಟಿ ವೈದ್ಯಕೀಯ ಸಸ್ಯಗಳ ಬಗೆಗಿನ ಜ್ಞಾನ ಸಂರಕ್ಷಿಸಿ ಅದರ ಲಾಭಾಂಶವನ್ನು ಅವರಿಗೇ ಹಿಂತಿರುಗಿಸಿರುವ ಕ್ರಮದ ವಿವರ, ಮಾನವ ಮೂಲದ ಜೀವಶಾಸ್ತ್ರದ ಬಗೆಗಿನ, ನೈತಿಕ ನಿಲುವುಗಳ ಬಗ್ಗೆ ಡಾ|| ಡೆರೆಲ್ ಮೋಸಿಯ ಪ್ರಬಂಧ ಮಂಡನೆ, ಡಾ|| ಮಾಧವ ಗಾಡ್ಗಿಳ್‌ರ "ಜನತಾ ಜೀವ ವೈವಿಧ್ಯ ರಿಜಿಸ್ಟರ್" ಪ್ರಯೋಗದ ಪರಿಚಯ, ಪ್ರೊ. ಅನಿಲ್ ಗುಪ್ತ ಮತ್ತು ಅಶಿಷ್ ಕೋಥರಿಯವರ ಬೌದ್ಧಿಕ ಸನ್ನದಿನ ಹಕ್ಕಿನ ಮೇಲಿನ ಚರ್ಚೆ ಜೊತೆಗೆ ಈ ಬಗ್ಗೆ ಔಷಧಿ ಕಂಪನಿಗಳ ದೃಷ್ಟಿಕೋನಗಳ ಪರಿಚಯ ಈ ಸಮ್ಮೇಳನದಲ್ಲಿ ಚರ್ಚಿಸಿದ ಪ್ರಮುಖ ವಿಚಾರ. ಈ ಔಷಧಿ ಸಸ್ಯಗಳ ಬಗೆಗಿನ ಜ್ಞಾನವನ್ನು ಕಾಪಾಡಿಕೊಂಡು ಬಂದಿರುವ ಬುಡಕಟ್ಟು ಜನಾಂಗಗಳ ಬಗೆಗಿನ ಕಾಳಜಿಯಿಂದ ಹಿಡಿದು, ನಮ್ಮ ಬದುಕಿನ ರೀತಿಯ ಬಗ್ಗೆ, ಪ್ರಕೃತಿಯ ಬಗ್ಗೆ ತಳೆಯಬೇಕಾಗಿರುವ "ಅಧ್ಯಾತ್ಮಿಕ ದೃಷ್ಟಿಕೋನ"ದ ಬಗ್ಗೆ ಈ ಸಮ್ಮೇಳನದಲ್ಲಿ ಚರ್ಚೆ ನಡೆಯಿತೆಂದರೆ ಆಶ್ಚರ್ಯ ಪಡಬೇಕಾಗುತ್ತದೆ.

ಅಂತಿಮವಾಗಿ ಈ ಔಷಧಿ ಸಸ್ಯಗಳ ಸಂರಕ್ಷಣೆ, ವಾಣಿಜ್ಯ ಮತ್ತು ಉದ್ದಿಮೆಗಳು, ಮಾನವ ಮೂಲದ ಸಸ್ಯಶಾಸ್ತ್ರ, ಪಾರಂಪರಿಕೆಗಳ ಹಕ್ಕು ಮತ್ತು ಯೋಚನೆ ಹಾಗೂ ಬದುಕಿನ ಶೈಲಿಯಲ್ಲೇ ಬದಲಾವಣೆ ಈ ವಿಚಾರಗಳ ಮೇಲೆ ಸಮಗ್ರ ಘೋಷಣೆ ನೀಡಲು ಈ ಸಮ್ಮೇಳನ ಮುಂದಾಗಿರುತ್ತದೆ.

"ಚಿಂತನೆ"ಯ ಹೊಸ ಗಾಳಿ

ಸುಮಾರು ಆರು ವರ್ಷಗಳ ಹಿಂದೆ ಬೆಂಗಳೂರಿನ ಜಿ.ಕೆ.ವಿ.ಕೆ. ಕೃಷಿ ವಿ.ವಿ. ಯಲ್ಲಿ ಆರಂಭಗೊಂಡಿದ್ದ ಪರ್ಯಾಯ ಕೃಷಿಗೆ ವಿದ್ಯಾರ್ಥಿಗಳ ವೇದಿಕೆ 'ಚಿಂತನ ಬಳಗ' ಕಳೆದೆರಡು ವರ್ಷಗಳಿಂದ ನೆನೆಗುದಿಯಲ್ಲಿತ್ತು. ಈಗ ಕ್ರಿಯಾಶೀಲ ವಿದ್ಯಾರ್ಥಿಗಳ ತಂಡವೊಂದು 'ಚಿಂತನ ಬಳಗ'ಕ್ಕೆ ಮತ್ತೆ ಜೀವ ತುಂಬುವ ಕಾರ್ಯಕ್ಕೆಗೆತ್ತಿಕೊಂಡಿದ್ದಾರೆ. ಈ ದಿಸೆಯಲ್ಲಿ ದಿನಾಂಕ 23.4.98 ರ ಗುರುವಾರ 'ಚಿಂತನ ಬಳಗ'ವು ಜಿ.ಕೆ.ವಿ.ಕೆ.ಯ ಆಸಕ್ತ ವಿದ್ಯಾರ್ಥಿಗಳನ್ನು ಒಂದೆಡೆ ಕಲೆ ಹಾಕಿ ಬಳಗದ ರೂಪುರೇಶೆಗಳನ್ನು ಮನದಟ್ಟು ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಶ್ರೀಮತಿ ಡಾ. ರಾಧಾ ಡಿ.ಕಾಳೆ, ಶ್ರೀ ಅರುಣಕುಮಾರ್ ವಿ.ಕೆ., ಹಿತ್ತಲಗಿಡದ ಸಂಪಾದಕ ಡಾ. ಟಿ.ಎನ್. ಪ್ರಕಾಶ್‌ಕಮ್ಮರಡಿಯವರು ಇವರುಗಳು ಭಾಗವಹಿಸಿ ಮಾತನಾಡಿದರು.

'ಚಿಂತನ ಬಳಗ'ದ ಉದ್ದೇಶಗಳು

- *ಕೃಷಿ ವಿದ್ಯಾರ್ಥಿಗಳಲ್ಲಿ ಸುಸ್ಥಿರ, ಸ್ವಾವಲಂಬಿ, ಸ್ವದೇಶಿ ಹಾಗೂ ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಬಗ್ಗೆ ಅರಿವು ಮೂಡಿಸುವುದು.*
- *ರೈತರು ಅನುಸರಿಸುತ್ತಿರುವ ಕೆಲವು ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಬಗ್ಗೆ ವೈಜ್ಞಾನಿಕ ಸಂಶೋಧನೆ ಕೈಗೆತ್ತಿಕೊಳ್ಳುವುದು (ಈ ಬಗ್ಗೆ ಈಗಾಗಲೇ ಹಲವು ದೇಶೀಯ ಕ್ರಮಗಳ ಬಗ್ಗೆ ಸಂಶೋಧನೆ ಪ್ರಾರಂಭವಾಗಿದೆ.)*
- *ಪರಿಸರ ಸ್ನೇಹಿ ಕೃಷಿಕರ ಜಮೀನುಗಳಿಗೆ ಭೇಟಿ ನೀಡುವುದು.*
- *ರೈತರನ್ನು ತಲಪುವಂತೆ ಸುಸ್ಥಿರ ಕೃಷಿ ಲೇಖಕರ ಬಳಗ ಎಂಬ ಹೆಸರಿನಡಿ ಲೇಖನಗಳನ್ನು ಬರೆಯುವುದು ಇತ್ಯಾದಿ.*

ಮುಂದಿನದು

'ಹಿತ್ತಲಗಿಡ' ಬಳಗದ ಕಾರ್ಯಾಗಾರ

ಹಿತ್ತಲ ಗಿಡ ಮತ್ತು ರೈತರ ನಡುವಿನ ಸಂಬಂಧ ಗಟ್ಟಿ ಮಾಡುವ ಉದ್ದೇಶದಿಂದ ದಿನಾಂಕ **9.5.98** ರ ಶನಿವಾರ ತೀರ್ಥಹಳ್ಳಿ ತಾಲೂಕು ಸರು ಗ್ರಾಮದಲ್ಲಿ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಶ್ರೀ ಎಲ್.ನಾರಾಯಣ ರೆಡ್ಡಿ, ಸೋರಹುಣಸೆ, ಬೆಂಗಳೂರು ಕೃಷಿ ವಿ.ವಿ. ಯ ಸಸ್ಯರೋಗ ತಜ್ಞರು ಪ್ರೊ. ಎಸ್.ಸಿ. ಚಂದ್ರಶೇಖರ್, ಕರ್ನಾಟಕ ರಾಜ್ಯ ರೈತ ಸಂಘದ ಪ್ರೊ. ಎಂ.ಡಿ. ನಂಜುಂಡ ಸ್ವಾಮಿ ಇವರುಗಳನ್ನು ಆಹ್ವಾನಿಸಲಾಗಿದೆ. ಇದೇ ಸಂದರ್ಭದಲ್ಲಿ ಬಾವಿಕೈಸರುವಿನ ದಿನೇಶರ ಭತ್ತದ ಬೆಳೆಗೆ ಮುಕ್ಕಡಕ ದ್ರಾವಣದ ಬಳಕೆಯ ಪ್ರಯೋಗವನ್ನು ವ್ಯವಸ್ಥಿತಗೊಳಿಸುವ ಬಗ್ಗೆ ಚರ್ಚಿಸಲಾಗುವುದು.

ಹಿತ್ತಲಗಿಡ ಮಾರಾಟ ಜಾಲ

ಸಾವಯವ ಭತ್ತ - ಸೋನಾ ಮಸ್ಸೂರಿ ಬೆಳೆಗಾರರು ಶ್ರೀಮತಿ ಶಿವಮ್ಮ, ದಮ್ಮಳ್ಳಿ, (ಶಿವಮೊಗ್ಗದ ಸಮೀಪ) ಪ್ರಮಾಣ ನಾಲ್ಕು ಎಕರೆಯಷ್ಟು. ಆಸಕ್ತರು ಡಾ. ಪ್ರಭಾಕರ ಶೆಟ್ಟಿ, ಮುಖ್ಯಸ್ಥರು, ಬೇಸಾಯ ಶಾಸ್ತ್ರ, ಕೃಷಿ ಕಾಲೇಜು, ಪಿ.ಬಿ. ನಂ.126, ನವಿಲೆ, ಶಿವಮೊಗ್ಗ 577201, ಇವರನ್ನು ಸಂಪರ್ಕಿಸಬಹುದು.

ಕಯಿಮೆ - ನಾಟಿತಳಿ ಭತ್ತ ಮತ್ತು ಅಕ್ಕಿ, ಕೆಂಪಗಿನ, ದಪ್ಪ, ಸಿಹಿಯಾದ ಅಕ್ಕಿ, ಸುಮಾರು ಎಂಟು ಕ್ವಿಂಟಾಲ್ ಈಗ ಲಭ್ಯ. ಆಸಕ್ತರು ವಾಲ್ಮೀಕಿ ಶ್ರೀನಿವಾಸ ಅಯ್ಯಂಗಾರ್, ಅಗನಿ ಗ್ರಾಮ, ಸಕಲೇಶಪುರ, ಹಾಸನ 577 119 ಇವರನ್ನು ಸಂಪರ್ಕಿಸಬಹುದು.

ಸಾವಯವ ದೊಡ್ಡ ಭೈರನೆಲ್ಲು ಭತ್ತ (ಐದು ಕ್ವಿಂಟಾಲ್‌ನಷ್ಟು) ಮತ್ತು ಸಾವಯವ ಬಾಳೆಗೆ ಪ್ರೇಮ್‌ನಾಥ್, ನಂ.167, ಮೊದಲನೇ ಅಡ್ಡರಸ್ತೆ, AECS ಬಡಾವಣೆ, ಮೊದಲನೇ ಹಂತ, ಸಂಜಯನಗರ, ಬೆಂಗಳೂರು 560 094, ಫೋನ್ ನಂ. 3415266 ಇವರನ್ನು ಸಂಪರ್ಕಿಸಬಹುದು.

ವಿ.ಸೂ. ಈ ರೀತಿಯ ನಮ್ಮ ಉತ್ಪನ್ನಗಳಿಗೆ ಹಿತ್ತಲಗಿಡದ ಮೂಲಕ ಮಾರಾಟಕ್ಕೆ ಪ್ರಯತ್ನಿಸಬೇಕಾಗಿ ವಿನಂತಿ. ಸಂ.

ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.
- ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

☞ ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ. ಸಂ.

ಪತ್ರಿಕೆ ನೊಂದಣಿ ಸಂಖ್ಯೆ 66842/96

ತೆರದ ಅಂಚೆ

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	40 ರೂ	400 ರೂ
ರೈತರು	50 ರೂ	500 ರೂ
ಇತರರು	60 ರೂ	600 ರೂ
ಸಂಸ್ಥೆಗಳು	350 ರೂ	2500 ರೂ
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. : ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್ / ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡು ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಇದನ್ನು ಸ್ಪಷ್ಟವಾಗಿ ತಿಳಿಸ ತಕ್ಕದ್ದು.

ಹಿತ್ತಲಗಿಡ ರೈತ, ವಿಜ್ಞಾನಿ, ವಿದ್ಯಾರ್ಥಿ ಸ್ವಯಂಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ವಿಳಾಸ
ಡಾ. ಟಿ.ಎನ್.ಪ್ರಕಾಶ್ ಕಮ್ಮರಡಿ, ಸಹಾಯಕ ಪ್ರಾಧ್ಯಾಪಕ
ಗೌರವ ಸಂಪಾದಕ ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ
ಬೆಂಗಳೂರು - 560 065.

ಗೆ ________________

____

____

____

Printed by Sri S. Sridhar, Published by Smt. K. Meenakshi (Owner), printed at Navbharath Enterprises, No. 10, Sirur Park B Street, Seshadripuram, Bangalore - 560 020 and Published at No. 399, 14 - B Cross, New Town Yelhanka, Bangalore - 560 064. Edited by Dr. T.N. Prakash